ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 6 ಭಾನುವಾರ 2022

ಸಂಪುಟ: 43 | ಸಂಚಿಕೆ: 199 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4


ಕಾರು ಹರಿಸಿ ನಿವೃತ್ತ ಐಬಿ ಅಧಿಕಾರಿ

ಆರ್.ಎನ್.ಕುಲಕರ್ಣಿ ಹತ್ಯೆ

- ದುರಂತ ನಡೆದ ಕ್ಷಣಕ್ಕೆ ಇದೊಂದು ಅಪರಿಚಿತ ವಾಹನದಿಂದ ಆಕಸ್ಮಿಕ ಅಪಘಾತ ಎಂದು ಹೇಳಲಾಗಿತ್ತು
- ಆದರೆ ಸ್ಥಳದಲ್ಲಿ ದೊರೆತ ಸಾಕ್ಷಿ–ಪುರಾವೆ, ಸಿಸಿ ಕ್ಯಾಮರಾ ದೃಶ್ಯಾವಳಿಗಳು ಹೇಳುತ್ತಿವೆ ಇದು ಘೋರ ಹತ್ಯೆ
- ದಿಟ್ಟ, ಪ್ರಾಮಾಣಿಕ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಕುಲಕರ್ಣಿಯವರಿಗೆ ನರಕಸದೃಶ್ಯವಾದ 'ನಿವೃತ್ತರ ಸ್ವರ್ಗ' ನಗರಿ ಮೈಸೂರು
- ಹಲವು ದಿನದಿಂದ ಹೊಂಚು ಹಾಕಿದ್ದ ಹಂತಕರು; ಕಾರಿನ ನಂಬರ್ ಪ್ಲೇಟ್ ತೆಗೆದು ಅಪಘಾತ ಕೃತ್ಯ

ಮೈಸೂರು, ನ. 5(ಆರ್‌ಕೆ)– ಇಂಟೆಲಿಜೆನ್ಸ್ ಬ್ಯೂರೋ(ಐಬಿ)ದ ನಿವೃತ್ತ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಸಾವಿನ ಪ್ರಕರಣ ಭಯಂಕರ ಟ್ವಿಸ್ಟ್ ಪಡೆದಿದೆ. ನಿನ್ನೆ (ನ. 4) ಸಂಜೆ ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ವಾಯು ವಿಹಾರಕ್ಕೆ ತೆರಳಿದ್ದ ಕುಲಕರ್ಣಿಯವರ ರಕ್ತಸಿಕ್ತ ದೇಹ ರಸ್ತೆ ಬದಿ ಪತ್ತೆಯಾಗಿತ್ತು. ಅಪರಿಚಿತ ವಾಹನ ಡಿಕ್ಕಿ ಹೊಡೆದು, ಅವರು ಸಾವನ್ನಪಿರಬಹುದು ಎಂದು ಪ್ರಾರಂಭಿಕ ಹಂತದಲ್ಲಿ ಹೇಳಲಾಗಿತ್ತು.

ಒಂದೆಡೆ ಕಾರನ್ನು ಪಾರ್ಕ್ ಮಾಡಿಕೊಂಡು ತಾವು ನಿಂತಿದ್ದಾಗ, ನೀವು ಕರೆತಂದಿರುವ ವೃದ್ಧರಿಗೆ ಯಾವುದೋ ವಾಹನ ಡಿಕ್ಕಿ ಹೊಡೆದಿದೆ ಎಂದು ವ್ಯಕ್ತಿಯೊಬ್ಬರು ತಿಳಿಸಿದರು. ನಾನು ಹೋಗಿ ನೋಡಿದಾಗ ಕುಲಕರ್ಣಿಯವರು ಅಪರಿಚಿತ ವಾಹನ ಡಿಕ್ಕಿಯಿಂದ ಸಾವನ್ನಪ್ಪಿದ್ದರು ಎಂದು ಕುಲಕರ್ಣಿಯವರ ಕಾರು ಚಾಲಕ ನೀಡಿದ ಮಾಹಿತಿ ಮೇರೆಗೆ ಇದೊಂದು ಹಿಟ್ ಅಂಡ್ ರನ್ ಕೇಸ್ ಎಂದು ಭಾವಿಸಿದ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ದುರಂತ ನಡೆದ, ಮಾನಸ ಗಂ ಗೋತ್ರಿ ಆವರಣದ ಕಂಪ್ಯೂಟರ್ ಸೈನ್ಸ್, ಬಯೋ ಟೆಕ್ನಾಲಜಿ ವಿಭಾಗ ಹಾಗೂ ಅಂಚೆ ಕಚೇರಿ ನಡುವಿನ ರಸ್ತೆಯ ಸ್ಥಳ ಪರಿಶೀಲನೆ ನಡೆಸಿದರು.



ಆದರೆ, ಕುಲಕರ್ಣಿಯವರ ಮೃತದೇಹ ರಸ್ತೆಯ ಅಂಚಿನಲ್ಲಿದ್ದ ಪೊದೆಯಲ್ಲಿ ಬಿದ್ದಿತ್ತು. ಅವರ ಕನ್ನಡಕ ಒಡೆದು, ಅದರ ಗ್ಲಾಸ್ ಚೂರುಗಳು ಮತ್ತು ಅವರು ಅಳವಡಿಸಿಕೊಂಡಿದ್ದ ಕೃತಕ ಹಲ್ಲುಗಳ ಸೆಟ್ ರಸ್ತೆಯಂಚಿನಲ್ಲಿ ಬಿದ್ದಿದ್ದರೆ, ಕಾರೊಂದರ ಗ್ರೇ ಕಲರ್‌ನ ಬಲಭಾಗದ ಮಿರರ್ ಕೂಡ ರಸ್ತೆಯಂಚಿನಲ್ಲೇ ಬಿದ್ದಿದ್ದರಿಂದ ಈ ಅಪಘಾತ ರಸ್ತೆಯ ಮಧ್ಯೆ ನಡೆದದ್ದಲ್ಲ ಎಂದು ▶ 9ನೇ ಪುಟಕ್ಕೆ



ಘಟನೆ ಸಂಭವಿಸಿದ ಮಾನಸ ಗಂಗೋತ್ರಿ ಸ್ಥಳದಲ್ಲಿ ಡಿಸಿಪಿ ಪ್ರದೀಪ್ ಗುಂಟಿ ಪರಿಶೀಲನೆ ನಡೆಸಿದರು.

"ನವೆಂಬರ್ 4ರಂದು ಸಂಜೆ 5.30ರಲ್ಲಿ ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ಅಪಘಾತ ನಡೆದು ನಿವೃತ್ತ ಐಬಿ ಅಧಿಕಾರಿ ಕುಲಕರ್ಣಿ ಮೃತಪಟ್ಟಿದ್ದಾರೆ ಎಂಬ ಮಾಹಿತಿ ಬಂದಿತ್ತು ಕೂಲಂಕುಷವಾಗಿ ಪರಿಶೀಲನೆ ನಡೆಸಿದಾಗ ಕಾರೊಂದು ಉದ್ದೇಶಪೂರ್ವಕವಾಗಿ ರಸ್ತೆಯಿಂದ ಹೊರಬಂದು ಅವರಿಗೆ ಡಿಕ್ಕಿ ಹೊಡೆದಿದೆ ಎಂಬುದು ತಿಳಿದ ಹಿನ್ನೆಲೆಯಲ್ಲಿ ಕೊಲೆ ಪ್ರಕರಣ ದಾಖಲಿಸಲಾಗಿದೆ. ಕುಲಕರ್ಣಿಯವರು ನಿವೃತ್ತರಾಗಿ 23 ವರ್ಷವಾಗಿತ್ತು. ಹೀಗಾಗಿ ವೃತ್ತಿ ವೈಷಮ್ಯದಿಂದ ಕೊಲೆ ನಡೆದಿರುವ ಸಾಧ್ಯತೆ ಕಡಿಮೆ ಇದೆ. ಯಾವ ಕಾರಣಕ್ಕಾಗಿ ಕೊಲೆ ನಡೆದಿದೆ ಎಂಬುದು ಸದ್ಯಕ್ಕೆ ಗೊತ್ತಿಲ್ಲ. ಹಂತಕರ ಬಗ್ಗೆ ಕೆಲವು ಸುಳಿವುಗಳು ದೊರೆತಿದ್ದರೂ ಕೂಡ, ಕಾರಣ ಏನು ಎಂಬುದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಾಗಿದೆ. ಕುಲಕರ್ಣಿಯವರಿಗೆ ಡಿಕ್ಕಿ ಹೊಡೆದ ಕಾರಿಗೆ ನಂಬರ್ ಪ್ಲೇಟ್ ಇಲ್ಲದೇ ಇದ್ದದ್ದು ಪ್ರಥಮವಾಗಿ ಸಂಶಯ ಬರಲು ಕಾರಣವಾಯಿತು. ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ.

– ಡಾ. ಚಂದ್ರಗುಪ್ತ, ಮೈಸೂರು ನಗರ ಪೊಲೀಸ್



ಕುಲಕರ್ಣಿಯವರಿಗೆ ಕಾರು ಡಿಕ್ಕಿ ಹೊಡೆದ ದೃಶ್ಯ

ತಾಂತ್ರಿಕತೆಯನ್ನೇ ಆಧರಿಸಿ ತನಿಖೆ: ಶಂಕಿತ ಮೂವರು ಪೊಲೀಸ್ ವಶಕ್ಕೆ?

ಮೈಸೂರು: ಪ್ರತ್ಯಕ್ಷ ಸಾಕ್ಷಿ ಈವರೆಗೆ ದೊರೆಯದ ಕಾರಣ ತಾಂತ್ರಿಕತೆಯನ್ನು ಬಳಸಿಕೊಂಡು ತನಿಖೆ ನಡೆಸುತ್ತಿರುವ ವಿಶೇಷ ತಂಡ ಮಾನಸ ಗಂಗೋತ್ರಿ ಆವರಣ ಹಾಗೂ ಅಲ್ಲಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿನ ಸಿಸಿ ಕ್ಯಾಮರಾ ಫುಟೇಜ್‌ಗಳು, ಕೃತ್ಯ ನಡೆದ ಸಮಯದಲ್ಲಿ ಮಾನಸ ಗಂಗೋತ್ರಿ ಆವರಣಕ್ಕೆ ಸಂಬಂಧಿಸಿದ ಮೊಬೈಲ್ ಟವರ್‌ಗಳಲ್ಲಿ ಕಾರ್ಯ ನಿರ್ವಹಿಸಿರುವ ಸಿಮ್‌ಗಳ ಮಾಹಿತಿ ನಂತರ ಸದರಿ ಸಿಮ್‌ಗಳಿಂದ ಕೃತ್ಯ ನಡೆಯುವುದಕ್ಕೆ ಮುನ್ನ ಹಾಗೂ ನಂತರ ಒಳ ಬರುವ ಹಾಗೂ ಹೊರ ಹೋಗುವ ಕರೆಗಳ ವಿವರ ಸೇರಿದಂತೆ ಸಂಪೂರ್ಣ ತಾಂತ್ರಿಕವಾಗಿ ತನಿಖೆಗೆ ಮುಂದಾಗಿದೆ. ಅಲ್ಲದೇ, ಮೈಸೂರು ನಗರ ಹಾಗೂ ನಗರಕ್ಕೆ ಹೊಂದಿಕೊಂಡಂತಿರುವ ಕಾರ್ ಗ್ಯಾರೇಜ್‌ಗಳು ಹಾಗೂ ಸರ್ವೀಸ್ ಸೆಂಟರ್‌ಗಳು ಮತ್ತು ಕಾರಿನ ಬಿಡಿ ಭಾಗಗಳನ್ನು ಮಾರಾಟ ಮಾಡುವ ಅಂಗಡಿಗಳವರೊಂದಿಗೆ ಒಂದು ತಂಡ ಸಂಪರ್ಕವಿರಿಸಿಕೊಂಡಿದ್ದು, ಕೃತ್ಯಕ್ಕೆ ಬಳಸಿದ ಕಾರಿನ ಪತ್ತೆ ಕಾರ್ಯದಲ್ಲಿ ತೊಡಗಿದೆ. ಈ ಮಧ್ಯೆ ವಿಶೇಷ ತಂಡ ಮೂವರು ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರುಗಳಾದ ಎನ್.ಇ.ರೇವಣ್ಣ ಕುಮಾರ್, ಎನ್.ಇ.ಕರುಣ್ ಕುಮಾರ್, ರೇಣುಕ, ಎನ್.ಜಿ.ಮಲ್ಲಿಕಾರ್ಜುನ, ಹೊನ್ನಮ್ಮಣ್ಣಿ .ಎನ್.ಇ., ಭ್ರಮರಾಂಭ, ಮಣಿಯಮ್ಮ ಮತ್ತು ಅನ್ನಪೂರ್ಣರವರು ಗಳು ಲೇಟ್ ಎನ್.ಎಂ.ಈಶ್ವರ್‌ರವರ ಮಕ್ಕಳುಗಳಾಗಿರುತ್ತಾರೆ. ಎಲ್ಲರ ವಾಸ ನಾಗವಾಲ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಆಗಿದ್ದು ಲೇಟ್ ಎನ್.ಎಂ.ಈಶ್ವರ್‌ರವರಿಗೆ ಸದರಿ ಗ್ರಾಮದಲ್ಲಿ ಹಳೇ ಸರ್ವೆ ನಂ.162, 162/47, ಹೊಸ ಸರ್ವೆ ನಂ. 346, 347 ಮತ್ತು 348 ಗಳಲ್ಲಿ ಒಟ್ಟು 12 ಎಕರೆ ಅಂದರೆ ಪ್ರತಿ ಸರ್ವೆ ನಂಬರುಗಳಲ್ಲಿ 4 ಎಕರೆಯಂತೆ ಸರ್ಕಾರದಿಂದ ಈ ಹಿಂದೆಯೇ ಮಂಜೂರಾಗಿದ್ದು ಅದರಂತೆ ಸದರಿ ಎನ್.ಎಂ. ಈಶ್ವರ್‌ರವರು ತಮ್ಮ ಜೀವಿತ ಕಾಲದಲ್ಲಿ ಸದರಿ ಜಮೀನುಗಳನ್ನು ವ್ಯವಸಾಯ ಮಾಡಿಕೊಂಡು ಅನುಭವಿಸಿಕೊಂಡು ಬಂದಿರುತ್ತಾರೆ.

ನಮ್ಮ ಕಕ್ಷಿದಾರರುಗಳು ಅವರ ತಂದೆ ಲೇಟ್ ಎನ್.ಎಂ.ಈಶ್ವರ್‌ರವರ ಕಾಲವಾದ ನಂತರ ಸದರಿ ಜಮೀನುಗಳ ಸ್ವಾಧೀನಾನುಭವದಲ್ಲಿದ್ದು ಅನುಭವಿಸಿಕೊಂಡು ಬಂದಿರುತ್ತಾರೆ. ಈ ಮಧ್ಯೆ ಕೆಲವು ಭೂ ಕಬಳಿಕೆದಾರರುಗಳು ನಕಲು ದಾಖಲೆಗಳನ್ನು ಸೃಷ್ಠಿಮಾಡಿಕೊಂಡು ಅಂದರೆ ಕ್ರಯಪತ್ರಗಳನ್ನು ಸೃಷ್ಠಿ ಮಾಡಿಕೊಂಡು ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನ ಪಟ್ಟಂತಹ ಸಂದರ್ಭದಲ್ಲಿ ನಮ್ಮ ಕಕ್ಷಿದಾರರುಗಳು ಮೈಸೂರಿನ 6ನೇ ಹೆಚ್ಚುವರಿ (ಹಿ.ಶ್ರೇ) ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 260/2021 ರಂತೆ ಶಾಂತಪ್ಪ, ಸಂಪತ್ತು, ಮಲ್ಲಿಕಾರ್ಜುನಪ್ಪ, ಸುರೇಶ, ನಟೇಶ, ಗುರು, ಪಿ.ಎಸ್.ರಂಜೀತ್, ಜಿ.ಕೋಮಲರವರುಗಳ ವಿರುದ್ಧ ಮಾಲೀಕತ್ವದ ಘೋಷಣಾತ್ಮಕ ಹಾಗೂ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೇಳಿ ಮೇಲಿನ ದಾವೆಯನ್ನು ಹೂಡಿರುತ್ತಾರೆ. ಆದರೆ ಸದರಿ ದಾವೆಯು ಇನ್ನು ಇತ್ಯರ್ಥಕ್ಕೆ ಸದರಿ ನ್ಯಾಯಾಲಯದಲ್ಲಿ ಇರುವಾಗಲೇ ಸದರಿ ದಾವೆಯ 6ನೇ ಪ್ರತಿವಾದಿಯಾದ ಶ್ರೀಮತಿ ಕೋಮಲರವರು ಸೃಷ್ಠಿಕೃತ ದಾಖಲೆಗಳ ಆಧಾರದ ಮೇಲೆ ನಮ್ಮ ಕಕ್ಷಿದಾರರುಗಳ ಮೇಲೆ ದಬ್ಬಾಳಿಕೆ ಮಾಡಿಕೊಂಡು ಸದರಿ ಜಮೀನಿನಲ್ಲಿ ಅಕ್ರಮವಾಗಿ ನಿವೇಶನಗಳನ್ನು ಮಾರ್ಪಾಡು ಮಾಡಿ ಮಾರಾಟ ಮಾಡಲು ಪ್ರಯತ್ನ ಪಡುತ್ತಿರುತ್ತಾರೆ. ಆದರೆ ಸದರಿ ಕೋಮಲರವರು ಮೇಲ್ಕಂಡ ಆಸ್ತಿಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಏಕೆಂದರೆ ನಮ್ಮ ಕಕ್ಷಿದಾರರುಗಳಾಗಲೀ ಅಥವಾ ಇವರುಗಳ ತಂದೆಯಾಗಲಿ ಇದುವರೆವಿಗೆ ಮೇಲ್ಕಂಡ ಆಸ್ತಿಗಳನ್ನು ಪರಭಾರೆ ಮಾಡಿರುವುದಿಲ್ಲ.

ಆದುದರಿಂದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರುಗಳಿಗೆ ಸೇರಿದ ಮೇಲೆ ಹೇಳಿದ ಸರ್ವೆ ನಂಬರ್ 12 ಎಕರೆ ಆಸ್ತಿಯಲ್ಲಿ ಅಕ್ರಮವಾಗಿ ನಿವೇಶನ ನಿರ್ಮಿಸಿಕೊಂಡು ಮಾರಾಟ ಮಾಡಲು ಶ್ರೀಮತಿ ಕೋಮಲ ಮತ್ತು ಅವರ ಕುಟುಂಬದವರು ಪ್ರಯತ್ನಿಸುತ್ತಿರುವುದರಿಂದ ಸದರಿ ಆಸ್ತಿ ಅಥವಾ ನಿವೇಶನಗಳನ್ನು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ. ಒಂದು ವೇಳೆ ನಿವೇಶನ ಅಥವಾ ಆಸ್ತಿಯನ್ನು ಮೇಲೆ ಹೇಳಿದವರಿಂದ ಖರೀದಿಸಿದ್ದಲ್ಲಿ ನಮ್ಮ ಕಕ್ಷಿದಾರರು ಜವಾಬ್ದಾರರಾಗುವುದಿಲ್ಲ ಹಾಗೂ ಮುಂದೆ ಆಗುವ ತೊಂದರೆ ಹಾಗೂ ಸಕಲ ಖರ್ಚು ವೆಚ್ಚಗಳಿಗೂ ಖರೀದಿದಾರರೇ ಜವಾಬ್ದಾರರಾಗಿರುತ್ತೀರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ನಾಗವಾಲ ಗ್ರಾಮದ ಸರ್ವೆ ನಂ. 162, 162/47, ಬ್ಯಾಕ್ ನಂಬರ್ 1, 2, 3 ಹೊಸ ಸರ್ವೆ ನಂಬರ್ 346, 347 ಮತ್ತು 348 ಗಳಲ್ಲಿ ಪ್ರತಿ ಸರ್ವೆ ನಂಬರ್ 4 ಎಕರೆಯಂತೆ ಒಟ್ಟು 12 ಎಕರೆ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ: ಮಲ್ಲಿಕಾರ್ಜುನಪ್ಪ ಮತ್ತು ಮಹದೇವಪ್ಪನವರ ಜಮೀನು ಮತ್ತು ಶಾಂತಪ್ಪನವರ ಹಳೇ ಸರ್ವೆ ನಂ.162 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂಬರ್ 350, ಉತ್ತರಕ್ಕೆ: ಸರ್ವೆ ನಂಬರ್ 349, ದಕ್ಷಿಣಕ್ಕೆ : ನೀರು ಹರಿಯುವ ಹಳ್ಳ (ಸರ್ವೆ ನಂಬರ್ 352 ಮತ್ತು 354)

Sd/- M.Parameswara, B.B.M., LL.B.,
M.Sadashiva Murthy, M.A., LL.B., G.D.C.
Advocates, No.519, Room No.6, Srinivasa Complex, Near 101 Ganapathi Temple, Mysore. Mob.: 9448706408, 9341854390



ಶ್ರೀ ಪ್ರಸನ್ನ ಗಣಪತಿ ಮತ್ತು ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್‌ನಿಂದ ಮೈಸೂರಿನ ರಾಮಕೃಷ್ಣನಗರದ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಕ್ಷೇತ್ರದ 12ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಭಾಗವಹಿಸಿದ್ದರು. ಈ ವೇಳೆ ಟ್ರಸ್ಟ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಿ.ಮಾದೇಗೌಡ ಅವರನ್ನು ಅಭಿನಂದಿಸಲಾಯಿತು. ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ಸೇವಾದಳ ರಾಜ್ಯ ಸಂಪನ್ಮೂಲ ವ್ಯಕ್ತಿ ಕಾಶೀನಾಥ್ ಬಿ ಹಂದ್ರಾಳ, ಹಿರಿಯ ವಕೀಲ ರವಿಕುಮಾರ್, ಅಭಿಯಂತರ ಸಂತೋಷ್ ಉಪಸ್ಥಿತರಿದ್ದರು.



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಹೋಟೆಲ್ ಉದ್ಯಮಿ ಹಾಗೂ ಚಿತ್ರ ನಿರ್ಮಾಪಕ ಎನ್.ಸಂದೇಶ್ ಅವರನ್ನು ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್ ಕುಮಾರ್ ಶನಿವಾರವೇ ಅಭಿನಂದಿಸಿ, ಶುಭಾಶಯ ಕೋರಿದರು.

ಪ್ರೀತಿಸಿ ಮದುವೆಯಾದವರು ಸಾವಿನಲ್ಲೂ ಒಂದಾದರು...

ಬಟ್ಟೆ ಒಗೆಯಲು ಹೋದ ನವದಂಪತಿ ವರುಣಾ ನಾಲೆಯಲ್ಲಿ ಜಲಸಮಾಧಿ

ಮೈಸೂರು,ನ.5(ಆರ್‌ಕೆ)–ಪರಸ್ಪರ ಪ್ರೀತಿಸಿ ವಿವಾಹವಾಗಿದ್ದರು. ಭವಿಷ್ಯದ ಬಾಳಿನ ಭವ್ಯ ಕನಸು ಕಂಡಿದ್ದರು. ಆದರೆ ವಿಧಿ ಆಟವೇ ಬೇರೆ ಇತ್ತು. ಈಗ ಇಬ್ಬರೂ ಸಾವಿನಲ್ಲೂ ಒಂದಾಗಿದ್ದಾರೆ. ಬಟ್ಟೆ ಒಗೆಯಲು ಹೋದಾಗ ಈ ನವದಂಪತಿ ಕಾಲು ಜಾರಿ ವರುಣಾ ನಾಲೆಯಲ್ಲಿ ಜಲಸಮಾಧಿಯಾಗಿದ್ದಾರೆ. ಈ ಘಟನೆ ಗುರುವಾರ ಸಂಭವಿಸಿದೆ.

ಕೆಆರ್‌ಎಸ್ ರಸ್ತೆಯ ಮೊಗರಳ್ಳಿ ಮಂಟಿ ನಿವಾಸಿಗಳಾದ ಶಿವಕುಮಾರ್ (30) ಹಾಗೂ ಪತ್ನಿ ಶ್ರೀಮತಿ ಕವಿತಾ (25) ದುರಂತ ಸಾವಿಗೀಡಾದವರು. ಮೂಲತಃ ಮೈಸೂರು ತಾಲೂಕು ಶ್ಯಾದನಹಳ್ಳಿ ಗ್ರಾಮದವರಾದ ಶಿವಕುಮಾರ್, ಕಳೆದ ನಾಲ್ಕು ತಿಂಗಳ ಹಿಂದೆಯಷ್ಟೇ ಪ್ರೀತಿಸಿ ಕವಿತಾಳನ್ನು ಮದುವೆಯಾಗಿ ಸಮೀಪದ ಮೊಗರಳ್ಳಿ ಮಂಟಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸ ಮಾಡುತ್ತಿದ್ದರು ಎಂದು ಸಂಬಂಧಿಕರು ತಿಳಿಸಿದ್ದಾರೆ.

ಗುರುವಾರ ಸಮೀಪವೇ ಇರುವ ವರುಣಾ ನಾಲೆಯಲ್ಲಿ ಬಟ್ಟೆ ಒಗೆಯುತ್ತಿದ್ದಾಗ ಮಧ್ಯಾಹ್ನ ಸುಮಾರು 3.30 ಗಂಟೆ ವೇಳೆಗೆ ಕವಿತಾ ಆಕಸ್ಮಿಕವಾಗಿ ಕಾಲು ಜಾರಿ ನೀರಿನಲ್ಲಿ ಬಿದ್ದರು. ಸ್ಥಳದಲ್ಲೇ ಇದ್ದ ಪತಿ ಶಿವಕುಮಾರ್ ನೀರಿನಲ್ಲಿ ಮುಳುಗುತ್ತಿದ್ದ ಪತ್ನಿ ರಕ್ಷಿಸಲು ನೀರಿಗೆ ಧುಮುಕಿದ್ದಾರೆ. ಕೊನೆಗೆ ನೀರಿನ ಸೆಳೆತಕ್ಕೆ ಇಬ್ಬರೂ ನಾಲೆಯಲ್ಲಿ ಕೊಚ್ಚಿ ಹೋಗಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಕೆಆರ್‌ಎಸ್ ಠಾಣೆ ಪೊಲೀಸರು, ನಾಲೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದರಾದರೂ ಗುರುವಾರ ಸುಳಿವು ಸಿಕ್ಕಿರಲಿಲ್ಲ. ನಿನ್ನೆ (ಶುಕ್ರವಾರ) ರಮ್ಮನಹಳ್ಳಿ ಬಳಿ ಕವಿತಾಳ ದೇಹ ಪತ್ತೆಯಾದರೆ, ಕಾಮನಕೆರೆ ಹುಂಡಿ ಸಮೀಪ ಇಂದು ಬೆಳಗ್ಗೆ ಶಿವಕುಮಾರ್ ಶವ ಸಿಕ್ಕಿದೆ. ಸ್ಥಳ ಮಹಜರು ಮಾಡಿದ ಕೆಆರ್‌ಎಸ್ ಪೊಲೀಸರು ಪ್ರಕರಣವನ್ನು ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆಗೆ ವರ್ಗಾಯಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ಇಂದು ಎರಡೂ ದೇಹಗಳನ್ನೂ ವಾರಸುದಾರರಿಗೆ ಒಪ್ಪಿಸಿದರು.

ಸಂವಿಧಾನ ರಕ್ಷಣೆಗೆ ಬಿಎಸ್‌ಪಿಯಿಂದ ಇಂದು ಜಾಥಾ

ಮೈಸೂರು,ನ.5(ಎಂಟಿವೈ)–ಸಂವಿಧಾನ ರಕ್ಷಣೆಗಾಗಿ ಬಹುಜನ ಸಮಾಜ ಪಾರ್ಟಿ ರಾಜ್ಯವ್ಯಾಪಿ ನಡೆಸುತ್ತಿರುವ ಜೈ ಭೀಮ್ ಜನಜಾಗೃತಿ ಜಾಥಾ ನ.6ರಂದು ಮೈಸೂರಿಗೆ ಆಗಮಿಸಲಿದೆ ಎಂದು ಬಿಎಸ್ಪಿ ಮುಖಂಡ, ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಮುವಾದದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ಬಿಜೆಪಿ ಸರ್ಕಾರದಿಂದ ದಲಿತರ ಮೇಲಾಗುತ್ತಿರುವ ದೌರ್ಜನ್ಯ ವಿರೋಧಿಸಲು, ಸಂವಿಧಾನದ ಆಶಯಗಳ ರಕ್ಷಣೆಗಾಗಿ ಬಿಎಸ್ಪಿ ಜೈಭೀಮ್ ಜನಜಾಗೃತಿ ಜಾಥಾ ಹಮ್ಮಿಕೊಂಡಿದೆ. ಈಗಾಗಲೇ ಜನಜಾಗೃತಿ ಜಾಥಾಕ್ಕೆ ರಾಮನಗರದಲ್ಲಿ ಚಾಲನೆ ದೊರೆತಿದೆ. ನ.6ರಂದು ನಗರಕ್ಕೆ ಆಗಮಿಸಲಿರುವ ಜಾಗೃತಿ ಜಾಥಾ ಕೆ.ಆರ್. ಕ್ಷೇತ್ರ, ಚಾಮುಂಡೇಶ್ವರಿ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಸಂಚರಿಸಲಿದೆ. ಬಳಿಕ ಜಿಲ್ಲೆಯ ವಿವಿಧ ತಾಲೂಕುಗಳಿಗೆ ತೆರಳಲಿದೆ ಎಂದರು.

ನ.18ರಂದು ಎಜುಕೇರ್ ಐಟಿಇಎಸ್‌ನಿಂದ ಮಹಿಳಾ ಉದ್ಯೋಗ ಮೇಳ, ವಸ್ತುಪ್ರದರ್ಶನ

ಮೈಸೂರು,ನ.5(ಎಂಟಿವೈ)–ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ವಾಣಿಜ್ಯ ಕಾಲೇಜಿನಲ್ಲಿ ನ.18ರಂದು ಎಜುಕೇರ್ ಐಟಿಇಎಸ್ ವತಿಯಿಂದ ಒಂದು ದಿನದ ಮಹಿಳಾ ಉದ್ಯೋಗ ಮೇಳ ಮತ್ತು ಮಹಿಳೆಯರೇ ತಯಾರಿಸಿದ ವಸ್ತುಗಳ ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ರಚನಾ ಮಹೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಹಾಗೂ ಮಹಿಳಾ ಉದ್ಯಮಿಗಳಾಗಲು ಪ್ರೇರಣೆ ನೀಡುವ ನಿಟ್ಟಿನಲ್ಲಿ ಈ ಮಹಿಳಾ ಉದ್ಯೋಗ ಮೇಳ ಆಯೋಜಿಸಿದ್ದು, 18ರಿಂದ 50 ವರ್ಷದೊಳಗಿನ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ ಸೇರಿದಂತೆ ಇನ್ನಿತರ ವಿದ್ಯಾರ್ಹತೆ ಹೊಂದಿದ ಮಹಿಳೆಯರು, ಯುವತಿಯರು ಪಾಲ್ಗೊಳ್ಳಬಹುದಾಗಿದೆ. ಕೆಲವೊಂದು ಕಂಪನಿಗಳು ವಿದ್ಯಾರ್ಹತೆ ಇಲ್ಲದಿದ್ದರೂ ಟೈಪಿಂಗ್ ಹಾಗೂ ಕಂಪ್ಯೂಟರ್ ಜ್ಞಾನ ಇರುವವರನ್ನು ನೇಮಕ ಮಾಡಿಕೊಳ್ಳಲಿವೆ. ವಸ್ತುಪ್ರದರ್ಶನದಲ್ಲಿ ಮಹಿಳೆಯರೇ ತಯಾರಿಸಿದ ವಸ್ತುಗಳನ್ನು ಪ್ರದರ್ಶಿಸಬಹುದಾಗಿದೆ. ಮಾಹಿತಿಗೆ ದೂ. 6364340027 ಸಂಪರ್ಕಿಸುವಂತೆ ತಿಳಿಸಿದರು. ಗೋಷ್ಠಿಯಲ್ಲಿ ಎಜುಕೇರ್ ಐಟಿಇಎಸ್ ಸಂಸ್ಥೆಯ ಸೋಮಣ್ಣ, ಡಾ.ನಿರಂಜನಬಾಬು, ಪ್ರತಿಭಾ ಗುರುರಾಜ್, ಶೋಭಾ ನಂದಿನಿ ಇದ್ದರು.

ಕೆಲಸದ ಆಮಿಷ ತೋರಿ ಗೃಹಿಣಿಗೆ ಲಕ್ಷ ರೂ. ವಂಚನೆ

ಮೈಸೂರು,ನ.5–ಅಂಗನವಾಡಿ ಕಾರ್ಯಕರ್ತೆ ಕೆಲಸ ಕೊಡಿಸುವುದಾಗಿ ನಂಬಿಸಿ, ಗೃಹಿಣಿಗೆ ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಸಿದ್ದಿಖಿನಗರ ನಿವಾಸಿ ಪಿ.ರೂಪಾ(29) ವಂಚನೆಗೊಳಗಾದವರಾಗಿದ್ದು, ಇವರ ಸ್ನೇಹಿತೆ ಸ್ನೇಹಾ ಎಂಬುವರ ಮೂಲಕ ಕಳೆದ 6 ತಿಂಗಳ ಹಿಂದೆ ಪರಿಚಯವಾದ ನಂಜನಗೂಡು ತಾಲೂಕು ದೊಡ್ಡಕಾನ್ಯ ನಿವಾಸಿ ರೆಹಮಾನ್ ಎಂಬಾತ ತನಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳು ಪರಿಚಯ ಉಂಟು. ಅಂಗನವಾಡಿ ಕಾರ್ಯಕರ್ತೆ ಕೆಲಸ ಕೊಡಿಸುವುದಾಗಿಯೂ, ಅದಕ್ಕಾಗಿ ತನಗೆ ಲಕ್ಷ ರೂ. ಕಮಿಷನ್ ನೀಡಬೇಕೆಂದು ಕೇಳಿದ್ದಾನೆ. ಇದನ್ನು ನಂಬಿದ ರೂಪಾ ಆತನಿಗೆ ಲಕ್ಷ ರೂ. ನೀಡಿದ್ದು, ಈವರೆವಿಗೂ ಅವರಿಗೆ ಕೆಲಸ ಕೊಡಿಸಿಲ್ಲ. ಆತನ ಮೊಬೈಲ್‌ಗೆ ಕರೆ ಮಾಡಿ ಹಣ ವಾಪಸ್ ಕೇಳಿದ್ದಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನರಸಿಂಹರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಒಕ್ಕಲಿಗ ಸಮುದಾಯ ಸೆಳೆಯಲು ಪ್ರಧಾನಿ ಮೋದಿ ನ.11ರಂದು ರಾಜ್ಯ ಪ್ರವಾಸ

- ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ, ಥೀಮ್ ಪಾರ್ಕ್ ಉದ್ಘಾಟನೆ
- ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ಕ್ಕೂ ಚಾಲನೆ
- ಇದೇ ವೇಳೆ ಮೈಸೂರು-ಚೆನ್ನೈ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಚಾಲು
- ಬೃಹತ್ ಸಮಾವೇಶದ ಮೂಲಕ ಕಮಲ ಕಮಾಲ್‌ಗೆ ನಿರ್ಧಾರ











ಬೆಂಗಳೂರು,ನ.5(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಒಕ್ಕಲಿಗ ಸಮುದಾಯದ ಮತಗಳನ್ನು ಪಕ್ಷಕ್ಕೆ ಸೆಳೆಯಲು ಪ್ರಧಾನಿ ನರೇಂದ್ರ ಮೋದಿ ನವೆಂಬರ್ 11ರಂದು ಒಂದು ದಿನದ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಅಂದು ಕೇಂದ್ರ ಮತ್ತು ರಾಜ್ಯದ ಪ್ರಮುಖ ಯೋಜನೆಗಳಿಗೆ ಚಾಲನೆ ನೀಡಿದ ನಂತರ ಕೊನೆಯಲ್ಲಿ 108 ಅಡಿ ಎತ್ತರದ ಕೆಂಪೇಗೌಡರ ಪ್ರತಿಮೆ ಹಾಗೂ ಥೀಮ್ ಪಾರ್ಕ್‌ನ್ನು ರಾಷ್ಟ್ರಕ್ಕೆ ಲೋಕಾರ್ಪಣೆ ಮಾಡಲಿದ್ದಾರೆ. ತದನಂತರ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಈ ಸಭೆಗೆ ಹಳೇ ಮೈಸೂರು ಭಾಗದಲ್ಲಿರುವ ಒಕ್ಕಲಿಗ ಸಮಾಜದವರನ್ನೇ ಸಭೆಗೆ ಸೇರಿಸಲು ರಾಜ್ಯ ಬಿಜೆಪಿ ನಿರ್ಧರಿಸಿದೆ. ಈ ಸಮಾವೇಶವನ್ನು ಮತ್ತು ಪ್ರಧಾನಿ ಕಾರ್ಯಕ್ರಮವನ್ನು ಮುಂಬರುವ ವಿಧಾನಸಭಾ ಚುನಾವಣೆ ಲಾಭಕ್ಕೆ ಬಳಸಿಕೊಳ್ಳಲು ರಾಜ್ಯ ಬಿಜೆಪಿ ನಿರ್ಧರಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಸೇರಿದಂತೆ ಹಲವು ಮುಖಂಡರು ಸಭೆ ಸೇರಿ, ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ತೀರ್ಮಾನಿಸಿದ್ದಾರೆ. ಸಮಾವೇಶಕ್ಕೆ ಸಮುದಾಯದ ಕಾರ್ಯಕರ್ತರನ್ನು ಕರೆತರುವ ಹೊಣೆಗಾರಿಕೆಯನ್ನು ಸಚಿವರಾದ ಆರ್.ಅಶೋಕ್, ಡಾ. ಸುಧಾಕರ್, ಡಾ.ಅಶ್ವತ್ಥ್‌ನಾರಾಯಣ್, ಸೋಮಶೇಖರ್ ಹಾಗೂ ಗೋಪಾಲಯ್ಯ ಮತ್ತು ಇತರ ಮುಖಂಡರಿಗೆ ವಹಿಸಲಾಗಿದೆ.

ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ನಿರೀಕ್ಷಿತ ಪ್ರಮಾಣದಲ್ಲಿ ಹೆಚ್ಚು ಸ್ಥಾನಗಳನ್ನು ಇದುವರೆಗಿನ ಚುನಾವಣೆಯಲ್ಲಿ ಗಳಿಸಲು ಸಾಧ್ಯವಾಗಿಲ್ಲ. ಈ ಭಾಗದಲ್ಲಿ ಹೆಚ್ಚು ಸ್ಥಾನ ಗಳಿಸದೇ ಪೂರ್ಣ ಪ್ರಮಾಣದಲ್ಲಿ ಅಧಿಕಾರಕ್ಕೆ ಬರುವುದು ಅಸಾಧ್ಯ. ಇದನ್ನು ಗಮನದಲ್ಲಿಟ್ಟುಕೊಂಡೇ ಮತದಾರರನ್ನು ಪರಿವರ್ತಿಸಲು ಕೆಂಪೇಗೌಡರ ಪ್ರತಿಮೆಯನ್ನೇ ಪಕ್ಷ ರಾಜಕೀಯ ಲಾಭವಾಗಿ ಬಳಸಿಕೊಳ್ಳಲು ಹೊರಟಿದೆ.

ಪ್ರಧಾನಿಯವರೂ ಅಂದು ಒಕ್ಕಲಿಗ ಸಮಾಜದ ಕೈಂಕರ್ಯಗಳನ್ನು ಸಭೆಯಲ್ಲಿ ಬಿಂಬಿಸಿ, ಮನವೊಲಿಸುವ ಪ್ರಯತ್ನ ಮಾಡಲಿದ್ದಾರೆ. ಹೆಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಅಂದು ಬೆಳಗ್ಗೆ ಆಗಮಿಸಲಿರುವ ಪ್ರಧಾನಿಯವರು ಕಾರ್ಯಕ್ರಮಗಳಿಗೆ ಚಾಲನೆ ನೀಡಲು ಸಂಚರಿಸುವ ರಸ್ತೆಗಳು ಮತ್ತು ವೃತ್ತಗಳಲ್ಲಿ ಕೇಸರಿಕರಣ ಹಾಗೂ ಪಕ್ಷದ ಕಾರ್ಯಕರ್ತರು ಎರಡು ಬದಿಗಳಲ್ಲಿ ನಿಂತು ಸ್ವಾಗತಿಸಲು ಪಕ್ಷ ತೀರ್ಮಾನಿಸಿದೆ. ಅಷ್ಟೇ ಅಲ್ಲ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ಹಾಗೂ 108 ಅಡಿ ಎತ್ತರದ ಕೆಂಪೇಗೌಡ ಪ್ರತಿಮೆಯನ್ನು ಉದ್ಘಾಟಿಸಿದ ನಂತರ ಅಲ್ಲಿಯೇ ಸಮೀಪದಲ್ಲಿ ಸಾರ್ವಜನಿಕನ್ನುದ್ದೇಶಿಸಿ ಮಾತನಾಡಲಿದ್ದಾರೆ.

ನವೆಂಬರ್ 11 ಕನಕ ಜಯಂತಿಯಾಗಿರುವುದರಿಂದ ವಿಧಾನಸೌಧ ಮತ್ತು ಶಾಸಕರ ಭವನ ನಡುವೆ ಇರುವ ಕನಕದಾಸರ ಪ್ರತಿಮೆಗೆ ಪ್ರಧಾನಿಯವರು ಮಾಲಾರ್ಪಣೆ ಮಾಡಲಿದ್ದಾರೆ.

ಆನಂತರ ಸಂಗೊಳ್ಳಿರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ದಕ್ಷಿಣ ಭಾರತದ ಮೊದಲ ಮೈಸೂರ್–ಚೆನ್ನೈ ನಡುವೆ ಸಂಚರಿಸುವ ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ ತೋರಲಿದ್ದಾರೆ. ಅಲ್ಲಿಂದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಲಿದ್ದು, ವಿಮಾನ ನಿಲ್ದಾಣದಲ್ಲಿ ನೂತನವಾಗಿ ನಿರ್ಮಿಸಿರುವ ಟರ್ಮಿನಲ್–2 ಲೋಕಾರ್ಪಣೆ ಮಾಡಲಿದ್ದಾರೆ. ಬಳಿಕ ಕೆಂಪೇಗೌಡ 108 ಅಡಿ ಎತ್ತರದ ಪ್ರಗತಿ ಪ್ರತಿಮೆ ಹಾಗೂ ಥೀಮ್ ಪಾರ್ಕ್ ಉದ್ಘಾಟನೆ ಮಾಡಲಿದ್ದು, ಕೊನೆಯದಾಗಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಗರಡಿಕೇರಿ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಯಶಸ್ವಿ ಆರೋಗ್ಯ ತಪಾಸಣೆ; ಅನ್ನ ಸಂತರ್ಪಣೆ



ಮೈಸೂರು, ನ.5– ಮೈಸೂರು ಲಷ್ಕರ್ ಮೊಹಲ್ಲಾದ ಗರಡಿಕೇರಿಯ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ ವತಿಯಿಂದ 45ನೇ ವರ್ಷದ ದೀಪಾವಳಿ ಮತ್ತು ಕಾರ್ತಿಕ ಮಾಸದ ಪೂಜಾ ಮಹೋತ್ಸವದ ಅಂಗವಾಗಿ ಶುಕ್ರವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಉಚಿತ ಕಣ್ಣಿನ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು. ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಶಾಸಕ ಎಲ್.ನಾಗೇಂದ್ರ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕಾಂಗ್ರೆಸ್ ಮುಖಂಡರಾದ ಕೆ.ಹರೀಶ್‌ಗೌಡ, ದೇವಸ್ಥಾನದ ಗೌರವ ಅಧ್ಯಕ್ಷ ಹಾಗೂ ಮಾಜಿ ಪಾಲಿಕೆ ಸದಸ್ಯ ಎಂ.ಶಿವಣ್ಣ, ಅಧ್ಯಕ್ಷ ಎಂ.ರವಿಕುಮಾರ್, ಟ್ರಸ್ಟಿಗಳಾದ ವೆಂಕಟದಾಸಚಾರ್, ಸುರೇಶ್ ಬಾಬು, ಎನ್.ರಾಚಪ್ಪ, ರಾಜೇಂದ್ರ, ಬಿ.ಸಿ. ಪ್ರೇಮ್‌ಕುಮಾರ್, ಮಹದೇವ, ಚಂದ್ರಶೇಖರ್, ಎಂ.ಎಸ್.ಮಾದೇಶ, ಎಲ್.ಮಹದೇವ, ನಂಜಪ್ಪ, ಮಹೇಶ, ರವಿಕುಮಾರ್, ಎಸ್.ಜಗನ್ನಾಥ್, ವಿಶ್ವನಾಥ್ (ವಿಶ್ವ) ಹಾಗೂ ದೇವಸ್ಥಾನದ ಪ್ರಧಾನ ಅರ್ಚಕ ರೇಣುಕಾಸ್ವಾಮಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿಕೊಟ್ಟರು.

ಸುಮಾರು 250ಕ್ಕೂ ಹೆಚ್ಚು ಜನರಿಗೆ ಉಚಿತ ಆರೋಗ್ಯ ತಪಾಸಣೆ, 95 ಜನರಿಗೆ ಉಚಿತ ಕಣ್ಣಿನ ತಪಾಸಣೆ, ಔಷಧೋಪಚಾರ, ಕನ್ನಡಕ ವಿತರಿಸಲಾಯಿತು. ಡಾ.ಪಿ.ಜಯಕುಮಾರ್, ಲಯನ್ಸ್ ಸಂಸ್ಥೆ ವೈದ್ಯರು ಹಾಗೂ ಸಿಬ್ಬಂದಿ ಆರೋಗ್ಯ ಶಿಬಿರವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಇದೇ ವೇಳೆ ವಿವಿಧ ಸ್ಥಳೀಯ ಮಹಿಳಾ ತಂಡಗಳು, ಮಹದೇಶ್ವರರ ಭಕ್ತಿಗೀತೆಗಳು, ಭಾವಗೀತೆಗಳನ್ನು ಸಾದರಪಡಿಸಿದರು.



ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಯಡಿಯೂರಪ್ಪನವರನ್ನು ಬೆಂಗಳೂರಿನಲ್ಲಿ ಶನಿವಾರ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿ. ಅಧ್ಯಕ್ಷ ಆರ್. ರಘು (ಕೌಟಿಲ್ಯ) ಭೇಟಿಯಾಗಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.

ಅನುಪಾಲನಾ ಗೃಹ ಆರಂಭಿಸಲು ಅರ್ಜಿ ಆಹ್ವಾನ

ಮೈಸೂರು, ನ.5– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅನುಪಾಲನಾ ಗೃಹ ಯೋಜನೆಯ ಮಾರ್ಗಸೂಚಿ ಹಾಗೂ ನಿರ್ದಿಷ್ಟ ಕಾರ್ಯವಿಧಾನದ ಅನ್ವಯ ಮೈಸೂರು ಜಿಲ್ಲೆಯ 18 ವರ್ಷ ಮೇಲ್ಪಟ್ಟ ಹೆಣ್ಣು ಮಕ್ಕಳಿಗಾಗಿ ಅನುಪಾಲನಾ ಗೃಹವನ್ನು ಆರಂಭಿಸಲು ಹದಿಹರೆಯದ (13 ವರ್ಷ ಮೇಲ್ಪಟ್ಟ) ಮಕ್ಕಳೊಂದಿಗೆ ಕನಿಷ್ಠ 5 ವರ್ಷಗಳ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವ ಆಸಕ್ತ ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿಯನ್ನು 2022ರ ನವೆಂಬರ್ 17ರ ಒಳಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ನಂ. 15–17, ಮೊದಲನೇ ಮಹಡಿ, ಅಂಜನಾದ್ರಿ ಮುಖ್ಯ ರಸ್ತೆ, ವಿಜಯನಗರ 4ನೇ ಹಂತ, 2ನೇ ಫೇಸ್, ಮೈಸೂರು ಇವರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821–2543003 ಅನ್ನು ಸಂಪರ್ಕಿಸಿ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.11.2022 ಭಾನುವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ : ರೇವತಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್:** ಕನ್ನಡ ಪುಸ್ತಕಗಳ ಮೇಲೆ ಶೇ.15ರಿಂದ 20ರವರೆಗೆ ವಿಶೇಷ ರಿಯಾಯಿತಿ, ಸ್ಥಳ: ರಾಮಸ್ವಾಮಿ ಸರ್ಕಲ್, ಬೆಳಗ್ಗೆ 9.30ರಿಂದ ರಾತ್ರಿ 8ರವರೆಗೆ

■ **ಜ್ಯೋತಿರ್ಗಮಯ ಸೇವಾ ಟ್ರಸ್ಟ್ :** ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಧ್ವಜಾರೋಹಣ : ಎಂ.ಎಚ್. ಚಂದ್ರಶೇಖರ್, ಅಧ್ಯಕ್ಷತೆ: ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಹೇಂದ್ರ, ಸ್ಥಳ: ಹೆಣ್ಣು ಮಕ್ಕಳ ಉಚಿತ ವಿದ್ಯಾರ್ಥಿನಿಲಯ, ರಾಮಾನುಜ ರಸ್ತೆ, ಬೆಳಗ್ಗೆ 9ಕ್ಕೆ

■ **ಬಿಡುಗಡೆ ತಂಡ:** ವಿಚಾರಗೋಷ್ಠಿ, ವಿಷಯ: ಅಸ್ಪೃಶ್ಯತೆ ಅಳಿಯಲಿ ಮಾನವತೆ ಬೆಳಗಲಿ, ಪ್ರಸ್ತಾವನೆ: ಹೊರೆಯಾಲ ದೊರೆಸ್ವಾಮಿ, ಉಪಸ್ಥಿತರು: ಸಾಹಿತಿ ಜಿ.ಪಿ.ಬಸವರಾಜು, ಉಗ್ರನರಸಿಂಹೇಗೌಡ, ಭದ್ರಪ್ಪ ಶಿ.ಹೆನ್ಲಿ, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಸ್ಪರ್ಶ ಆರೋಗ್ಯ ಮತ್ತು ಕಣ್ಣಿನ ಆಸ್ಪತ್ರೆ :** ಉಚಿತ ಚರ್ಮರೋಗ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬಂಬೂ ಬಜಾರ್, ಬೆಳಗ್ಗೆ 10 ರಿಂದ.

■ **ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಮಹಿಳಾ ಸಮಾಜ:** ಸಂಬಂಧ ಬೆಳ್ಳಿಹಬ್ಬ ಆಚರಣೆ, ಅಧ್ಯಕ್ಷತೆ: ಸಮಾಜದ ಅಧ್ಯಕ್ಷೆ ಶ್ರೀಮತಿ ದೇವಜನ ಗೀತಾ ಮೋಂಟಡ್ಕ, ಉದ್ಘಾಟನೆ: ಪ್ರಧಾನ ಮಂತ್ರಿ ಪೋಷಣೆ ಶಕ್ತಿ ನಿರ್ಮಾಣ್ ಯೋಜನೆ ಸಹಾಯಕ ನಿರ್ದೇಶಕರಾದ ಶ್ರೀಮತಿ ಪಿ.ಎಸ್.ಲೀಲಾವತಿ, ಸ್ಮರಣ ಸಂಚಿಕೆ ಬಿಡುಗಡೆ: ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತೆ ಕೆ.ಎಂ.ಸುಲೋಚನ, ಮುಖ್ಯ ಅತಿಥಿಗಳು: ಶ್ರೀಮತಿ ಅಚ್ಚುಡ ಆರತಿ ಹರೀಶ್, ಸ್ಥಳ: ಕೊಡಗು ಗೌಡ ಸಮಾಜ, ವಿಜಯನಗರ 2ನೇ ಹಂತ, ಬೆಳಗ್ಗೆ 10.30ಕ್ಕೆ

■ **ಧನಶಕ್ತಿ ಕೋ–ಆಪರೇಟಿವ್ ಸೊಸೈಟಿ:** ಉದ್ಘಾಟನಾ ಸಮಾರಂಭ, ಉದ್ಘಾಟನೆ: ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಮುಖ್ಯ ಭಾಷಣ: ಶಾಸಕ ಎನ್.ಮಹೇಶ್, ಮುಖ್ಯ ಅತಿಥಿಗಳು: ಸಾಮಾಜಿಕ ಕಾರ್ಯಕರ್ತ ಅಕ್ಷಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪಾಲಿಕೆ ಸದಸ್ಯೆ ಡಾ.ಅಶ್ವಿನಿ ಶರತ್, ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸದಾನಂದ, ಸ್ಥಳ: ಚಿಕ್ಕಗರಡಿ ಸಮುದಾಯ ಭವನ, ಗಾಂಧಿನಗರ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಎಸ್.ರಾಧಾಕೃಷ್ಣನ್ ತತ್ತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ:** ವಿಶೇಷ ಉಪನ್ಯಾಸ ಮಾಲಿಕೆ–40, ಭಾರತ ಸಂಸ್ಕೃತಿ: ಸಂಸ್ಕೃತ ಭಾರತಿ, ಶ್ರೀ ರಾಮಕೃಷ್ಣ–ವಿವೇಕಾನಂದಾಶ್ರಮದ ಅಧ್ಯಕ್ಷ ಶ್ರೀ ವೀರೇಶಾನಂದ ಸರಸ್ವತೀ ಸ್ವಾಮೀಜಿ, ಪ್ರೊ.ಕೆ.ಅನಂತರಾಮು, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಹೇಮಂತ್‌ಕುಮಾರ್, ಸ್ಥಳ: ಡಾ.ಎಸ್.ರಾಧಾಕೃಷ್ಣನ್ ಭವನ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ರಂಗಾಯಣ, ಸಂವಹನ: ಪ್ರಕಾಶಕರು, ಕನ್ನಡ ಸಾಹಿತ್ಯ ಕಲಾಕೂಟ:** ಕವಿ, ಲೇಖಕ ಸಿ.ಚಾಮಶೆಟ್ಟಿ ಅವರ ಹನುಮನ ಸೀತಾನ್ವೇಷಣೆ ಮತ್ತು ಸಂತ ರವಿದಾಸರು ನಾಟಕ ಚಕ್ರ, ತ್ರಿವರ್ಣ ಕಾವ್ಯ ಸಂಕಲನ, ಸಮನ್ವಿತ ಕೃತಿಗಳ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ: ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಕೃತಿಗಳ ಲೋಕಾರ್ಪಣೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಕೃತಿಗಳನ್ನು ಕುರಿತು ಮಾತನಾಡುವವರು: ಹಿರಿಯ ರಂಗಕರ್ಮಿ ಡಾ.ಎಚ್.ಎ. ಪಾರ್ಶ್ವನಾಥ್, ಉಪಸ್ಥಿತರು: ಎನ್.ಕೆರೋಡಿ ಲೋಲಾಕ್ಷಿ, ರಂಗಾಯಣ ಉಪನಿರ್ದೇಶಕ ನಿರ್ಮಲ ಮಠಪತಿ, ನಿವೃತ್ತ ಅರಣ್ಯ ಅಧಿಕಾರಿ ಎಲ್.ಮಲ್ಲಶೆಟ್ಟಿ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಲೇಖಕ ಚಾಮಶೆಟ್ಟಿ, ಡಿ.ಎನ್. ಲೋಕಪ್ಪ, ಸ್ಥಳ: ಬಿ.ವಿ. ಕಾರಂತರ ರಂಗ ಚಾವಡಿ, ರಂಗಾಯಣದ ಆವರಣ, ಬೆಳಗ್ಗೆ 11ಕ್ಕೆ.

■ **ಪುನೀತ್ ರಾಜ್‌ಕುಮಾರ್ ಯುವಸೇನೆ:** ಕರ್ನಾಟಕ ರತ್ನ ಪುನೀತ್‌ರಾಜ್‌ಕುಮಾರ್ ಅವರಿಗೆ ಗೌರವ ಸಮರ್ಪಣೆ, ಅನ್ನ ಸಂತರ್ಪಣೆ, ಸ್ಥಳ: ಸಂಗಮ್ ಚಿತ್ರಮಂದಿರದ ಎದುರು, ಮಧ್ಯಾಹ್ನ 12ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಎಂದೆಂದಿಗೂ ನೀ ಕನ್ನಡವಾಗಿರು ಕನ್ನಡ ಚಲನಚಿತ್ರ ಗೀತೆಗಳ ಗಾಯನ, ಉದ್ಘಾಟನೆ: ಶಾಸಕ ಎಸ್.ಎ.ರಾಮದಾಸ್, ಅಧ್ಯಕ್ಷತೆ: ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯೆ ಛಾಯಾದೇವಿ, ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ರುದ್ರೇಶ್, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಪಿ.ಕಾಳಿಂಗರಾವ್ ರಂಗ ಮಂದಿರ, ವಸ್ತು ಪ್ರದರ್ಶನದ ಆವರಣ, ಸಂಜೆ 5.30ಕ್ಕೆ.

■ **ರಂಗಾಯಣ:** ಕೊಳ್ಳೇಗಾಲದ ಕಲಾಧಾಮ ಕಲಾವಿದರಿಂದ ಸೇತು ಮಾಧವನ ಸಲ್ಲಾಪ ನಾಟಕ ಪ್ರದರ್ಶನ, ರಚನೆ: ಟಿ.ಎನ್.ನರಸಿಂಹನ್, ನಿರ್ದೇಶನ: ಅಂಕರಾಜು ಎನ್.ಕೊಳ್ಳೇಗಾಲ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಉತ್ತರ ಭಾರತದಲ್ಲಿ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** 'ಕನ್ನಡಿಗ' ಚಲನಚಿತ್ರ ಪ್ರದರ್ಶನ ಮತ್ತು ಸಂವಾದ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** 45ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, ಶ್ರೀ ಮಲೆ ಮಹದೇಶ್ವರ ಕಂಸಾಳೆ ತಂಡದವರಿಂದ ಕಂಸಾಳೆ ಪದ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ, ಸಂಜೆ 7ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ –ವಿ.ಎನ್.ಮಲ್ಲಿಕಾರ್ಜುನಸ್ವಾಮಿ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.35 "ಬದುಕು ಮಣ್ಣಿನೊಂದಿಗೆ" ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಟಿ.ಎಸ್.ಸ್ನೇಹಾ, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ– ಡಾ.ಬೋರೇಗೌಡ ಚಿಕ್ಕಮರಳಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.00 ಕನ್ನಡ ಕಜ್ಜಾಯ, 9.40 ನಮ್ಮ ಆರೋಗ್ಯ–ಹೃದಯ ವೈಫಲ್ಯ– ಕಾರಣಗಳು, ಚಿಕಿತ್ಸೆ ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕುರಿತು ಡಾ.ಬಿ.ಎಸ್.ಕೇಶವ್ ಅವರೊಂದಿಗೆ ಮಾತುಕತೆ ಕುರಿತು ಡಾ. ವೀನು ಜೆ. ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ –ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳಮಂಟಪ –ನಂಜನಗೂಡು ತಾಲೂಕ್ ಎಸ್.ಹೊಸಕೋಟೆ ಶ್ರೀ ಗುರು ಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ–ಕನ್ನಡ ನಾಡು ನುಡಿ–ಸಂಗೀತ ರೂಪಕ, ಪ್ರಸ್ತುತಿ – ಬೆಂಗಳೂರಿನ ಗಾನಸುಧೆ ಭಜನಾ ಮಂಡಳಿ, 12.45 ಜನಪದ ಸಂಗೀತ–ಅನ್ನಪೂರ್ಣ ಮತ್ತು ತಂಡ, 1.00 ಟಿ–20 ವಿಶ್ವಕಪ್ ಕ್ರಿಕೆಟ್ ಅಂಗವಾಗಿ ಭಾರತ ಹಾಗೂ ಜಿಂಬಾಬ್ವೆ ತಂಡಗಳ ನಡುವಿನ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ತಾಡೆಪಲ್ಲಿ ಲೋಕನಾಥ್ ಶರ್ಮ– ಗಾಯನ, ವಿದ್ವಾನ್ ಆರ್. ರಮೇಶ್–ಮೃದಂಗಂ ಸೋಲೋ

ಸಾಂಸ್ಕೃತಿಕ ಉತ್ಸವ 'ಭಾರತೀಯ ಹಬ್ಬಗಳು' ಕಾರ್ಯಕ್ರಮ

ನವೆಂಬರ್ 6



■ **ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** ವಿಶೇಷ ಕಾರ್ಯಕ್ರಮ 'ಅಷ್ಟಾವಧಾನ'. ನಾಲ್ಕು ಗಂಟೆ ಅವಧಿಯ 'ಭಾರತದ ಹಬ್ಬಗಳು' ಕುರಿತು ವಿದ್ವಾನ್ ಶತಾವಧಾನಿ ಡಾ.ಆರ್.ಗಣೇಶ್ ಅವರಿಂದ ಅಷ್ಟಾವಧಾನ ಕಾರ್ಯಕ್ರಮ. ಉಪಸ್ಥಿತರು: ಕೆ.ಬಿ.ಎಸ್.ರಾಮಚಂದ್ರ (ನಿಷೇಧಾಕ್ಷರ) ಹೆಚ್.ಎ.ವಾಸುಕಿ (ಸಮಸ್ಯಾಪೂರಣ), ಅಷ್ಟಾವಧಾನಿ ಗಣೇಶ್ ಭಟ್ಟ ಕೊಪ್ಪಲತೋಟ (ದತ್ತಪದಿ), ಡಾ.ರಂಜನಿ ವಾಸುಕಿ (ಧಾತುವಿಗೆ ಮಾತು), ಅರ್ಜುನ್ ಭಾರದ್ವಾಜ್ (ಆಶು ಕವಿತೆ), ಶ್ರೀಶ ಕಾರಂತ (ಉದ್ದಿಷ್ಟಾಕ್ಷರ), ಕಶ್ಯಪ್ ನಾಯಕ್ (ಕಾವ್ಯ ವಾಚನ), ಸೋಮಶೇಖರ್ ಶರ್ಮ (ಅಪ್ರಸ್ತುತ ಪ್ರಸಂಗ), ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 4ಕ್ಕೆ

ನಕ್ಕರೆ ಅದೇ ಸ್ವರ್ಗ

ಗುರುಗಳು : (ಪ್ರವಚನದಲ್ಲಿ) ನೀನೇಕೆ ಕೈ ಎತ್ತಲಿಲ್ಲ? ನಿನಗೆ ಸ್ವರ್ಗಕ್ಕೆ ಹೋಗಲು ಇಷ್ಟವಿಲ್ಲವೆ?

ಕೇಳುಗ : ಪ್ರವಚನ ಮುಗಿದ ನಂತರ ಸೀದಾ ಮನೆಗೆ ಬರುವಂತೆ ನನ್ನ ಹೆಂಡತಿ ಹೇಳಿದ್ದಾಳೆ ಗುರೂಜೀ!

ಮೈಸೂರು ಮಿತ್ರ

ಭಾನುವಾರ, 6 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸುಖ ಬರಲಿ ಅಥವಾ ಬಾರದಿರಲಿ ಬದುಕಲು ಎಲ್ಲರೂ ಕಲಿಯಬೇಕು

– ಜಾರ್ಜ್ ಎಲಿಯಟ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಬ್ಬು ರುಚಿ ಅಂತ ಬೇರು ಸಹಿತ ಅಗಿಯುವುದೋ?

ನಿಮ್ಮ ಪತ್ರಗಳು

ಕೋತಿಗಳ ಹಾವಳಿ ತಪ್ಪಿಸಿ

ಮಾನ್ಯರೆ,



ತಿ.ನರಸೀಪುರ ಪಟ್ಟಣದ ಪುರಸಭೆ ವ್ಯಾಪ್ತಿಗೆ ಒಳಪಡುವ ಆಲಗೂಡು 14ನೇ ವಾರ್ಡಿನಲ್ಲಿ ಕೋತಿಗಳ ಹಾವಳಿ ಮಿತಿ ಮೀರಿದೆ. ವಾರ್ಡಿನ ಎಲ್ಲಾ ಬೀದಿಗಳಲ್ಲಿ ಕೋತಿಗಳು ಮನೆಯ ಮುಂದೆ ದಾಳಿ ಮಾಡುತ್ತಿವೆ.

ಮನೆಯ ಮೇಲಿನ ಹೆಂಚುಗಳು ಮತ್ತು ಕಿಟಕಿ ಬಾಗಿಲುಗಳ ಮೂಲಕ ಎರಗುವ ಕೋತಿಗಳು ಮನೆಯಲ್ಲಿನ ದಿನಸಿ ಪದಾರ್ಥದ ಬಾಕ್ಸ್, ಹಣ್ಣು–ತರಕಾರಿಗಳು, ಮಾಡಿಟ್ಟ ಅಡುಗೆ ಪಾತ್ರೆ ಸಾಮಗ್ರಿಗಳ ಹೊತ್ತುಕೊಂಡು ಹೋಗುತ್ತಿವೆ. ಮನೆಯಲ್ಲಿನ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡುತ್ತಿವೆ.

ಇದರಿಂದ ಭಯಭೀತರಾಗಿ ನಿವಾಸಿಗಳು ಮನೆಯ ಬಾಗಿಲು, ಚಿಲಕಗಳನ್ನು ಭದ್ರಪಡಿಸಿಕೊಂಡು ಆತಂಕದಿಂದ ಕಾಲ ಕಳೆಯುವಂತಾಗಿದೆ. ಮಹಿಳೆಯರು, ಸಣ್ಣ ಮಕ್ಕಳು, ಬಾಣಂತಿಯರು, ವಯೋವೃದ್ಧರು ಇರುವ ಮನೆಗಳಲ್ಲಿ ಪರಿಸ್ಥಿತಿ ಹೇಳತೀರದಾಗಿದೆ.

ಅಲ್ಲದೆ ಕಾಲೋನಿಯ ಬೀದಿಗಳಲ್ಲಿ ಶಾಲಾ ಮಕ್ಕಳು, ಪುಟ್ಟ ಮಕ್ಕಳು, ಓಡಾಡುವ ಸಂದರ್ಭದಲ್ಲಿ ಊಟದ ಬುತ್ತಿ, ಬಾಳೆಹಣ್ಣು, ಬ್ರೆಡ್, ಬಿಸ್ಕೆಟ್ ಇತರೆ ತಿಂಡಿ ತಿನಿಸುಗಳನ್ನು ಕೈಯಿಂದ ಕಸಿದುಕೊಂಡು ಹೋಗುತ್ತಲಿವೆ. ಮಕ್ಕಳು ಅಲ್ಲದೆ ಬೀದಿಗಳಲ್ಲಿ ಜನರು ಆತಂಕದಿಂದ ಓಡಾಡುವ ಪರಿಸ್ಥಿತಿ ಎದುರಾಗಿದೆ.ದಿನದಿಂದ ದಿನಕ್ಕೆ ಕೋತಿಗಳ ಕಾಟ ಹೆಚ್ಚಾಗುತ್ತಿದ್ದು, ಕೋತಿಗಳಿಂದ ಅನಾಹುತ ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ಕಡೆ ಗಮನ ಹರಿಸಬೇಕು ಎಂದು ಈ ಮೂಲಕ ಮನವಿ.

–ಪ್ರಕಾಶ್ ಆಲಗೂಡು, ತಿ.ನರಸೀಪುರ

ರಸ್ತೆಗಳಿಗೆ ಇಲ್ಲದ ಭಾಗ್ಯ ಫುಟ್‌ಪಾತ್‌ಗಳಿಗೇಕೆ?!

ಮಾನ್ಯರೆ,



ಪ್ರತಿ ದಿನವೂ ಪತ್ರಿಕೆಗಳಲ್ಲಿ ಮೈಸೂರಿನ ವಿವಿಧ ಬಡಾವಣೆಗಳ ರಸ್ತೆಗಳ ದುಸ್ಥಿತಿಯ ಬಗ್ಗೆ ನಾಗರಿಕರು ಬರೆಯುತ್ತಲೇ ಇದ್ದು, ಪ್ರಕಟವಾಗುತ್ತಲೂ ಇವೆ. ಆದರೂ ನಗರಪಾಲಿಕೆ ಇವುಗಳ ಬಗ್ಗೆ ಕ್ಯಾರೇ ಅನ್ನುತ್ತಿಲ್ಲ. ನಗರದಲ್ಲಿ ಒಳ್ಳೆಯ ರಸ್ತೆಗಳೇ ಇಲ್ಲದೇ, ಹಳ್ಳ ಕೊಳ್ಳ, ಗುಂಡಿಗಳು ಮುಚ್ಚಿದರೆ ಸಾಕೆಂದು ನಾಗರಿಕರು ಇದ್ದರೆ, ರಸ್ತೆ ಬದಿಯ ಫುಟ್‌ಪಾತ್‌ಗಳಲ್ಲಿ ಇಂಟರ್‌ಲಾಕ್ ಟೈಲ್ಸ್‌ಗಳನ್ನು ಕೂರಿಸುವ ಕೆಲಸ ಮೇಟಗಳ್ಳಿಯಲ್ಲಿ ನಡೆಯುತ್ತಿದೆ. ನಗರದ ಮೇಟಗಳ್ಳಿ ವಾರ್ಡ್ ಸಂಖ್ಯೆ 4ರ ಹೆಬ್ಬಾಗಿಲಿನಿಂದ ಹೆಬ್ಬಾಳದವರೆಗೂ ಇರುವ ಈ ಮುಖ್ಯ ರಸ್ತೆಯ ಎರಡೂ ಬದಿಗಳ ಉತ್ತಮವಾಗಿಯೇ ಇದ್ದ ಫುಟ್‌ಪಾತಿನ ಮೇಲೆ ಇಂಟರ್‌ಲಾಕ್ ಟೈಲ್ಸ್‌ಗಳನ್ನು ಹಾಕುತ್ತಿದ್ದು, ನಗರಪಾಲಿಕೆ ತೆರಿಗೆದಾರರ ಹಣವನ್ನು ಈ ರೀತಿ ಪೋಲು ಮಾಡುತ್ತಿರುವುದು ಎಷ್ಟರಮಟ್ಟಿಗೆ ಸರಿ? ಅಷ್ಟಕ್ಕೂ ಇಲ್ಲಿ ವಾಹನ ನಿಲುಗಡೆಗಾಗಿ ಈ ರೀತಿ ಎಂದು ಪಾಲಿಕೆಯವರು ತಿಳಿದಿದ್ದಲ್ಲಿ, ಇದ್ದ ಡಾಂಬರು ಫುಟ್‌ಪಾತಿನ ಮೇಲೆ ವಾಹನಗಳನ್ನು ನಿಲ್ಲಿಸಲು ತೊಂದರೆಯಾಗುತ್ತಿತ್ತು ಎಂದು ಯಾರಾದರೂ ದೂರಿದ್ದರೆ? ಈ ರೀತಿಯ ಟೈಲ್ಸ್ ಅಳವಡಿಕೆಯಿಂದಾಗಿ, ಮಳೆ ನೀರು ಇಂಗದೇ ಹರಿದು ಹೋಗಿ, ಗಟಾರ, ಮೋರಿಗಳು ತುಂಬಿ ಕಟ್ಟಿಕೊಂಡು, ಅಂತರ್ಜಲ ಕುಸಿತಕ್ಕೂ ಕಾರಣವಾಗುತ್ತದೆ. ಒಟ್ಟಾರೆ, ನಗರದ ರಸ್ತೆಗಳಿಗೆ ಇಲ್ಲದ ಭಾಗ್ಯ ಫುಟ್‌ಪಾತಿಗೆ ಆಗುತ್ತಿರುವುದು ವಿಪರ್ಯಾಸದ ಜೊತೆಗೆ, ಮುಂಡಾಯಿಸುವ ಬಗ್ಗೆ ಹೊಸ ಹೊಸ ಯೋಜನೆಗಳನ್ನು ಜಾರಿಗೊಳಿಸುತ್ತಿರುವ ಪಾಲಿಕೆಯವರಿಗೆ ಶಹಬ್ಬಾಶ್ ಎನ್ನಬೇಕೆ ತಿಳಿಯುತ್ತಿಲ್ಲವಷ್ಟೆ.

–ವಿಜಯ್ ಹೆಮ್ಮಿಗೆ, ಮೈಸೂರು

ವಿದ್ಯುತ್ ನಿಲುಗಡೆಗೆ ಸೂಚನೆ ಅಗತ್ಯ

ಮಾನ್ಯರೆ

ಈ ದಿನ (4/11/22) ಕುವೆಂಪುನಗರದಲ್ಲಿ ಬೆಳಗ್ಗೆ 10 ಗಂಟೆಯಿಂದ ವಿದ್ಯುತ್ ಇಲ್ಲ. ಇದೇ ರೀತಿ ತಿಂಗಳಲ್ಲಿ ಕನಿಷ್ಠ ಒಮ್ಮೆಯಾದರೂ ಆಗುತ್ತಿರುತ್ತದೆ. ಬಳಕೆದಾರರಿಗೆ ಯಾವುದೇ ಮುನ್ಸೂಚನೆ ಇರುವುದಿಲ್ಲ. ಯಾವ ಏರಿಯಾದಲ್ಲಿ ವಿದ್ಯುತ್ ತೆಗೆಯುತ್ತಾರೋ ಆ ಪ್ರದೇಶದ ಬಳಕೆದಾರರ ದೂರವಾಣಿ ಸಂಖ್ಯೆ ವಿದ್ಯುತ್ ಕಚೇರಿಯಲ್ಲಿ ಇರುತ್ತದೆ. ವಿದ್ಯುತ್ ದರವನ್ನು ಅಡ್ಡಾಡಿಡ್ಡಿ ಏರಿಸಿದ್ದಾರೆ. ಹಣಕ್ಕೇನು ಕೊರತೆಯಿಲ್ಲ. ಅಂಥದರಲ್ಲಿ ಎಲ್ಲಾ ಬಳಕೆದಾರರ ಫೋನ್‌ಗೆ ಸಂದೇಶ ಕಳಿಸುವುದು ಏನೂ ಕಷ್ಟವಲ್ಲ. ಕರ್ತವ್ಯ ಪ್ರಜ್ಞೆ, ಇಚ್ಛಾಶಕ್ತಿ ಇರಬೇಕು. ಚೆಸ್ಕಾಂನ ಮುಖ್ಯ ಅಧಿಕಾರಿಗಳು ಸಂಬಂಧಪಟ್ಟವರಿಗೆ ಸೂಚನೆ ನೀಡಲಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ.

ಬೇಂದ್ರೆ ಸಾಲುಗಳ ನೆನಪು...

ಮಾನ್ಯರೆ,

ರಾಘವೇಂದ್ರ ಸಿ.ಎಸ್. ಅವರ 'ಬಡವನಾದರೆ ಏನು ಪ್ರಿಯೆ..." (ಅ.24) ಕುರಿತು : ವರಕವಿ ದ.ರಾ. ಬೇಂದ್ರೆಯವರು ಬಹಳ ಹಿಂದೆಯೇ ಹೀಗೆ ಹಾಡಿ(ಸಿ)ದ್ದು ನೆನಪಿಗೆ ಬಂತು:

ನಾನು ಬಡವಿ, ಆತ ಬಡವ
ಒಲವೆ ನಮ್ಮ ಬದುಕು;
ಬಳಸಿಕೊಂಡೆವದನ ನಾವು
ಅದುಕು ಇದಕು ಎದುಕು!
ತೋಳುಗಳಿಗೆ ತೋಳ ಬಂದಿ,
ಕೆನ್ನೆ ತುಂಬ ಮುತ್ತು...

ಪಾತ್ರೋಟಕದಂ ಇದಕ್ಕಿಂತ ಉತ್ತಮ ಕವನವೆ? ದ.ರಾ. ಬೇಂದ್ರೆಯವರನ್ನು (ಅಥವಾ ಕುವೆಂಪು ಅವರನ್ನು) ಯಾರು ತಾನೆ ಮೀರಿಸಬಲ್ಲರು? (ಕೆ.ಎಸ್.ಎನ್. ಕೂಡ ಸ್ಮರಣೀಯರು).

–ಸಿಪಿಕೆ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ನಿದ್ರೆ ಮಾಡುವಾಗ ಕಾಣುವುದು ಕನಸಲ್ಲ !!!

ನಾವೆಲ್ಲಾ ಏನಾದರೂ ಕನಸು ಕಾಣುತ್ತಿರುತ್ತೇವೆ. ಕೆಲವು ಸಲ ಎಚ್ಚರವಾಗಿರುವಾಗಲೂ ಎಲ್ಲೋ ಶೂನ್ಯದಲ್ಲಿ ದೃಷ್ಟಿಯನ್ನು ನೆಟ್ಟು ಕನಸು ಕಾಣುತ್ತೇವೆ. ಕಣ್ಣುಬಿಟ್ಟು ಕನಸು ಕಾಣುವುದು ಮತ್ತೊಂದು ಬಗೆಯದು. ರಾತ್ರಿ ನಿದ್ರೆಯಲ್ಲಿ ಕನಸು ಕಾಣುವುದು ಇನ್ನೊಂದು ರೀತಿ. ಕನಸು ನಮಗೆ ಕೋಪ, ಶಾಂತತೆ, ಬೇಸರ, ನೋವು, ನಲಿವು ಎಲ್ಲವನ್ನೂ ಉಂಟು ಮಾಡುತ್ತದೆ. ಕನಸು ಯಾರಿಗೂ ಬೀಳುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ಎಲ್ಲರಿಗೂ ಕನಸು ಬಿದ್ದೇ ಬೀಳುತ್ತದೆ. ಆದರೆ ಕನಸು ಮಾತ್ರ ನಮ್ಮ ಮನಸ್ಥಿತಿಯನ್ನು ಅವಲಂಬಿಸಿರುತ್ತದೆ. ಮನಸ್ಸು ಶಾಂತವಾಗಿದ್ದಾಗ, ನೆಮ್ಮದಿಯಲ್ಲಿದ್ದಾಗ ಕಾಣುವ ಕನಸೇ ಬೇರೆ. ಮನಸ್ಸು ಉದ್ವಿಗ್ನವಾಗಿದ್ದಾಗ, ದೇಹದಲ್ಲಿ ಅಥವಾ ಮನಸ್ಸಿನಲ್ಲಿ ಆಲಸ್ಯ ಉಂಟಾದಾಗ ಕಾಣುವ ಕನಸೇ ಬೇರೆಯಾಗಿರುತ್ತದೆ. ನಾವು ವಾಸಿಸುವ ಪರಿಸರವೂ ನಮ್ಮ ಕನಸಿನೊಡನೆ ಸಂಬಂಧ ಹೊಂದಿರುತ್ತದೆ. ಕೆಲವು ಸಲ ಎಚ್ಚರವಾದಾಗ ಏನೋ ಒಳ್ಳೆಯ ಅಥವಾ ಕೆಟ್ಟ ಕನಸು ಬಿದ್ದಿತ್ತು ಎಂದು ಗೊತ್ತಾಗುತ್ತದೆ, ಆದರೆ ಅದು ಏನು ಎಂಬುದು ನೆನಪಿರುವುದಿಲ್ಲ. ಒಳ್ಳೆಯ ಕನಸು ದಿನವನ್ನು ಉಲ್ಲಾಸಭರಿತವಾಗಿಸಿದರೆ, ಕೆಟ್ಟ ಕನಸು ದೈಹಿಕ ಆಲಸ್ಯ ತರುತ್ತದೆ.

ಈಗ ಪ್ರಸ್ತಾಪಿಸುತ್ತಿರುವ ವಿಷಯ ಕನಸಿನ ವಿಶ್ಲೇಷಣೆಗೆ ಸಂಬಂಧಿಸಿದ್ದಲ್ಲ. ಆದರೆ ಕನಸು ಕಾಣುವ ಬಗೆಯದ್ದಾಗಿದೆ. ಹಾಗೆ ನೋಡಿದರೆ ನಾವು ನಿದ್ರೆಯಲ್ಲಿ ಕಾಣುವುದು ಕನಸೇ ಅಲ್ಲ. ಕನಸು ಎಂದರೆ ಸಾಧಿಸುವಂತಹುದನ್ನು ಕಾಣುವುದಾಗಿದೆ. ಯಾವ ಕನಸು ನಮ್ಮನ್ನು ನಿದ್ರಿಸಲು ಬಿಡುವುದಿಲ್ಲವೋ, ಅದೇ ನಿಜವಾದ ಕನಸು ಎಂದು ಭಾವಿಸಬೇಕು. ನಿದ್ರೆ ಬಂದಾಗ ನಮಗೆ ಅರಿವಿಲ್ಲದ, ಸಂಬಂಧವೇ ಇಲ್ಲದ ವಿಷಯಗಳ ಬಗ್ಗೆ ಕನಸು ಬೀಳುತ್ತವೆ. ತಾನು ಏನನ್ನೋ ಸಾಧಿಸಿದಂತೆ, ತಾನು ಯಾರೊಡನೆಯೋ ಹೊಂದಿದ್ದ ದ್ವೇಷವನ್ನು ತೀರಿಸಿಕೊಂಡಂತೆ, ತನ್ನ ವ್ಯಾಪಾರದಲ್ಲಿ ಅಪಾರವಾದ ಲಾಭ ಗಳಿಸಿದ ಹಾಗೆ ಅಥವಾ ನಷ್ಟವಾದ ಹಾಗೆ ಕನಸು ಬೀಳುತ್ತದೆ. ಇದಕ್ಕೆ ನಾವು ವಿಶೇಷವಾದ ಶ್ರಮವನ್ನೇನೂ ಹಾಕಬೇಕಾಗಿಲ್ಲ. ಗಾಢವಾದ ನಿದ್ರೆ ಕನಸಿಗೆ ಕಾರಣವಾಗುತ್ತದೆ. ಆದರೆ ಜೀವನ ಕಟ್ಟಿಕೊಳ್ಳುವಂತಹ ಕನಸು ಕಾಣುವುದೇ ನಿಜವಾದ ಕನಸು. ಕನಸಲ್ಲಿ ಕಂಡದ್ದನ್ನು ಸಾಕಾರಗೊಳಿಸಲು ಹಾತೊರೆಯುವ ಮನಸ್ಸು ಅದನ್ನು ಸಾಧಿಸುವಂತೆ ಮಾಡಿಬಿಡುತ್ತದೆ.

ಈಗ್ಗೆ ಎರಡು ಮೂರು ದಶಕಗಳ ಹಿಂದಿನ ಸ್ಥಿತಿಯನ್ನು ಒಮ್ಮೆ ಗಮನಿಸಿದರೆ, ಆಗ ಟಿವಿ ಇರಲಿಲ್ಲ, ಮೊಬೈಲ್ ಇರಲಿಲ್ಲ, ಕಂಪ್ಯೂಟರ್‌ಗಳು ಈಗಿನಂತಿರಲಿಲ್ಲ, ಲ್ಯಾಪ್‌ಟಾಪ್ ಇರಲಿಲ್ಲ. ಆದರೆ ಈಗ ಅವೆಲ್ಲಾ ನಮ್ಮ ಕೈಯಲ್ಲಿದೆ. ಈಗ್ಗೆ ಮೂವತ್ತು ವರ್ಷದ ಹಿಂದೆ ಮನೆಗಳಲ್ಲಿ ಟಿವಿ ಇರಲಿಲ್ಲ. ಅಲ್ಲೊಂದು ಇಲ್ಲೊಂದು ಮನೆಗಳಲ್ಲಿ ಕಾಣಬಹುದಾಗಿದ್ದರೂ, ಅದು ನಮ್ಮ ಮನೆಗೇ ಬರುತ್ತದೆ ಎಂದು ನಾವು ಎಣಿಸಿರಲಿಲ್ಲ. ಆದರೆ ಈಗ ಮನೆಗೆ ಒಂದೆರಡರಂತೆ ಟಿವಿಗಳು ಬಂದಿವೆ. ಒಮ್ಮೆ ಚಾನಲ್ ಎಂದರೆ ದೂರದರ್ಶನ ಎಂಬಂತಿದ್ದುದು ಇಂದು ಸಾವಿರಾರು ಚಾನಲ್‌ಗಳಾಗಿವೆ. ಕನ್ನಡದ್ದೇ ಬಹುಶಃ ಐವತ್ತಕ್ಕೂ ಹೆಚ್ಚು ಚಾನಲ್‌ಗಳಿವೆ. ಇಡೀ ದಿನ ನಮ್ಮ ಟಿವಿಯಲ್ಲಿ ಯಾವ ಚಾನಲ್‌ಗಳು ಬರುತ್ತಿವೆ? ಎಂದು ತಡಕಾಡಿದರೆ ದಿನ ಮುಗಿದು ಹೋಗುವಂತಹ ಸನ್ನಿವೇಶ ಇದೆ. ಇದೆಲ್ಲಾ ಹೇಗೆ ಸಾಧ್ಯವಾಯಿತು? ಎಲ್ಲರ ಜೇಬಲ್ಲೂ ಮೊಬೈಲ್ ರಿಂಗುಣಿಸುತ್ತದೆ ಎಂದರೆ ಎಂತಹ ಪವಾಡವಲ್ಲವೇ? ಇದೆಲ್ಲಾ ನಾವು ಕಂಡ ಕನಸಲ್ಲ. ಆದರೆ ಯಾರೋ ಕಂಡ ಕನಸಿನಿಂದ ಇವೆಲ್ಲಾ ಸಾಕಾರವಾಗಿದೆ. ಅದರ ಫಲವನ್ನು ನಾವು ಅನುಭವಿಸುತ್ತಿದ್ದೇವೆ ಅಷ್ಟೆ. ಇಂತಹ ಸಾಧನೆಯನ್ನು ಮಾತ್ರ ಕನಸು ಎಂದು ಕರೆಯಬೇಕು. ಆರಾಮವಾಗಿ ತಿಂದು ಮಲಗಿದಾಗ ಕಾಣುವುದು ಕನಸಲ್ಲ. ಮೇಲೆ ಹೇಳಿದ ವಸ್ತುಗಳೆಲ್ಲಾ ಹೇಗೆ ಸಾಕಾರವಾಯಿತು? ಎಂದು ಯೋಚಿಸಬೇಕು. ಅದೆಲ್ಲಾ ಮುಂದೆ ನಮ್ಮ ಕೈಗೆ ಬರಬಹುದು ಎಂಬುದೇ ನಮಗೆ ಗೊತ್ತಿರಲಿಲ್ಲ. ಮುಂದೆ ಮತ್ತೇನು ಬರಬಹುದೋ? ನಮಗೆ ಊಹಿಸಲೂ ಸಾಧ್ಯವಿಲ್ಲ!!

ಈ ಹಿಂದೆ ಟಿವಿಗಳು ಮಾರುಕಟ್ಟೆಗೆ ಬಂದಿದ್ದಾಗ, ಅದನ್ನು ಒಮ್ಮೆ ಕೊಂಡರೆ ಆಯಿತು. ಮತ್ತೆ ಕೊಳ್ಳುವ ಅಗತ್ಯವಿಲ್ಲ ಎನಿಸಿತ್ತು. ಏಕೆಂದರೆ ಅಗ ಮಾರುಕಟ್ಟೆಯಲ್ಲಿ ಹಾಗೆ ಹೇಳಲಾಗುತ್ತಿತ್ತು. ಆದರೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಾವು ನಮ್ಮ ಮನೆಯಲ್ಲಿ ಎಷ್ಟು ಟಿವಿ ಸೆಟ್‌ಗಳನ್ನು ಬದಲಿಸಿದ್ದೇವೆ? ಹಳೆಯದನ್ನು ಕೊಡಲಾಗದಿದ್ದವರ ಮನೆಗಳಲ್ಲಿ ನಾಲ್ಕಾರು ಸೆಟ್‌ಗಳು ವ್ಯರ್ಥವಾಗಿ ಬಿದ್ದಿರುತ್ತವೆ. ಇದೇಕೆ ಹೀಗಾಯಿತು? ಒಂದು ಸಲ ತೆಗೆದುಕೊಂಡ ಟಿವಿಯನ್ನು ನಾವು ಪದೇ ಪದೆ ಏಕೆ ಬದಲಿಸಿದ್ದೇವೆ? ಈಗಲೂ ಹೊಸದಾದ ಟಿವಿ ಮಾರಾಟದ ಜಾಹೀರಾತು ನೋಡಿದಾಗ ಮತ್ತೆ ನಮ್ಮ ಟಿವಿಯನ್ನು ಬದಲಿಸಬೇಕು ಎನಿಸುವುದಾದರೂ ಏಕೆ? ಯಾವ ಟಿವಿಯಾದರೂ ಅದೇ ದೃಶ್ಯವೇ ಆದರೂ, ಬದಲಾಯಿಸುವ ಮನಸ್ಸು ಏಕೆ ಬರುತ್ತದೆ? ಹತ್ತಿಪ್ಪತ್ತು ಸಾವಿರ ರೂಪಾಯಿಗೆ ಬರುತ್ತಿದ್ದ ಟಿವಿಗಳ ಬೆಲೆ ಇಂದು ನಾಲ್ಕಾರು ಲಕ್ಷವಾಗಿರುವುದಾದರೂ ಹೇಗೆ? ಹಾಗೂ ಅದಕ್ಕೆ ಅಷ್ಟು ದುಡ್ಡಾದರೂ, ಅದನ್ನು ಕೊಳ್ಳುವ ಮನಸ್ಸು ಏಕೆ ಬರುತ್ತದೆ? ಎಂಬ ಬಗ್ಗೆ ಯೋಚಿಸಬೇಕಾಗುತ್ತದೆ.

> ❝ ಕನಸು ಎಂದರೆ ಸಾಧಿಸುವಂತಹುದನ್ನು ಕಾಣುವುದಾಗಿದೆ. ಯಾವ ಕನಸು ನಮ್ಮನ್ನು ನಿದ್ರಿಸಲು ಬಿಡುವುದಿಲ್ಲವೋ, ಅದೇ ನಿಜವಾದ ಕನಸು ಎಂದು ಭಾವಿಸಬೇಕು. ನಿದ್ರೆ ಬಂದಾಗ ನಮಗೆ ಅರಿವಿಲ್ಲದ, ಸಂಬಂಧವೇ ಇಲ್ಲದ ವಿಷಯಗಳ ಬಗ್ಗೆ ಕನಸು ಬೀಳುತ್ತವೆ. ತಾನು ಏನನ್ನೋ ಸಾಧಿಸಿದಂತೆ, ತಾನು ಯಾರೊಡನೆಯೋ ಹೊಂದಿದ್ದ ದ್ವೇಷವನ್ನು ತೀರಿಸಿಕೊಂಡಂತೆ, ತನ್ನ ವ್ಯಾಪಾರದಲ್ಲಿ ಅಪಾರವಾದ ಲಾಭ ಗಳಿಸಿದ ಹಾಗೆ ಅಥವಾ ನಷ್ಟವಾದ ಹಾಗೆ ಕನಸು ಬೀಳುತ್ತದೆ. ಇದಕ್ಕೆ ನಾವು ವಿಶೇಷವಾದ ಶ್ರಮವನ್ನೇನೂ ಹಾಕಬೇಕಾಗಿಲ್ಲ. ಗಾಢವಾದ ನಿದ್ರೆ ಕನಸಿಗೆ ಕಾರಣವಾಗುತ್ತದೆ. ಆದರೆ ಜೀವನ ಕಟ್ಟಿಕೊಳ್ಳುವಂತಹ ಕನಸು ಕಾಣುವುದೇ ನಿಜವಾದ ಕನಸು.



ಇದು ಟಿವಿ ಬಗ್ಗೆ ಮಾತ್ರವಲ್ಲ. ಕಾರು, ದ್ವಿಚಕ್ರವಾಹನ, ಗೃಹೋಪಯೋಗಿ ವಸ್ತುಗಳು, ಗೃಹಾಲಂಕಾರ ಸಾಮಗ್ರಿಗಳು ಇವೆಲ್ಲದರಲ್ಲೂ ಇಂತಹುದೇ ರೀತಿ ಕಂಡುಬರುತ್ತದೆ. ಮನೆಯಲ್ಲಿರುವ ವಸ್ತು ಸರಿಯಾಗಿ ಬಾಳಿಕೆ ಬರುತ್ತಿದ್ದರೂ ಅದನ್ನು ಬದಲಿಸಬೇಕು ಎಂಬ ಮನಸ್ಸು ಏಕೆ ಆಗುತ್ತದೆ? ಎಂಬುದನ್ನೂ ವಿಶ್ಲೇಷಿಸಬೇಕಾಗುತ್ತದೆ. ಇಲ್ಲೆಲ್ಲಾ ಆಗುತ್ತಿರುವುದು ಯಾರೋ ಕಂಡ ಕನಸಿನ ಫಲ ಎಂದು ಹೇಳಬಹುದು. ಅವರು ನಿದ್ರೆಗೆಟ್ಟು ಮಾಡಿದ ಸಂಶೋಧನೆಯನ್ನು ನಾವು ನಿರಾಕರಿಸದೆ ಅದನ್ನು ಕೊಳ್ಳುವ ಮನಸ್ಸು ಮಾಡುತ್ತೇವೆ. ಇಂತಹ ಭಾವನೆ ಬರುವಂತೆ ಮಾಡುವುದೇ ನಿಜವಾದ ಕನಸು. ಅಂತಹುದು ಆಗಬೇಕು ಎಂದು ಬಯಸಿದವರು ಕಂಡದ್ದೇ ನಿಜವಾದ ಕನಸು. ನಾವು ನಿದ್ರೆ ಮಾಡುವಾಗ ಅಗಾಗ್ಗೆ ಕಾಣುವ ಕನಸು ನನಸಾಗುವುದಿಲ್ಲ. ಅದು ಕೇವಲ ದೃಶ್ಯಕ್ಕೆ ಸೀಮಿತವಾದ ತಾತ್ಕಾಲಿಕ ವಿಷಯದ ಕನಸು. ಅದು ನಿಜವಾದ ಕನಸಲ್ಲ.

ಮನುಷ್ಯ ಪುರಾತನ ಕಾಲದಿಂದಲೂ ತನಗೆ ಹೊಸದಾಗಿ ಏನಾದರೂ ಬೇಕು ಎಂಬ ಅನ್ವೇಷಣೆಯಲ್ಲಿ ತೊಡಗಿದ್ದಾನೆ. ಶಿಲಾಯುಗದಲ್ಲಿ ಕಲ್ಲಿನಿಂದ ಮಾಡುವ ಆಯುಧ ಕಂಡುಹಿಡಿದರೆ, ನಂತರ ಕಬ್ಬಿಣ, ಮೊದಲಾದವುಗಳ ಅನ್ವೇಷಣೆಯ ನಂತರ ಅದಕ್ಕೆ ತಕ್ಕ ಆಯುಧ ಕಂಡುಹಿಡಿದ. ಆಧುನಿಕ ಕಾಲದಲ್ಲೂ ಈ ಅನ್ವೇಷಣೆ ನಿಂತಿಲ್ಲ. ಅದರ ಫಲವೇ ಮಾರುಕಟ್ಟೆಯಲ್ಲಿ ಒಂದಲ್ಲಾ ಒಂದು ಹೊಸ ರೀತಿಯ ವಸ್ತುಗಳು ಕಂಡುಬರುತ್ತದೆ. ಇಂದು ಮಾರುಕಟ್ಟೆಗೆ ಒಂದು ಕಂಪನಿ ಒಂದು ಹೊಸ ವಸ್ತು ಬಿಡುಗಡೆ ಮಾಡಿದೆ ಎಂದ ಕೂಡಲೇ ಮತ್ತೊಂದು ಕಂಪನಿ ಅದಕ್ಕಿಂತ ಉತ್ಕೃಷ್ಟವಾದ ವಸ್ತು ಕಂಡುಹಿಡಿಯಲು ಆರಂಭಿಸುತ್ತದೆ. ಹಾಗೆಯೇ ಮೊದಲು ಕಂಡುಹಿಡಿದ ಕಂಪನಿಯೂ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಅದೂ ತನ್ನ ಉತ್ಪನ್ನವನ್ನು ಮತ್ತಷ್ಟು ಹೇಗೆ ನವೀಕರಿಸಬಹುದು? ಎಂದು ಯೋಚಿಸುತ್ತದೆ. ಇದನ್ನು ಕನಸು ಎಂದು ಕರೆಯಬೇಕು. ಅವರು ಕಂಡ ಕನಸು ಅವರ ಶ್ರಮದಿಂದಾಗಿ ಮತ್ತೊಂದು ಉತ್ಪನ್ನದ ರೂಪದಲ್ಲಿ ಮಾರುಕಟ್ಟೆಗೆ ಬರುತ್ತದೆ. ಅದನ್ನು ಜಾಹೀರಾತಿನ ಮೂಲಕ ಜನರಿಗೆ ತಲುಪಿಸಲಾಗುತ್ತದೆ, ಜನ ಕೊಂಡುಕೊಳ್ಳುತ್ತಾರೆ. ಹೀಗೆ ಹೊಸಹೊಸದಾದ ವಸ್ತುಗಳ ಅಗತ್ಯತೆ ಹಾಗೂ ಅದನ್ನು ಹೇಗೆ ರೂಪಿಸುವುದು ಎಂಬ ಆಲೋಚನೆಯೇ ಕನಸು.

ನಿಜ. ಇದೆಲ್ಲಾ ವಿಜ್ಞಾನಿಗಳಿಗೆ ಸಂಬಂಧಿಸಿದ್ದು. ಹಾಗಾದರೆ ನಾವು ಯಾವ ರೀತಿಯ ಕನಸು ಕಾಣಬಹುದು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಾವು ವಿಜ್ಞಾನಿಗಳಲ್ಲದಿದ್ದರೂ ನಮ್ಮದೇ ಆದ ಒಂದು ಜೀವನ ವಿದೆಯಲ್ಲಾ!! ಅದನ್ನೇ ಮತ್ತಷ್ಟು ಆವಿಷ್ಕಾರಕ್ಕೆ ಒಳಪಡಿಸಿ ಜೀವನ ಮತ್ತಷ್ಟು ಸುಂದರವಾಗುವಂತೆ ಮಾಡಿಕೊಳ್ಳುವುದನ್ನು ಮಾಡಬಹುದು. ಇಂದು ನಾವು ಸಮಯದ ಬಗ್ಗೆ ಹೆಚ್ಚಾಗಿ ಮಾತನಾಡುತ್ತೇವೆ. ನಮಗೆ ಸಮಯವಿಲ್ಲ ಎಂದು ಸಾಮಾನ್ಯವಾಗಿ ಹೇಳುತ್ತೇವೆ. ಆದರೆ ದಿನ ಮುಗಿಯುವ ಹಂತದಲ್ಲಿ ನಾನು ಬೆಳಿಗ್ಗೆಯಿಂದ ಏನು ಮಾಡಿದೆ ಎಷ್ಟು ಸಮಯವನ್ನು ಯಾವುದಕ್ಕೆ ಉಪಯೋಗಿಸಿದೆ ಎಂಬ ವಿಶ್ಲೇಷಣೆ ಮಾಡಿಕೊಂಡಾಗ, ನಾವು ಅನವಶ್ಯಕವಾಗಿ ಎಷ್ಟು ಸಮಯ ಕಳೆದಿದ್ದೇವೆ ಎಂದು ಗೊತ್ತಾಗುತ್ತದೆ. ಪ್ರತಿದಿನ ಎರಡುಗಂಟೆ ಟಿವಿ ನೋಡಿದರೆ ವಾರಕ್ಕೆ ಹದಿನಾಲ್ಕು ಗಂಟೆ, ತಿಂಗಳಿಗೆ ಅರವತ್ತು ಗಂಟೆ, ವರ್ಷಕ್ಕೆ ಏಳುನೂರ ಇಪ್ಪತ್ತು ಗಂಟೆ. ಅಂದರೆ ಸುಮಾರು ಮೂವತ್ತು ದಿನ. ಇದನ್ನು ವ್ಯರ್ಥದ ಸಮಯ ಎಂದೇ ಪರಿಭಾವಿಸಬೇಕು. ಇಷ್ಟು ಸಮಯವನ್ನು ಇತರೆ ಕೆಲಸಕ್ಕೆ ಉಪಯೋಗಿಸಿದರೆ ಏನನ್ನಾದರೂ ಸಾಧಿಸಬಹುದು. ಇದು ದಿನಕ್ಕೆ ಎರಡು ಗಂಟೆಯ ಲೆಕ್ಕಾಚಾರ. ಇದು ನಾಲ್ಕು ಗಂಟೆಯಾದರೆ, ಆರು ಗಂಟೆಯಾದರೆ ಎಷ್ಟು ಸಮಯ ಹಾಳಾಗುತ್ತದೆ? ಎಂದು ಲೆಕ್ಕ ಹಾಕಬೇಕು. ಹೀಗಾದಾಗ ಸಮಯವಿಲ್ಲ ಎನ್ನುವುದಕ್ಕೆ ಅರ್ಥವೇ ಇರುವುದಿಲ್ಲ. ಇದು ಟಿವಿ ನೋಡುವುದಕ್ಕೆ ಸಂಬಂಧಿಸಿದ್ದು. ಇದನ್ನು ಹೊರತುಪಡಿಸಿ ನಾವು ಮಾಡುವ ಅನಗತ್ಯವಾದ ನಿದ್ರೆ, ಅನಗತ್ಯ ತಿರುಗಾಟಗಳ ಬಗ್ಗೆಯೂ ಇದೇ ರೀತಿ ಲೆಕ್ಕ ಹಾಕಿದರೆ ನಮಗೆ ಸಮಯವಿಲ್ಲ ಎನ್ನುವುದು ಹಾಸ್ಯಾಸ್ಪದ ಹೇಳಿಕೆ ಎಂದು ಕಂಡುಬರುತ್ತದೆ. ಮೊದಲು ನಾವು ನಮ್ಮ ಮನಸ್ಥಿತಿಯನ್ನು ಬದಲಿಸಿಕೊಳ್ಳಬೇಕು. ನಮ್ಮಿಂದ ಏನು ಮಾಡಲು ಸಾಧ್ಯ ಎಂಬ ಬಗ್ಗೆ ಯೋಚಿಸಬೇಕು.

ಬಹಳ ಸಲ ನಾವು ನಮ್ಮ ಬಗ್ಗೆ ಯೋಚಿಸುವ ಬದಲು ಬೇರೆಯವರು ನಮ್ಮ ಬಗ್ಗೆ ಏನು ಅಭಿಪ್ರಾಯ ಹೊಂದಿದ್ದಾರೆ? ಎಂಬ ಬಗ್ಗೆಯೇ ತಲೆ ಕೆಡಿಸಿಕೊಳ್ಳುತ್ತೇವೆ. ಅವರುಗಳು ನನ್ನ ಬಗ್ಗೆ ಏನು ಅಂದುಕೊಂಡುಬಿಡುತ್ತಾರೋ? ನಮ್ಮ ನೆಂಟರು ನನ್ನ ಬಗ್ಗೆ ಏನು ಅಂದುಕೊಳ್ಳುತ್ತಾರೋ ಎಂಬ ಬಗ್ಗೆ ಯೋಚಿಸುತ್ತಾ ನಮ್ಮ ಅಮೂಲ್ಯ ಸಮಯವನ್ನು ಕಳೆದುಕೊಂಡುಬಿಡುತ್ತೇವೆ. ದೇವರು ನನಗೆ ಏನು ಅವಕಾಶಗಳನ್ನು ಕೊಟ್ಟಿದ್ದಾನೆ? ಅದನ್ನು ಹೇಗೆ ಸದ್ವಿನಿಯೋಗಪಡಿಸಿಕೊಳ್ಳಬಹುದು? ಎಂಬ ಬಗ್ಗೆ ಹೆಚ್ಚು ಆಲೋಚನೆ ಮಾಡುವುದು ಸೂಕ್ತ. ನಮಗೆ ನಾವು ಕಂಡ ಅನೇಕ ವಿಷಯಗಳು ವಿಶಿಷ್ಟ ಎನಿಸುತ್ತದೆ. ಯಾವುದೋ ವಿಶೇಷವನ್ನು ನೋಡಿದಾಗ ನಾನೂ ಹಾಗೆ ಮಾಡುವಂತಾದರೆ ಎಷ್ಟು ಚೆನ್ನಾಗಿತ್ತು ಎಂದುಕೊಳ್ಳುತ್ತೇವೆ. ಹಾಗೆ ಮಾಡದಂತೆ ನಮ್ಮನ್ನು ತಡೆಯುವವರು ಯಾರೂ ಇರುವುದಿಲ್ಲ. ಆದರೂ ನಾವೇ ನನ್ನ ಕೈಯಲ್ಲಿ ಹಾಗೆ ಮಾಡಲಾಗುವುದಿಲ್ಲ ಎಂದು ತೀರ್ಮಾನ ತೆಗೆದುಕೊಂಡು ನಿಷ್ಕ್ರಿಯರಾಗಿ ಬಿಡುತ್ತೇವೆ.

ಇದೇ ರೀತಿ ವಿಜ್ಞಾನಿಗಳು, ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರು ಅಂದುಕೊಂಡರೆ ವಿಜ್ಞಾನ, ತಂತ್ರಜ್ಞಾನ ಹೀಗೆ ಬೆಳೆಯುತ್ತಿರಲಿಲ್ಲ. ನಮ್ಮ ಮನೆಯ ಚರಂಡಿ ಕಟ್ಟಿಕೊಂಡರೆ ಅದನ್ನು ಇತರರನ್ನು ಕರೆದು ಸರಿಪಡಿಸುವುದಕ್ಕಿಂತ ನಾನೇ ಸಮಸ್ಯೆ ಏನೆಂದು ಕಂಡುಹಿಡಿದು ಸರಿಪಡಿಸಿದಾಗ ಸಿಗುವ ಸಂತೋಷವೇ ಬೇರೆ. ಮನೆಯಲ್ಲಿ ಯಾವುದಾದರೂ ವಸ್ತುಗಳು ದುರಸ್ತಿಗೆ ಬಂದರೆ ಅದನ್ನು ನಾನು ಹೇಗೆ ಸರಿಪಡಿಸಬಹುದು? ಎಂದು ಯೋಚಿಸುವುದೂ ಹೊಸದನ್ನು ಕಂಡುಹಿಡಿದಂತೆಯೇ ಆಗುತ್ತದೆ. ಆದರೆ ಈ ಬಗ್ಗೆ ಯೋಚನೆ ಹಾಗೂ ತಾಳ್ಮೆ ಇರಬೇಕಾಗುತ್ತದೆ. ದೊಡ್ಡ ಸಾಧನೆಗಳು ಸಣ್ಣದರಿಂದಲೇ ಪ್ರಾರಂಭವಾಗುತ್ತದೆ ಎಂಬುದನ್ನು ಮರೆಯಬಾರದು. ನಮ್ಮ ಮನೆಯ ಪುಟ್ಟ ಮಕ್ಕಳು ಈ ಬಗ್ಗೆ ನಮಗೆ ಮನವರಿಕೆ ಮಾಡಿಕೊಡುತ್ತಾರೆ. ಒಮ್ಮೆ ನಡೆಯುವಾಗ ಬಿದ್ದರೆ ಅವು ನಡೆಯುವುದನ್ನು ಬಿಡುವುದಿಲ್ಲ. ಬಿದ್ದ ಕೆಲವೇ ಕ್ಷಣಗಳಲ್ಲಿ ಎಲ್ಲಿ ಬಿದ್ದಿತ್ತೋ ಅದೇ ಜಾಗದಲ್ಲಿ ಲೀಲಾಜಾಲವಾಗಿ ನಡೆದು ತೋರಿಸುತ್ತವೆ. ನಾವು ಅಂತಾಗಬೇಕು. ನಿದ್ರೆಯಲ್ಲಿ ಕನಸು ಕಾಣುವುದಕ್ಕಿಂತ ವಾಸ್ತವದಲ್ಲಿ ಏನನ್ನಾದರೂ ಸಾಧಿಸುವಂತಹ ಕನಸನ್ನು ಕಾಣಬೇಕು. ಅದೇ ಜೀವನದ ಸಾರ್ಥಕತೆ.

ಚಾಮುಂಡೇಶ್ವರಿ ಕ್ಷೇತ್ರದ ಅಕ್ರಮ-ಸಕ್ರಮ ಸಮಿತಿ ಸಭೆ

ಸಾಗುವಳಿ ಮಂಜೂರಿಗೆ 112 ಜನರ ಆಯ್ಕೆ




ಮೈಸೂರು,ನ.5(ಎಂಕೆ)–ಶಾಸಕ ಜಿ.ಟಿ. ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಅಕ್ರಮ–ಸಕ್ರಮ ಸಮಿತಿ ಸಭೆಯಲ್ಲಿ ಸಾಗುವಳಿ ಮಂಜೂರು ನೀಡಲು 112 ಜನರನ್ನು ಗುರ್ತಿಸಲಾಯಿತು.

ಮೈಸೂರು ತಾಲೂಕು ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಅಕ್ರಮ–ಸಕ್ರಮ ಸಮಿತಿ ಸಭೆಯಲ್ಲಿ ದೊಡ್ಡಮಾರಗೌಡನಹಳ್ಳಿಯ 16 ಜನರಿಗೆ, ಕಮರಹಳ್ಳಿಯ 2, ಕರಕರನಹಳ್ಳಿ 5, ಯಲಚಹಳ್ಳಿ 8, ಬೊಮ್ಮೇನಹಳ್ಳಿ 19, ನಾಗವಾಲ 16, ಚಿಕ್ಕನಹಳ್ಳಿ 27, ರಟ್ನಹಳ್ಳಿ 6, ದಡದಹಳ್ಳಿ 3, ಎಸ್.ಹೆಮ್ಮನಹಳ್ಳಿಯಲ್ಲಿ ಒಬ್ಬರಿಗೆ, ಗುಂಗ್ರಾಲ್‌ಛತ್ರದ 4 ಹಾಗೂ ಕಲೂರು ನಾಗನಹಳ್ಳಿಯ 5 ಜನರಿಗೆ ಸೇರಿ ಒಟ್ಟು 112 ಜನರಿಗೆ ಸಾಗುವಳಿಗೆ ಅವಕಾಶ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ನಮೂನೆ–53 ಮತ್ತು ನಮೂನೆ–57ರಲ್ಲಿ ಒಟ್ಟು 1692 ಅರ್ಜಿಗಳನ್ನು ಸಲ್ಲಿಸಿದ್ದು, ಅವುಗಳಲ್ಲಿ 402 ಅರ್ಜಿಗಳು ಮೈಸೂರು ನಗರದಿಂದ 10 ಕಿ.ಮೀ.ವ್ಯಾಪ್ತಿಯೊಳಗೆ ಇರುವುದರಿಂದ ತಿರಸ್ಕರಿಸಲಾಯಿತು. ಉಳಿದ 1178 ಅರ್ಜಿಗಳ ಪೈಕಿ 917 ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ ಅರ್ಜಿಗಳು ಗೋಮಾಳ, ಹಿಡುವಳಿ, ಕೆರೆ–ಕಟ್ಟೆ ಜಮೀನುಗಳಿಗೆ ಸಂಬಂಧಪಟ್ಟಿವೆ. 261 ಅರ್ಜಿಗಳು ವರದಿಗಾಗಿ ಬಾಕಿ ಇದ್ದು, ಚಿಕ್ಕನಹಳ್ಳಿ, ಮಾವಿನಹಳ್ಳಿ, ಗುಮ್ಮಚನಹಳ್ಳಿ, ಮದ್ದೂರು, ಅರಸನಕೆರೆ ಗ್ರಾಮಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯವರು ಜಂಟಿಯಾಗಿ ಸರ್ವೆ ಮಾಡಬೇಕಾಗಿರುವುದರಿಂದ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯವರು ಜಂಟಿಯಾಗಿ ಸರ್ವೆ ಮಾಡಿ ವರದಿಯನ್ನು ಡಿಸೆಂಬರ್ ತಿಂಗಳೊಳಗೆ ನೀಡಲು ಸಭೆಯಲ್ಲಿ ಸೂಚಿಸಲಾಯಿತು. ತಹಶೀಲ್ದಾರ್ ಗಿರೀಶ್, ಅಕ್ರಮ–ಸಕ್ರಮ ಸಮಿತಿ ಸದಸ್ಯರಾದ ಹೂಟಗಳ್ಳಿ ರವಿ, ಪ್ರಮೀಳಾ ನಾಯಕ್, ರತ್ನಮ್ಮ, ಎಡಿಎಲ್‌ಆರ್ ವಿವೇಕ್, ಆರ್‌ಎಫ್‌ಓ ಸುರೇಂದ್ರ ಉಪತಹಶೀಲ್ದಾರ್‌ಗಳಾದ ನಿಂಗಪ್ಪ, ಕುಬೇರ, ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೆಡಿಸಿನ್ ಬದಲು ವೈದ್ಯರ ಪ್ರೀತಿಯ ಡೋಸ್‌ನಿಂದ ಕಾಯಿಲೆ ವಾಸಿ

ಮೈಸೂರು, ನ.5(ಜಿಎ)– ರೋಗಿಗಳಿಗೆ ವೈದ್ಯರು ನೀಡುವ ಮೆಡಿಸಿನ್ ಬದಲು ಪ್ರೀತಿಯ ಡೋಸ್ ನೀಡಿದರೆ, ಆದಷ್ಟು ಬೇಗ ಗುಣಮುಖರಾಗುತ್ತಾರೆ ಎಂದು ನಟ ಡಾಲಿ ಧನಂಜಯ್ ಅಭಿಪ್ರಾಯಪಟ್ಟರು.



ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ನಗರದ ಜೆ.ಕೆ. ಮೈದಾನದ ಆವರಣದಲ್ಲಿರುವ ಕಾಲೇಜಿನ ಅಲ್ಯುಮ್ನಿ ಅಸೋಸಿಯೇಷನ್ ವತಿಯಿಂದ ಆಯೋಜಿಸಿರುವ 'ಸಂಸ್ಕೃತಿ–22'ರ ಎರಡನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ನಾನು ಜೀವನದಲ್ಲಿ ಡಾಕ್ಟರ್ ಆಗಬೇಕಿತ್ತು. ಆದರೆ, ಸಿಇಟಿಯಲ್ಲಿ ಸೂಕ್ತ ಅಂಕ ಗಳಿಸದ ಕಾರಣ ಆಕ್ಟರ್ ಆಗಿದ್ದೇನೆ. ವೈದ್ಯ ವೃತ್ತಿ ಎಂಬುದೇ ಅದ್ಭುತ ಕೆಲಸವಾಗಿದೆ. ನಾವೆಲ್ಲರೂ ಸಮಾಜಮುಖಿ ಕೆಲಸ ಮಾಡಬೇಕು ಎಂದರೆ, ಅದಕ್ಕೆ ಅವಕಾಶ ಸಿಗಬೇಕಿದೆ. ಆದರೆ, ವೈದ್ಯರು ಮಾತ್ರ ತಮ್ಮ ವೃತ್ತಿ ಮೂಲಕ ನಿರಂತರವಾಗಿ ಸಮಾಜಕ್ಕೆ ಸೇವೆ ಸಲ್ಲಿಸಬಹುದಾಗಿದೆ ಎಂದರು.

ಎಲ್ಲಾ ದೇವರುಗಳು ಆಭರಣ ಧರಿಸಿದ್ದರೆ, ವೈದ್ಯ ಬಿಳಿ ಕೋಟ್ ಧರಿಸಿರುವ ದೇವರಾಗಿ ಜನರ ಸೇವೆ ಮಾಡುತ್ತಾರೆ. ಅವರು ನೀಡುವ ಮಾತ್ರೆಗಳಿಗಿಂತ ಅವರ ಪ್ರೀತಿಯ ಆರೈಕೆ ಬಹಳಷ್ಟು ಪರಿಣಾಮಕಾರಿಯಾಗಿರುತ್ತದೆ. ಇದಕ್ಕೆ ನಾನೇ ಉದಾಹರಣೆ. ಅನೇಕ ಬಾರಿ ನಾನು ಅನಾರೋಗ್ಯಕ್ಕೀಡಾದಾಗ ವೈದ್ಯರ ಮೆಡಿಸಿನ್‌ಗಿಂತ ಹೆಚ್ಚಾಗಿ ಪ್ರೀತಿಯ ಡೋಸ್ ನೀಡಿದ್ದರ ಪರಿಣಾಮ ಕೆಲ ಆಪರೇಷನ್‌ನಿಂದ ಪಾರಾಗಿದ್ದೇನೆ ಎಂದು ವೈದ್ಯರ ಸೇವೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ವಿದ್ಯಾರ್ಥಿಗಳೊಂದಿಗೆ 'ಬಡವ ರಾಸ್ಕಲ್' ಗೀತೆಗೆ ಹೆಜ್ಜೆ ಹಾಕಿ, ರಂಜಿಸಿದರು. ಎಂಎಂಸಿ ಅಂಡ್ ಆರ್‌ಐ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ, ಸ್ಟೂಡೆಂಟ್ ವೆಲ್ಫೇರ್ ಆಫೀಸರ್ ಡಾ.ಎಸ್.ಚಂದ್ರಶೇಖರ್ ಸೇರಿದಂತೆ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವ್ಯಾಪಕಗೊಳ್ಳುತ್ತಿರುವ ಆನ್‌ಲೈನ್ ವಂಚನೆ ಹಾವಳಿ

ಮನೆ ಬಾಡಿಗೆಗೆ ಪಡೆಯುವ, ಮೊಬೈಲ್ ನಂಬರ್‌ಗೆ ಪಾನ್‌ಕಾರ್ಡ್ ಅಪ್‌ಡೇಟ್ ನೆಪದಲ್ಲಿ ಲಕ್ಷಾಂತರ ರೂ. ವಂಚನೆ

ಮೈಸೂರು,ನ.5–ಆನ್‌ಲೈನ್ ವಂಚನೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ವಿದ್ಯಾವಂತರೇ ಆನ್‌ಲೈನ್ ವಂಚಕರ ಬಲೆಗೆ ಬಿದ್ದು, ಲಕ್ಷಾಂತರ ರೂ. ಕಳೆದುಕೊಳ್ಳುತ್ತಿದ್ದಾರೆ. ಮೊಬೈಲ್‌ಗೆ ಪಾನ್‌ಕಾರ್ಡ್ ಅಪ್‌ಡೇಟ್ ಮಾಡುವಂತೆ ಮೆಸೇಜ್ ಕಳುಹಿಸಿ ವೈದ್ಯರು ಸೇರಿದಂತೆ ಮೂವರನ್ನು ಹಾಗೂ ಮನೆ ಬಾಡಿಗೆ ಪಡೆಯಲು ಅಡ್ವಾನ್ಸ್ ನೀಡುವುದಾಗಿ ತಿಳಿಸಿ ಬ್ಯಾಂಕ್ ಖಾತೆ ವಿವರ ಪಡೆದು ಶಿಕ್ಷಕಿಯನ್ನು ವಂಚಿಸಲಾಗಿದೆ. ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿರುವ ವೈದ್ಯ ಡಾ.ಕೆ.ಎನ್.ವೀರೇಶ್‌ಕುಮಾರ್ (61) ಅವರಿಗೆ ಮೊಬೈಲ್ ಸಂಖ್ಯೆಗೆ ಪಾನ್‌ಕಾರ್ಡ್ ಅಪ್‌ಡೇಟ್ ಮಾಡಿಕೊಳ್ಳುವಂತೆ ವಾಟ್ಸಾಪ್ ಸಂದೇಶ ಬಂದಿದೆ. ಲಿಂಕ್ ಕ್ಲಿಕ್ ಮಾಡಿ ನಿರ್ದೇಶನಗಳನ್ನು ಪಾಲಿಸಿ ಓಟಿಪಿ ನಮೂದಿಸಿದ ತಕ್ಷಣ ಅವರ ಖಾತೆಯಿಂದ 5.98 ಲಕ್ಷ ರೂ.ಗಳು ಅಕ್ರಮವಾಗಿ ವರ್ಗಾವಣೆಯಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮೇಟಗಳ್ಳಿಯ ಲೋಕನಾಯಕನಗರದಲ್ಲಿ ವಾಸವಿರುವ ಖಾಸಗಿ ಕಂಪನಿಯೊಂದರ ಉದ್ಯೋಗಿ ಎಸ್.ಸುಮತಿ(43) ಅವರಿಗೂ ಮೊಬೈಲ್ ಸಂಖ್ಯೆಗೆ ಪಾನ್‌ಕಾರ್ಡ್ ಅಪ್‌ಡೇಟ್ ಮಾಡುವಂತೆ ಸಂದೇಶ ಬಂದಿದ್ದು, ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಅವರ ಖಾತೆಯಿಂದ 74,987 ರೂ. ಕಡಿತಗೊಂಡಿದೆ.

ಚಾಮರಾಜನಗರ ಜಿಲ್ಲೆ ಹನೂರು ತಾಲೂಕು ರಾಮಾಪುರ ಗೃಹಿಣಿ ಸುಷ್ಮಾ ಶಿವಕುಮಾರ್ (46) ಅವರ ಮೊಬೈಲ್‌ಗೆ ನಿಮ್ಮ ಎಸ್‌ಬಿಐ ಯೋನೋ ಅಕೌಂಟ್ ಕ್ಲೋಸ್ ಆಗಿದೆ. ದಯವಿಟ್ಟು 10 ನಿಮಿಷದ ಒಳಗಾಗಿ ಪಾನ್‌ಕಾರ್ಡ್ ಅನ್ನು ಅಪ್‌ಡೇಟ್ ಮಾಡಿ ಎಂಬ ಸಂದೇಶದೊಂದಿಗೆ ವಾಟ್ಸಪ್‌ಗೆ ಲಿಂಕ್ ಬಂದಿದೆ. ಅವರು ಲಿಂಕ್ ಕ್ಲಿಕ್ ಮಾಡಿ ಓಟಿಪಿ ನಮೂದಿಸಿದಾಗ ಅವರ ಖಾತೆಯಿಂದ 1,83,987 ರೂ. ಕಡಿತಗೊಂಡಿದೆ.


ವಿದ್ಯಾರಣ್ಯಪುರಂ ನಿವಾಸಿಯಾಗಿರುವ ಶಿಕ್ಷಕಿ ಎಂ.ಬೇಬಿ ಲತಾಮಣಿ (43) ಎಂಬುವರು ತಮ್ಮ ಮನೆ ಬಾಡಿಗೆಗೆ ಲಭ್ಯವಿದೆ ಎಂದು ಮ್ಯಾಜಿಕ್ ಬ್ರಿಕ್ಸ್ ಆ್ಯಪ್‌ನಲ್ಲಿ ಜಾಹೀರಾತು ನೀಡಿದ್ದರು. 8637003487 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿಯು ನಿಮ್ಮ ಮನೆ ನನಗೆ ಇಷ್ಟವಾಗಿದೆ. ಅಡ್ವಾನ್ಸ್ ಹಣವನ್ನು ಕಳುಹಿಸುತ್ತೇನೆ ಎಂದು ತಿಳಿಸಿ ಅವರ ಬ್ಯಾಂಕ್ ಖಾತೆಯ ವಿವರಗಳನ್ನು ಪಡೆದಿದ್ದಾನೆ. ಕೆಲವೇ ನಿಮಿಷಗಳಲ್ಲಿ ಅವರ ಖಾತೆಯಿಂದ 99 ಸಾವಿರ ರೂ. ಕಡಿತಗೊಂಡಿದೆ. ಈ ಪ್ರಕರಣಗಳ ಸಂಬಂಧ ಮೈಸೂರು ನಗರ ಮತ್ತು ಚಾಮರಾಜನಗರ ಸೆನ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ.

ಮಲಬಾರ್ ಗೋಲ್ಡ್‌ನಿಂದ ವಿದ್ಯಾರ್ಥಿವೇತನ ವಿತರಣೆ

ಮೈಸೂರು,ನ.5–ಮೈಸೂರು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಮೈಸೂರು ಕೊಡಗು ಜಿಲ್ಲೆಯ ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಸುಮಾರು 357 ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ನ.7ರಂದು ಬೆಳಗ್ಗೆ 10 ಗಂಟೆಗೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಮೈಸೂರು ಮಹಾರಾಜರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಭಾಗವಹಿಸುವರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

Shubashayagalu



Smt. **Radamma Challam**

On her 100th birthday

Best wishes from
Hemachandra & Family
Mukundaraj, Rani Arasu & family
Relatives and Friends

BOOKINGS OPEN FOR

Construction of Brand New Architecture Designed Houses

MUDA APPROVED

20'x40 - 30 Lakhs
30'x40' - 44.99 Lakhs

Near St. Joseph's Central School, Hunsur Road, Mysore.

9740767576, 8884001233

ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಮೈಸೂರು ಸಿಟಿ, ಪಡುವಾರಹಳ್ಳಿ, ವಿನಾಯಕ ನಗರ, 6ನೇ ಮೈನ್, ವಿನಾಯಕ ದೇವಸ್ಥಾನದ ರಸ್ತೆ, ಮನೆ ನಂಬರ್ 2279/5 ರಲ್ಲಿ ವಾಸವಾಗಿರುವ ಲೇಟ್. ತಮ್ಮಣ್ಣರವರ ಮಗನಾದ ಶ್ರೀ. ಟಿ.ಸೋಮುರವರಿಂದ ಷೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು, ಈ ಕ್ರಯದ ವ್ಯವಹಾರಕ್ಕೆ ಯಾರದಾದರು ಯಾವುದಾದರು ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಎರಡು ವಾರದ ಒಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನುಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದು ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗು ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ನಂ.321 ರಲ್ಲಿ (ಹಳೇ ಸರ್ವೆ ನಂ.106/11) ವಿಸ್ತೀರ್ಣ 2 ಎಕರೆ 29 ಗುಂಟೆ, ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ : ಮೂಡಲಕೊಪ್ಪಲಿನಿಂದ ಮೈಸೂರಿಗೆ ಹೋಗುವ ರಸ್ತೆ, ಪಶ್ಚಿಮಕ್ಕೆ : ಎಂ.ಎನ್.ಗೌಡಯ್ಯನವರ ತೋಟ, ಉತ್ತರಕ್ಕೆ : ಅರಣ್ಯ ಇಲಾಖೆಯ ಜಮೀನು, ದಕ್ಷಿಣಕ್ಕೆ : ರಸ್ತೆ ಮತ್ತು ದೊಡ್ಡ ಮಾದೇಗೌಡ ಹಾಗೂ ಚಿಕ್ಕ ಮಾದೇಗೌಡ ರವರ ಜಮೀನು

Sd/- O.Shama Bhat, B.A., LL.B.,
Reg. No.: KAR 417/77
O.Sathisha, B.Sc., LL.B,
Reg. No.: KAR 721/89
Advocates
#20/C, 2nd Floor, Near Airlines Hotel,
Jayalakshmi Vilas Road,
Chamarajapuram, Mysuru - 5700005.
Ph.: 0821-4262475
Email: shamsathisha@gmail.com



7–9–2003ರಿಂದ
6–11–2022ರವರೆಗೆ
7000 ದಿನಗಳು
ರಜೆರಹಿತ ಅವಿರತ ಸೇವೆಯೊಂದಿಗೆ ಸಾಧನೆ ಮಾಡಲು ನನಗೆ ಪ್ರೇರಕ ಶಕ್ತಿಯೂ ಆದ ನನ್ನ ಆತ್ಮಬಂಧು, ಚಲನಚಿತ್ರ ನಿರ್ಮಾಪಕರು ಹಾಗೂ ಬಿಜೆಪಿ ಯುವ ಮುಖಂಡ
ಶ್ರೀ ಸಂದೇಶ್ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು.

ಎಂ.ಎಲ್.ಶಿವಪ್ರಕಾಶ್
ಸಾರ್ವಜನಿಕ ಸಂಪರ್ಕಾಧಿಕಾರಿ
ಹೋಟೇಲ್ ಸಂದೇಶ್ ದಿ ಪ್ರಿನ್ಸ್
ಮೊ. 9880196064



ಕೋಟ್ಯಾಂತರ ರೂಪಾಯಿ ಮೌಲ್ಯದ ಅಂತಾರಾಷ್ಟ್ರೀಯ ಗಾರ್ಮೆಂಟ್ಸ್

ವಿಶೇಷ ಬ್ರಾಂಡ್‌ಗಳ ಗಾರ್ಮೆಂಟ್ಸ್ ಮತ್ತು ಶೂಗಳು

ರಿಟೇಲ್ ಗ್ರಾಹಕರಿಗಾಗಿ ಮೊದಲ ಬಾರಿ ಮೈಸೂರಿನಲ್ಲಿ

ಮಾರಾಟ ಕೆಲವೇ ದಿನಗಳು ಮಾತ್ರ

ಅಂತಾರಾಷ್ಟ್ರೀಯ ಶೋರೂಂಗಳಿಗಾಗಿ ಸಿದ್ಧಪಡಿಸಲಾಗಿದ್ದ ಕೋಟ್ಯಾಂತರ ಸ್ಟಾಕ್‌ನ್ನು ಈಗ 80% ರವರೆಗೆ ದೊಡ್ಡ ರಿಯಾಯಿತಿ ದರದಲ್ಲಿ ಮೈಸೂರಿನ ರಿಟೇಲ್ ಗ್ರಾಹಕರಿಗೆ ನೇರ ಮಾರಾಟ ಮಾಡಲಾಗುತ್ತಿದೆ.

ಕಲರ್ ಪ್ಲಸ್, ಪಾರ್ಕ್ ಅವೆನ್ಯೂ, ಆ್ಯರೋ, ರೇಮಂಡ್ಸ್ ವ್ಯಾನ್‌ಹುಸೇನ್, ಮಾರ್ಕ್ಸ್ & ಸ್ಪೆನ್ಸರ್ ರೂ. 2000/– ರಿಂದ 4000/– ಮೌಲ್ಯದ ಶರ್ಟ್ಸ್ ಮತ್ತು ಪ್ಯಾಂಟ್ಸ್ ಕೇವಲ **ರೂ. 700/–** ಮಾತ್ರ

ರೂ. 2000/– ರಿಂದ 3000/– ಮೌಲ್ಯದ ಲೇಡೀಸ್ ಮತ್ತು ಪುರುಷರ ಗಾರ್ಮೆಂಟ್ಸ್ ಈಗ ಕೇವಲ **200/–** ರಿಂದ **500/–** ಕ್ಕೆ ಪಡೆಯಿರಿ

ರೂ. 3000/– ರಿಂದ 10,000/– ಮೌಲ್ಯದ ಸ್ಪೋರ್ಟ್ಸ್ & ಫಾರ್ಮಲ್ ಲೆದರ್ ಶೂ NIKE adidas PUMA Reebok HRX & many more ರೂ. **350/–** ರಿಂದ **2000/–** ಕ್ಕೆ ಪಡೆಯಿರಿ

ರೂ. 2000/– ರಿಂದ 3000/– ಬೆಲೆಯ ಸ್ಕೂಲ್ & ಕಾಲೇಜು ಬ್ಯಾಗ್, ಜಿಮ್ ಬ್ಯಾಗ್ಸ್ ಕೇವಲ ರೂ. **400/–** ರಿಂದ **500/–** ಕ್ಕೆ ಪಡೆಯಿರಿ

ರೂ. 500/– ರಿಂದ ರೂ. 1000 ಬೆಲೆಯ ಸೀರೆಗಳು, ಪೂನಂ ಸೀರೆ, ಜಾರ್ಜೆಟ್ ಸೀರೆಗಳು ಝರಿ ಬಾರ್ಡರ್ & ಪ್ಲೇನ್ ಸೀರೆಗಳು – ಕೇವಲ ರೂ. **150/–** ರಿಂದ **500/–** ಕ್ಕೆ ಪಡೆಯಿರಿ

ಪುರುಷರ ಮತ್ತು ಮಹಿಳೆಯರ ಒಳಉಡುಪುಗಳು, ಬ್ರಾ ಮತ್ತು ಪ್ಯಾಂಟಿ ರೂ. **80/–** ರಿಂದ **400/–** ಕ್ಕೆ ಪಡೆಯಿರಿ

ವಿಶೇಷ ಸೂಚನೆ : ಈ ಮಾರಾಟ ಕೇವಲ ರಿಟೇಲ್ ಗ್ರಾಹಕರಿಗೆ ಮಾತ್ರ, ಹೋಲ್‌ಸೇಲ್ ವರ್ತಕರಿಗೆ ಅವಕಾಶವಿಲ್ಲ.

ಈ ರಿಯಾಯಿತಿ ಕೊಡುಗೆ ಕೆಲವೇ ದಿನಗಳು ಮಾತ್ರ

ಸಮಯ : ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ

ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್

ಜೆ.ಎಲ್.ಬಿ. ರಸ್ತೆ, (ಮುಡಾ ಕಛೇರಿ ಪಕ್ಕದಲ್ಲಿ) ಮೈಸೂರು – 05

ಮನೆ ಬಾಡಿಗೆಗಿದೆ

60x40 ನೆಲ ಮನೆ 2BHK,
ನಂ.24, ಎ & ಬಿ ಬ್ಲಾಕ್,
1ನೇ ಮುಖ್ಯರಸ್ತೆ, ರಾಮಕೃಷ್ಣನಗರ,
ಮೈಸೂರು – 570022

9945409432 / 9886888819

BUILDING FOR SALE

20x30 Duplex House
Three (3) BHK
MUDA approved
Layout, Near Dattagalli,
3rd Stage, Mysore.

Contact:
8310259191

WANTED TEACHERS

Trained experienced Lady Teachers to teach English/ Social Science for Primary & High School Classes (English Medium). Contact: **Vasavi Convent**, Koorgally, near BEML, Mysore. Ph: **9900393718**

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೋಕು, ಕಸಬಾ ಹೋಬಳಿ, ಕಲ್ಲಹಳ್ಳಿ ಇಂಡಸ್ಟ್ರಿಯಲ್ ಏರಿಯಾ, ಪ್ಲಾಟ್ ನಂಬರ್.81 ರಲ್ಲಿ ವಾಸವಾಗಿರುವ ಚೌಡನಾಯಕ ರವರ ಮಗನಾದ ಸಿ.ತೀರ್ಥಪ್ಪರವರ ಇರಾದೆ ಮೇರೆಗೆ, ನಮ್ಮ ಕಕ್ಷಿದಾರರು ಈ ಕೆಳಗೆ ನಮೂದಿಸಿರುವ ಸ್ವತ್ತನ್ನು ನಂಜನಗೂಡು ಟೌನ್‌ನಲ್ಲಿ ವಾಸವಾಗಿರುವ ಲೇ. ಸಿ.ಎನ್.ವೆಂಕಟೇಶನ್ ರವರ 1ನೇ ಮಗಳಾದ ಹಂಸವೇಣಿ.ಸಿ.ವಿ. ಹಾಗೂ ಬೆಂಗಳೂರು ಸಿಟಿಯಲ್ಲಿ ವಾಸವಾಗಿರುವ ಲೇ. ಸಿ.ಎನ್.ವೆಂಕಟೇಶನ್ ರವರ 2ನೇ ಮಗಳಾದ ಮೋಹನ್‌ಕುಮಾರಿ. ಸಿ.ವಿ. ಹಾಗೂ 3ನೇ ಮಗ ಸುನೀಲ್‌ಕುಮಾರ್.ಸಿ.ವಿ. ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಈ ಸ್ವತ್ತಿನ ಸಂಬಂಧವಾಗಿ ಮೇಲೆ ಕಾಣಿಸಿದ ವ್ಯಕ್ತಿಗಳಲ್ಲದೆ, ಬೇರೆ ಯಾರಿಗಾದರೂ ಯಾವುದೇ ರೀತಿಯ ಹಕ್ಕುಗಳಾಗಲಿ, ಹಿತಾಸಕ್ತಿಗಳಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ 7 ದಿನಗಳೊಳಗಾಗಿ ಸಂಬಂಧಪಟ್ಟಂತೆ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಮಾಲೀಕತ್ವ ಹಿತಾಸಕ್ತಿಗಳು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ.

ಷೆಡ್ಯೂಲ್

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೋಕು, ಕಸಬಾ ಹೋಬಳಿ, ಎಲಚಗೆರೆ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್: 49 ರಲ್ಲಿ 3 ಎಕರೆ 20 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಊಟಿ ರಸ್ತೆ, ಪಶ್ಚಿಮಕ್ಕೆ: ಅಳ್ಳಶೆಟ್ಟಿರವರ ಜಮೀನು, ಉತ್ತರಕ್ಕೆ: ಇದೇ ಸರ್ವೆ ನಂಬರ್‌ನಲ್ಲಿ , ದಕ್ಷಿಣಕ್ಕೆ: ಗುರುಸ್ವಾಮಿ ರವರ ಜಮೀನು ಕೆಂಪೇಗೌಡರವರ ಜಮೀನು.

ಸಹಿ/– ಹೆಚ್.ಎನ್.ಮಲ್ಲೇಶಯ್ಯ
ಬಿ.ಎ., ಎಲ್‌ಎಲ್.ಬಿ
ವಕೀಲರು ಮತ್ತು ನೋಟರಿ, ಸೆಂಟ್ರಲ್ ಬ್ಯಾಂಕ್ ಮೇಲ್ಭಾಗ,ಊಟಿ ಮೇನ್ ರೋಡ್, ನಂಜನಗೂಡು.
ಮೊ.: 9945493688

ORANGE CITY, MYSORE RESIDENTIAL PLOTS

@ JUST Rs. 525/ SQFT
NEAR TO NEW KIADB LAND
DIMENSION:
30x40 30x50 40x60
Madikeri – Mysore Highway
Contact: **9740391228**



Hi! TAXI

ONLY ONE WAY **TAXI CHARGE**

MYSORE to BANGALORE
City drop or Pick up
BANGALORE to MYSORE Airport drop or Pick up
Shakthi Nagar MYSURU

9611177599

PATTABI ENTERPRISES PRIVATE LTD a Leading Manufacturing Industry located at Hootgalli Industrial area in Mysore

REQUIRES the following candidates

Position	Qualification	Experiences
Managerial Accountant	M.Com / MBA in Finance / CA Inter	6 to 8 Years
Accounts Executive	B.Com / BBA	3 to 4 Years
Quality Executive	Degree / Diploma	5 to 6 Years
Electrical / Maintenance	ITI / Diploma	5 to 6 Years
Driver LMV / HMV	SSLC	4 to 5 Years
Computer Support	Any Graduate	3 to 4 Years
Offset / Punching / Pasting / Machine Operator	Any	5 to 6 Years
Helper	ITI / SSLC / Diploma	1 to 2 Years

Send Resume to : pattabiadmin@pattabi.in
Phone No – **0821-2456711 / 2456715**

Sampoorna Group of Institutions, Channapatna Required For BE

Prof, ASP & AP for All Branches, Basic Sciences Physical Director & Non-Teaching Staff. Warden for Boys & Girls

For B.Sc.(Hons.) Agriculture

Dean, Prof, AP, Salary & Qualification as per norms
Mail Resume to **sampurnabrundavan@gmail.com** before15th Nov. 2022
www.sampoorna institutions.org
Ph: 9148696369

ಹಸಿರು ನಮ್ಮ ಉಸಿರು

HERITAGE HOMES

MYSURU - HUNSUR HIGHWAY, MYSORE
MEGA RESIDENTIAL TOWNSHIP
MUDA LIMITS

ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ



ಕೇವಲ ₹550/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ

30x40 | 30x50 | 40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಅದ್ವಿಕಾ ವೆಂಚರ್ಸ್
9513301854, 9071386615



5ನೇ ವರ್ಷದ ಸವಿನೆನಪು



ಟಿ. ದೇವರಾಜು
ಮರಣ ದಿನಾಂಕ:
6–11–2017

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ಇಂತಿ ದುಃಖತಪ್ತರು
ಮೃತರ ತಂಗಿ ಟಿ. ಅನ್ನಪೂರ್ಣ,
ಮೃತರ ಭಾವ ಎಸ್. ಸೀನಪ್ಪ,
ನಿವೃತ್ತ ಎ.ಎಸ್.ಐ.,
ಟಿ. ಗಂಗಾಧರ್ (ಮಾವ)
ತಮ್ಮಂದಿರು, ತಂಗಿ ಭಾವ
ಹಾಗೂ ನಾದಿನಿಯರು
ಕುಟುಂಬವರ್ಗ, ಸಂಬಂಧಿಗಳು,
ಬಂಧುವರ್ಗದವರು
ಹಾಗೂ ಗರಡಿಕೇರಿ, ಮೈಸೂರು

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಹಾನಗರಪಾಲಿಕೆ

ನೀರು ಸರಬರಾಜು ಮತ್ತು ಒಳಚರಂಡಿ (ಪಶ್ಚಿಮ)ವಿಭಾಗ
ವಾಣಿವಿಲಾಸ ಆವರಣ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಂಖ್ಯೆ: ಮೈನಪಾ/ಕಾಇಂ/ನೀಸ & ಒಚವಿ(ಪಶ್ಚಿಮ)/ಕಿ.ಅ/ಟಿ.ಎನ್.10/2022–23 ದಿನಾಂಕ: 05–11–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ KTPP ನಿಯಮಗಳಿಗೆ ಒಳಪಟ್ಟಂತೆ 32 ಸಂಖ್ಯೆಯ ರೂ. 503.65 ಲಕ್ಷಗಳ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹಾಗೂ ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಹಾಗೂ ದೂರವಾಣಿ ಸಂಖ್ಯೆ:0821–2418849 ರಿಂದ ಮಾಹಿತಿ ಪಡೆಯಬಹುದು ನಿಗಧಿಪಡಿಸಿರುವ ಫಾರಂ ಶುಲ್ಕ ಹಾಗೂ ಇ.ಎಂ.ಡಿ.ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು.

ವಿಶೇಷ ಸೂಚನೆ: ಇಂಡೆಂಟ್ ಸಂಖ್ಯೆ 1) 141188, 2) 141369 ಮತ್ತು 3) 139714 (2ನೇ ಕರೆ) ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14.11.2022

ಟೆಂಡರ್ ದಾಖಲೆಗಳು ವ್ಯವಸ್ಥೆಯಡಿ ಟೆಂಡರ್ ಷಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ

(1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ **07.11.2022ರ 5:00 ಗಂಟೆಯ** ನಂತರ (2) ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೋರುವ ದಿನಾಂಕ **21.11.2022ರ 5:00 ಗಂಟೆಯ** ವರೆಗೆ (3) ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಸಮಯ **22.11.2022ರ 5:30 ಗಂಟೆಯ ವರೆಗೆ** (4) ಟೆಂಡರನ್ನು ತೆರೆಯುವ ದಿನಾಂಕ ಮತ್ತು ಸಮಯ **23.11.2022ರ 5:00 ಗಂಟೆಯ ನಂತರ.**

ಸಹಿ/– ಕಾರ್ಯಪಾಲಕ ಅಭಿಯಂತರರು,
ನೀರು ಸರಬರಾಜು & ಒಳಚರಂಡಿ, ವಿಭಾಗ (ಪಶ್ಚಿಮ) ಮೈನಪಾ, ಮೈಸೂರು

ಉಚಿತ ತರಬೇತಿ ಕಾರ್ಯಕ್ರಮಗಳು

BRBNMPL | CIPET

ಪ್ರಾಯೋಜಕರು
ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮೈಸೂರು (ಭಾರತೀಯ ರಿಸರ್ವ್ ಬ್ಯಾಂಕ್ ನ ಅಂಗ ಸಂಸ್ಥೆ)

ಕೇಂದ್ರಿಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ಸಿಪೆಟ್)

ಕೌಶಲ್ಯ ಮತ್ತು ತಾಂತ್ರಿಕ ನೆರವು ಕೇಂದ್ರ (ಸಿ.ಎಸ್.ಟಿ.ಎಸ್), ಮೈಸೂರು, ಭಾರತ ಸರ್ಕಾರ

ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮೈಸೂರು ಸಂಸ್ಥೆಯು 2022–23ನೇ ಸಾಲಿನಲ್ಲಿ ತನ್ನ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ (CSR) ಯೋಜನೆಯಡಿ ಮೈಸೂರಿನಲ್ಲಿರುವ ಭಾರತ ಸರ್ಕಾರದ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ಸಿಪೆಟ್) – ಸೆಂಟರ್ ಫಾರ್ ಸ್ಕಿಲ್ಲಿಂಗ್ ಅಂಡ್ ಟೆಕ್ನಿಕಲ್ ಸಪೋರ್ಟ್ (CSTS) ಸಂಸ್ಥೆಯ ಮೂಲಕ 03 ತಿಂಗಳ ಉಚಿತ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಎಲ್ಲಾ ವರ್ಗದ ಹಿಂದುಳಿದ / ನಿರುದ್ಯೋಗಿ ಯುವಕ ಯುವತಿಯರಿಗೆ ಉಚಿತ ಊಟ ಹಾಗೂ ವಸತಿಗಳೊಂದಿಗೆ ಆಯೋಜಿಸಲಾಗಿದೆ. ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ. 1,000/– ಶಿಷ್ಯವೇತನ ನೀಡಲಾಗುವುದು. ತರಬೇತಿ ಹಾಗೂ ಅರ್ಹತೆ ವಿವರ ಈ ಕೆಳಗಿನಂತಿದೆ

ತರಬೇತಿಯ ಹೆಸರು	ಅವಧಿ	ವಿದ್ಯಾರ್ಹತೆ	ಫಲಾನುಭವಿಗಳ ಸಂಖ್ಯೆ
ಮಷಿನ್ ಆಪರೇಟರ್ ಅಸಿಸ್ಟೆಂಟ್ ಪ್ಲಾಸ್ಟಿಕ್ಸ್ ಪ್ರೋಸೆಸಿಂಗ್ (MoA-PP)	03 ತಿಂಗಳು	8th standard pass	100 ಎಲ್ಲಾ ವರ್ಗದ ಹಿಂದುಳಿದ / ನಿರುದ್ಯೋಗಿ ಯುವಕ ಯುವತಿಯರುಗಳಿಗೆ
ಮಷಿನ್ ಆಪರೇಟರ್ ಅಸಿಸ್ಟೆಂಟ್ ಇಂಜೆಕ್ಷನ್ ಮೌಲ್ಡಿಂಗ್ (MoA-IM)			

ವಯೋಮಿತಿ: General/EWS–18 ರಿಂದ 30 ವರ್ಷಗಳು, OBC–18 ರಿಂದ 33 ವರ್ಷಗಳು, SC/ST–18 ರಿಂದ 35ವರ್ಷಗಳು

ಕಾರ್ಯಕ್ರಮದ ವಿಶೇಷತೆಗಳು:

- ತರಬೇತಿಯು ಊಟ, ವಸತಿಗಳೊಂದಿಗೆ ಸಂಪೂರ್ಣವಾಗಿ ಉಚಿತವಾಗಿದ್ದು, ಯಾವುದೇ ಶುಲ್ಕವಿರುವುದಿಲ್ಲ (No Fees)
- Uniform, Shoes, Course materials ಮತ್ತು Training Kit ಗಳನ್ನು ಉಚಿತವಾಗಿ ನೀಡಲಾಗುವುದು.
- ಕಾರ್ಯಕ್ರಮದ ಜೊತೆಗೆ Spoken English ಮತ್ತು Basic computer training ತರಗತಿಗಳನ್ನೂ ನಡೆಸಲಾಗುವುದು.
- ತರಬೇತಿಯನ್ನು ಪೂರ್ಣಗೊಳಿಸಿದ ನಂತರ ಉದ್ಯೋಗ ಅವಕಾಶಕ್ಕೆ ನೆರವು ನೀಡಲಾಗುವುದು.

ಆಯ್ಕೆಯ ವಿಧಾನ: ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ ಸ್ವವಿವರ (Bio-Data) ಹಾಗೂ ವಿದ್ಯಾರ್ಹತೆಗೆ ಸಂಭಂದಿಸಿದ ದಾಖಲೆ ಆಧಾರ್ ಪ್ರತಿ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಸಂಬಂದಿಸಿದ ಎಲ್ಲಾ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಲು ಸೂಚಿಸಲಾಗಿದೆ. ಅಥವಾ ಎಲ್ಲಾ ಒರಿಜಿನಲ್ ದಾಖಲೆಗಳು, 06 ಕಲರ್ ಫೋಟೊಗಳೊಂದಿಗೆ **ಮೈಸೂರಿನ ಸಿಪೆಟ್ ಸಂಸ್ಥೆ** ನಡೆಸುವ ನೇರ ಸಂದರ್ಶನ ಮತ್ತು ದಾಖಲಾತಿಗಾಗಿ ಹಾಜರಾಗಲು ಸೂಚಿಸಲಾಗಿದೆ.

ತರಬೇತಿ ಸಂಸ್ಥೆಯ ವಿಳಾಸ :
ಕೇಂದ್ರಿಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ಸಿಪೆಟ್)
437/ಎ, ಹೆಬ್ಬಾಳು ಇಂಡಸ್ಟ್ರಿಯಲ್ ಏರಿಯಾ, ಮೈಸೂರು - 570 016

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
93807 56024, 97890 10015
0821-2510619



ಮೈಸೂರು ಮಿತ್ರ ಭಾನುವಾರ 6, ನವೆಂಬರ್ 2022

ಕುಣಿಗಲ್-ಮಳವಳ್ಳಿ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗೆ ಮತ್ತೆ 12 ಕೋಟಿ ಬಿಡುಗಡೆ

ವಿವಿಧ ಗ್ರಾಮಗಳಿಗೆ ಶಾಸಕ ಡಿ.ಸಿ.ತಮ್ಮಣ್ಣ ಭೇಟಿ, ಜನರಿಂದ ಅಹವಾಲು ಸ್ವೀಕಾರ



ಭಾರತೀನಗರ, ನ.5– ಕುಣಿಗಲ್‌ನಿಂದ ಮಳವಳ್ಳಿ ಹೆದ್ದಾರಿ ಕಾಮಗಾರಿಗೆ ಮತ್ತೆ 12 ಕೋಟಿ ಮಂಜೂರು ಮಾಡಿಸಿರುವುದಾಗಿ ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ಇಲ್ಲಿಗೆ ಸಮೀಪದ ಬಿದರಹೊಸಹಳ್ಳಿ ಗ್ರಾಮದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಕುಣಿಗಲ್‌ನಿಂದ ಮಳವಳ್ಳಿವರೆಗೆ ಕೆಲವು ಕಾಮಗಾರಿಗಳು ಅರ್ಧಕ್ಕೆ ನಿಂತುಹೋಗಿತ್ತು. ಸರ್ಕಾರದಿಂದ ಹೋರಾಟ ನಡೆಸಿ ಅರ್ಧಕ್ಕೆ ನಿಂತುಹೋಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು 12 ಕೋಟಿ ರೂ. ಮಂಜೂರು ಮಾಡಿಸಿದ್ದೇನೆ. ಈ ಹಿಂದಿನ ಗುತ್ತಿಗೆದಾರ ಕೆಲಸ ನಿರ್ವಹಿಸಲಿದ್ದಾರೆ. ಇದರಿಂದ ಫುಟ್‌ಪಾತ್ ಅಗಲೀಕರಣ, ಗುಂಡಿಬಿದ್ದ ಹಳ್ಳಗಳಿಗೆ ಡಾಂಬರೀಕರಣ ಸೇರಿದಂತೆ ಹೆದ್ದಾರಿಗೆ ಸಂಪರ್ಕ ಹೊಂದಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ಕ್ಷೇತ್ರದಲ್ಲಿ ಜನರು ನನಗೆ ನೀಡಿರುವ ರಾಜಕೀಯ ಶಕ್ತಿಯನ್ನು ಬಳಸಿಕೊಂಡು ರಾಜ್ಯದಲ್ಲಿ ಯಾವುದೇ ಸರ್ಕಾರ ಇದ್ದರೂ ನಾನಾ ಮೂಲಗಳಿಂದ ಅಗತ್ಯ ಅನುದಾನ ತಂದು ಅಭಿವೃದ್ಧಿ ಮಾಡಿದ್ದೇನೆ. ಇಂತಹ ಶಕ್ತಿಯನ್ನು ಜನರು ಮುಂದೆಯೂ ಸಹ ನೀಡಿದರೆ ಆತ್ಮವಿಶ್ವಾಸದಿಂದ ಅಭಿವೃದ್ಧಿ ಕಾರ್ಯದಲ್ಲಿ ತೊಡಗುವುದಾಗಿ ಆಶ್ವಾಸನೆ ನೀಡಿದರು.

ಜೆಡಿಎಸ್ ಮುಖಂಡ ಮಾದನಾಯಕನಹಳ್ಳಿ ರಾಜಣ್ಣ ಅವರು ಮಾತನಾಡಿ, ಚುನಾವಣೆ ಸಮೀಪ ಇರುವುದರಿಂದ ಹೊಸದಾಗಿ ಕ್ಷೇತ್ರಕ್ಕೆ ಬಂದು ರಾಜಕಾರಣ ಮಾಡುತ್ತಿರುವ ಕೆಲವು ಉದ್ಯಮಿಗಳು ಜನರನ್ನು ಸೆಳೆಯಲು ಅಕ್ರಮವಾಗಿ ಸಂಪಾದಿಸಿರುವ ಹಣವನ್ನು ನೀರಿನಂತೆ ಖರ್ಚು ಮಾಡುತ್ತಿದ್ದಾರೆ. ಅವರ ಆಮಿಷಕ್ಕೆ ಮತದಾರರು ಒಳಗಾಗಬಾರದು. ಅಭಿವೃದ್ಧಿ ಕಾರ್ಯ ನೋಡಿ ಬೆಂಬಲಿಸುವಂತೆ ಮನವಿ ಮಾಡಿದರು.

ಇದೇ ವೇಳೆ ಮೆಳ್ಳಹಳ್ಳಿ, ಕೆ.ಪಿ.ದೊಡ್ಡಿ, ಮಣಿಗೆರೆ, ಬಿದರಹಳ್ಳಿ, ಬಿದರಹೊಸಹಳ್ಳಿ ಯಲಾದಹಳ್ಳಿ, ಗುಡಿಗೆರೆ, ಗುಡಿಗೆರೆ ಕಾಲೋನಿ, 5 ನೇ ನಂಬರ್ ಸೈಟ್‌ಗಳಿಗೆ ಭೇಟಿ ನೀಡಿ ಜನಸಂಪರ್ಕ ಸಭೆ ನಡೆಸಿದರು. ಗ್ರಾಮಸ್ಥರಿಂದ ಅಹವಾಲುಗಳನ್ನು ಸ್ವೀಕರಿಸಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಜೆಡಿಎಸ್ ರಾಜ್ಯಸಂಘಟನಾ ಕಾರ್ಯದರ್ಶಿ ಕೆಸ್ತೂರು ಬಿಳಿಯಪ್ಪ, ಎಚ್.ಎಂ.ಮರಿಮಾದೇಗೌಡ, ಪುರಸಭಾ ಸ್ಥಾಯಿಸಮಿತಿ ಮಾಜಿ ಅಧ್ಯಕ್ಷ ಮಹೇಶ್, ಮಲ್ಲರಾಜು, ಶಿವನಂಜಪ್ಪ ಗುತ್ತಿಗೆದಾರ ಪುಟ್ಟಸ್ವಾಮಿ, ಸಿದ್ದೇಗೌಡ, ಬೋರೇಗೌಡ, ನಿಂಗೇಗೌಡ, ನಾಗೇಗೌಡ, ಮಣಿಗೆರೆ ಸವೀನಪ್ಪ, ಶಿವಲಿಂಗೇಗೌಡ, ನವೀನ್, ಸಿದ್ದರಾಜು, ತಿಬ್ಬಯ್ಯ, ಕೆ.ಎಲ್.ಶಿವರಾಮು, ಗುಡಿಗೆರೆ ಕಾಂತರಾಜು, ಶಿವು, ಮೈಸ್ಕೆಟ್ ಬಸವರಾಜು, ಮಂಜುನಾಥ, ಶಿವರುದ್ರ, ದೊರೆ, ಬಿದರಹಳ್ಳಿ ಬಸವೇಗೌಡ, ಶಶಿ, ರಮೇಶ್, ಕಾಲೋನಿ ಜಿ.ಎನ್.ಪುಟ್ಟಸ್ವಾಮಿ, ಪಾಪಣ್ಣ, ಬಿದರಹೊಸಹಳ್ಳಿ ಸುನಾಮಿ ಬೋರೇಗೌಡ, ಪುಟ್ಟಸ್ವಾಮಿ, ಯಲಾದಹಳ್ಳಿ ರಾಜೇಶ, ಲೋಕೇಶ, ವೈ.ಡಿ.ಸಿದ್ದರಾಜು ಸೇರಿದಂತೆ ಹಲವರಿದ್ದರು.

ಬಾಲನಟಿಯಾಗಿದ್ದ ಕೀರ್ತನಾ ಈಗ ಮಂಡ್ಯ ಎಸಿ



ಮಂಡ್ಯ,ನ.5– ಮಂಡ್ಯ ಉಪವಿಭಾಗಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿರುವ ಎಚ್.ಎಸ್. ಕೀರ್ತನಾ ಅವರು 4ನೇ ವಯಸ್ಸಿನಲ್ಲಿಯೇ ಚಿತ್ರರಂಗಕ್ಕೆ ಕಾಲಿಟ್ಟು ಸಿನಿಮಾ ಹಾಗೂ ಕಿರುತೆರೆಯ ಹಲವು ಧಾರವಾಹಿಗಳಲ್ಲಿ ಅಭಿನಯಿಸಿದ್ದಾರೆ.

ಕನ್ನಡ ಚಿತ್ರರಂಗದ ದಿಗ್ಗಜರೊಂದಿಗೆ ಬಾಲ ನಟಿಯಾಗಿ ಅಭಿನಯಿಸಿ ಸ್ಟಾರ್ ಬಾಲನಟಿಯಾಗಿ ರಾಜ್ಯ ಹಾಗೂ ರಾಷ್ಟ್ರಪ್ರಶಸ್ತಿಗಳನ್ನು ಪಡೆದಿದ್ದು, ಸುಮಾರು 32 ಸಿನಿಮಾಗಳು ಹಾಗೂ 48 ಕಿರುತೆರೆಯ ಧಾರವಾಹಿಗಳಲ್ಲಿ ಅಭಿನಯಿಸಿದ್ದಾರೆ. ಕರ್ಪೂರದ ಗೊಂಬೆ, ಗಂಗ-ಯಮುನಾ, ಮುದ್ದಿನ ಅಳಿಯ, ಉಪೇಂದ್ರ, ಎ, ಕಾನೂರು ಹೆಗ್ಗಡತಿ, ಸರ್ಕಲ್ ಇನ್ಸ್‌ಪೆಕ್ಟರ್, ಓ ಮಲ್ಲಿಗೆ, ಲೇಡಿ ಕಮೀಷನರ್, ಹಬ್ಬ, ದೊರೆ ಸೇರಿದಂತೆ 32ಕ್ಕೂ ಹೆಚ್ಚು ಸಿನಿಮಾಗಳು ಹಾಗೂ ಜನನಿ, ಚಿಗುರು, ಪುಟಾಣಿ ಏಜೆಂಟ್ ಸೇರಿದಂತೆ ಹಲವಾರು ಧಾರವಾಹಿಗಳಲ್ಲಿ ಅಭಿನಯಿಸಿದ್ದಾರೆ. ನಟರಾದ ವಿಷ್ಣುವರ್ಧನ್, ಅಂಬರೀಷ್, ಶಿವರಾಜ್‌ಕುಮಾರ್, ರಮೇಶ್, ಶಶಿಕುಮಾರ್, ದೇವರಾಜ್, ಮಾಲಾಶ್ರೀ, ಶಿಲ್ಪಾ, ಶೃತಿ, ಶ್ವೇತ, ಸಿತಾರಾ ಮೊದಲಾದವರೊಂದಿಗೆ ಬಾಲ ನಟಿಯಾಗಿ ಕನ್ನಡ ಚಲನಚಿತ್ರರಂಗದಲ್ಲಿ ಹೆಸರು ಗಳಿಸಿದ್ದರು.

ನಂತರ ತಂದೆಯ ಸಲಹೆಯಂತೆ ಎಚ್.ಎಸ್.ಕೀರ್ತನಾ ಓದಿನತ್ತ ಗಮನಹರಿಸಿ 2011ರಲ್ಲಿ ಕೆಪಿಎಸ್ಸಿ ಪರೀಕ್ಷೆ ಬರೆದು ಕೆಎಎಸ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ನಂತರ ಯುಪಿಎಸ್ಸಿ ಪರೀಕ್ಷೆ ಬರೆದು 6ನೇ ಪ್ರಯತ್ನದಲ್ಲಿ 167ನೇ ರ್‍ಯಾಂಕ್ ಗಳಿಸುವ ಮೂಲಕ ಐಎಎಸ್ ಅಧಿಕಾರಿಯಾಗಿದ್ದಾರೆ.

2020ನೇ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಎಚ್.ಎಸ್.ಕೀರ್ತನಾ ಬಹಳ ಶ್ರಮ ಪಟ್ಟು ಓದಿ ತಂದೆ, ತಾಯಿಯ ಆಶೀರ್ವಾದ ಮತ್ತು ಪ್ರೋತ್ಸಾಹದಿಂದ ಇಂದು ಐಎಎಸ್ ಅಧಿಕಾರಿಯಾಗಿದ್ದಾರೆ. ಪ್ರಸ್ತುತ ಪೂರ್ಣ ಪ್ರಮಾಣದ ಐಎಎಸ್ ಅಧಿಕಾರಿಯಾಗಿ ಮಂಡ್ಯ ಉಪವಿಭಾಗಾಧಿಕಾರಿಯಾಗಿ ನೇಮಕಗೊಂಡಿದ್ದಾರೆ.

ಸಹಕಾರಕ್ಕೆ ಮನವಿ: ಮೊದಲು ನಾನು ಬೀದರ್‌ನಲ್ಲಿ ತರಬೇತಿ ಮುಗಿಸಿ ನೇರವಾಗಿ ಮಂಡ್ಯ ಉಪವಿಭಾಗಾಧಿಕಾರಿಯಾಗಿ ನಿಯೋಜನೆಗೊಂಡಿದ್ದೇನೆ. ಇಲ್ಲಿ ಸೇವೆ ಸಲ್ಲಿಸಲು ಜಿಲ್ಲೆಯ ಜನರ ಸಹಕಾರ ಅಗತ್ಯವಾಗಿದ್ದು, ಆದ್ದರಿಂದ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ದರಸಗುಪ್ಪೆ ಪಿಎಸಿಸಿಗೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ



ಶ್ರೀರಂಗಪಟ್ಟಣ, ನ.5– ತಾಲೂಕಿನ ದರಸಗುಪ್ಪೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಎಸ್.ಮನು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಉಪಾಧ್ಯಕ್ಷರಾಗಿ ದಿನೇಶ್ ಆಯ್ಕೆಗೊಂಡಿದ್ದು, ನಿಕಟಪೂರ್ವ ಅಧ್ಯಕ್ಷ ಆರ್.ಪರಮೇಶ್ವರ್ ಹಾಗೂ ಉಪಾಧ್ಯಕ್ಷ ಎನ್.ಎಸ್.ಮಹದೇವಸ್ವಾಮಿ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ರಿಟರ್ನಿಂಗ್ ಅಧಿಕಾರಿ ಭರತ್ ಕುಮಾರ್ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಮನು, ದಿನೇಶ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ನೂತನವಾಗಿ ಆಯ್ಕೆಗೊಂಡ ಮನು ಹಾಗೂ ದಿನೇಶ್ ಮಾತನಾಡಿ, ಸಹಕಾರ ಸಂಘದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದ್ದಾರೆ. ಸಹಕಾರ ಸಂಘದ ಅಭಿವೃದ್ಧಿಯೇ ನಮ್ಮ ಗುರಿಯಾಗಿದ್ದು, ಸರ್ವತೋಮುಖ ಅಭಿವೃದ್ಧಿಗೆ ಸದಸ್ಯರ ಮಾರ್ಗದರ್ಶನದೊಂದಿಗೆ ಮುನ್ನಡೆಯುವುದಾಗಿ ತಿಳಿಸಿದ್ದಾರೆ.

ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಗ್ರಾಮದ ಮುಖಂಡರುಗಳಾದ ಪಿಎಸ್‌ಎಸ್‌ಕೆ ಮಾಜಿ ಅಧ್ಯಕ್ಷ ರಾಮಾಂಜೇಗೌಡ, ಪಿ.ಧನಂಜಯ್, ಕಿರಂಗೂರು ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಟಿ.ರಂಗೇಗೌಡ, ಸಾಲಿಗ್ರಾಮ ಜೆಡಿಎಸ್ ಅಧ್ಯಕ್ಷ ಪ್ರಸನ್ನ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ಕಡತನಾಳು ಸಂಜಯ್ ಸೇರಿದಂತೆ ನಿರ್ದೇಶಕರುಗಳಾದ ಕೆ.ಲಕ್ಷ್ಮಿನಾರಾಯಣ, ಶ್ರೀನಿವಾಸಯ್ಯ, ಮಹದೇವಸ್ವಾಮಿ, ಪರಮೇಶ್ವರ, ಶೈಲಜಾ, ನಿರ್ಮಲಾ ಮಂಜುನಾಥ್, ಕಿರಣ್, ಸೇರಿದಂತೆ ಚಂದಗಿರಿಕೊಪ್ಪಲು ಸ್ವಾಮಿಗೌಡ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಶ್ರೀನಿವಾಸ್ ಉಪಸ್ಥಿತರಿದ್ದರು.

ಮಳೆ ಹಾನಿ ಕಾಮಗಾರಿಗಳ ಆರಂಭಿಸಲು ಸೂಚನೆ

ಮಂಡ್ಯ,ನ.5– ತೀವ್ರ ಮಳೆಯಿಂದ ಉಂಟಾಗಿರುವ ರಸ್ತೆ ಸೇತುವೆ, ಶಾಲೆ ಹಾಗೂ ಅಂಗನವಾಡಿ ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭಿಸಿ ವರದಿ ನೀಡುವಂತೆ ಜಿಲ್ಲಾಧಿಕಾರಿ ಡಾ.ಎಚ್.ಎನ್. ಗೋಪಾಲಕೃಷ್ಣ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಳೆಯಿಂದ ಹಾನಿಯಾಗಿರುವ 260 ಶಾಲೆಗಳ ಪೈಕಿ 233 ಶಾಲೆಗಳ ದುರಸ್ತಿ ಕಾಮಗಾರಿಗಳಿಗೆ ಎಸ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ 466 ಲಕ್ಷ ರೂ. ಹಾಗೂ 36 ಆಸ್ಪತ್ರೆಗಳ ಪೈಕಿ 25 ಆಸ್ಪತ್ರೆಗಳ ದುರಸ್ತಿಗೆ 50 ಲಕ್ಷ ರೂ.ಗಳಿಗೆ ಅನುಮೋದನೆ ನೀಡಲಾಗಿದೆ. ಕಾಮಗಾರಿ ಅನುಷ್ಠಾನ ಮಾಡುವ ಇಲಾಖೆ, ಸಂಸ್ಥೆ ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭಿಸಬೇಕು ಎಂದರು.

ಮಳೆ ಹಾನಿಯಾದ ರಸ್ತೆ ಸೇತುವೆ, ಪೈಪ್ ಲೈನ್, ಕೆರೆ ಮುಂತಾದ ಸ್ಥಳಗಳಲ್ಲಿ ತಾತ್ಕಾಲಿಕ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಶಾಶ್ವತ ಕಾಮಗಾರಿ ಕೈಗೊಳ್ಳಲು ಸರ್ಕಾರ ಅಥವಾ ಕೇಂದ್ರ ಕಚೇರಿಗೆ ಬರೆದಿರುವ ಪತ್ರಗಳ ಬಗ್ಗೆ ಹಿರಿಯ ಅಧಿಕಾರಿಗಳು ಹಾಗೂ ಸಚಿವರ ಗಮನಕ್ಕೆ ತರುವಂತೆ ತಿಳಿಸಿದರು.

ಮನೆ ಹಾನಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ 571 ಮನೆಗಳಿಗೆ ಹಾನಿಯಾಗಿದ್ದು, 361 ಮನೆಗಳ ಪರಿಹಾರ ಪಾವತಿ ಮಾಡಲಾಗಿದೆ. 210 ಮನೆಗಳ ಪರಿಹಾರ ಪಾವತಿ ಬಾಕಿ ಇದ್ದು, ಪರಿಹಾರ ಪಾವತಿ ಮಾಡಲು ತಾಲೂಕುಗಳಲ್ಲಿ ಬೇಕಿರುವ ಅನುದಾನದ ವರದಿಯನ್ನು ಪಡೆದು ಬಿಡುಗಡೆ ಮಾಡಲಾಗುವುದು. ಪರಿಹಾರ ಹಣವನ್ನು ಶೀಘ್ರವಾಗಿ ಪಾವತಿ ಮಾಡಬೇಕು ಎಂದರು.

ಲೋಕೋಪಯೋಗಿ ಇಲಾಖೆ ವತಿಯಿಂದ ದುರಸ್ತಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು 91.70 ಲಕ್ಷ ರೂ.ಗಳ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ ಎಂದು ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರು ಸಭೆಗೆ ಮಾಹಿತಿ ನೀಡಿದರು.

ಜಿಪಂ ಸಿಇಒ ಶಾಂತಾ ಎಲ್.ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್. ನಾಗರಾಜು, ಉಪವಿಭಾಗಾಧಿಕಾರಿಗಳಾದ ಎಚ್.ಎಸ್.ಕೀರ್ತನಾ, ಅಹಮದ್ ಅಕ್ರಮ್ ಷಾ, ಜಿಲ್ಲಾಧಿಕಾರಿಗಳ ಕಚೇರಿ ಸಹಾಯಕ ಸ್ವಾಮಿಗೌಡ ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳಿದ್ದರು.



ದೊಡ್ಡಬ್ಯಾಡರಹಳ್ಳಿ ಡೈರಿಗೆ ಅಧ್ಯಕ್ಷರ ಆಯ್ಕೆ



ಪಾಂಡವಪುರ, ನ.5– ದೊಡ್ಡಬ್ಯಾಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರಾಮಲಿಂಗೇಗೌಡ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಹಿಂದಿನ ಅಧ್ಯಕ್ಷ ಡಿ.ಕೆ.ರವಿ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಅದರಂತೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಮಲಿಂಗೇಗೌಡ ನಾಮಪತ್ರ ಸಲ್ಲಿಸಿದರು. ಇವರನ್ನು ಹೊರತು ಉಳಿದ ಯಾರೂ ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ರಾಮಲಿಂಗೇಗೌಡ ಅವರನ್ನು ಸಂಘದ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಘೋಷಿಸಿದರು. ನೂತನ ಅಧ್ಯಕ್ಷ ರಾಮಲಿಂಗೇಗೌಡ ಅವರನ್ನು ಎಲ್ಲಾ ನಿರ್ದೇಶಕರು, ಬೆಂಬಲಿಗರು ಅಭಿನಂದಿಸಿದರು.

ಅಧ್ಯಕ್ಷ ರಾಮಲಿಂಗೇಗೌಡ ಮಾತನಾಡಿ, ಡೈರಿಯ ಎಲ್ಲಾ ಸದಸ್ಯರ ಸಹಕಾರದಿಂದ ಡೇರಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಡೇರಿಯ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಡೈರಿ ಉಪಾಧ್ಯಕ್ಷ ಶ್ರೀನಿವಾಸ್, ನಿರ್ದೇಶಕರಾದ ನಿಂಗರಾಜ್, ಡಿ.ಕೆ.ರವಿ, ಎನ್.ಕೃಷ್ಣ, ಡಿ.ಎಂ.ಶಿವಲಿಂಗೇಗೌಡ, ಕಾಳೇಗೌಡ, ಕೃಷ್ಣಶೆಟ್ಟಿ, ರತ್ನಮ್ಮ, ಪ್ರೇಮ, ಪವಿತ್ರ, ನ್ಯಾಮಿನಿ ನಿರ್ದೇಶಕ ಕೃಷ್ಣೇಗೌಡ, ಕಾರ್ಯದರ್ಶಿ ಸಿ.ನಾಗೇಂದ್ರ, ಸಿಬ್ಬಂದಿಗಳಾದ ರವಿ, ಅಣ್ಣೇಗೌಡ ಸೇರಿದಂತೆ ಹಲವರು ಇದ್ದರು.

ನಿರ್ಮಾಣ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ, ಯಂತ್ರೋಪಕರಣದೊಂದಿಗೆ

ವೈಜ್ಞಾನಿಕವಾಗಿ ಕಾಮಗಾರಿ ಕೈಗೊಳ್ಳಿ

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸದಸ್ಯ ಆರ್.ಕೆ.ಪಾಂಡೆ ಸಲಹೆ



ಮೈಸೂರು, ನ.5(ಎಂಟಿವೈ)– ಹೆದ್ದಾರಿ ಸೇರಿದಂತೆ ನಿರ್ಮಾಣ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡು, ಯಂತ್ರೋಪಕರಣಗಳ ಮೂಲಕ ವೈಜ್ಞಾನಿಕವಾಗಿ ಕಾಮಗಾರಿ ನಡೆಸುವಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸದಸ್ಯ ಆರ್.ಕೆ.ಪಾಂಡೆ ಸಲಹೆ ನೀಡಿದ್ದಾರೆ.

ಮೈಸೂರಿನ ವಿಶ್ವೇಶ್ವರನಗರದ ಎಂಬಿಸಿಟಿ ಸಭಾಂಗಣದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕ ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ನಿರ್ಮಾಣ ಉದ್ಯಮದಲ್ಲಿ ಆಧುನಿಕ ತಂತ್ರಜ್ಞಾನಗಳು ಕುರಿತ ಬಿಲ್ಡ್ ಟೆಕ್-2022 ರಾಷ್ಟ್ರೀಯ ತಾಂತ್ರಿಕ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರ ಹೊಸ ಹೊಸ ತಂತ್ರಜ್ಞಾನಗಳ ಬಳಕೆಯಾಗುತ್ತಿದೆ. ಇದರಿಂದ ಈ ಹಿಂದೆ ವ್ಯವಸ್ಥೆ ಬದಲಾಗುತ್ತಿದೆ. ಅದಕ್ಕೆ ನಿರ್ಮಾಣ ಕ್ಷೇತ್ರ ಹೊರತಾಗಿಲ್ಲ. ಹೊಸದಾಗಿ ಆವಿಷ್ಕಾರಗೊಂಡಿರುವ ತಂತ್ರಜ್ಞಾನಗಳ ಸದ್ಬಳಕೆಯಿಂದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬಹುದಾಗಿದೆ ಎಂದರು.


ಪ್ರತಿದಿನವೂ ಹೊಸ ಹೊಸ ತಂತ್ರಜ್ಞಾನಗಳು ಪ್ರವರ್ಧಮಾನಕ್ಕೆ ಬರುತ್ತಿವೆ. ಕಳೆದ ವರ್ಷ ಚಾಲ್ತಿಯಲ್ಲಿದ್ದ ತಂತ್ರಜ್ಞಾನ ಈ ವರ್ಷ ಅವಸಾನದತ್ತ ಸಾಗಿ, ಹೊಸ ತಂತ್ರಜ್ಞಾನ ಅವಕಾಶ ದೊರಕುತ್ತಿದೆ. ಸ್ಪರ್ಧಾತ್ಮಕ ಯುವ ಹಾಗೂ ವೇಗದ ಕಾಮಗಾರಿಗಾಗಿ ಹೊಸ ತಂತ್ರಜ್ಞಾನ ಅಳವಡಿಕೆ ಅನಿವಾರ್ಯ. ತಂತ್ರಜ್ಞಾನ ಆವಿಷ್ಕಾರಗೊಂಡಂತೆ ಕಾಮಗಾರಿಗಳ ವೇಗ ಸಹ ಹೆಚ್ಚಾಗಲಿದೆ ಎಂದು ಅಭಿಪ್ರಾಯಪಟ್ಟರು.

ಹೆದ್ದಾರಿ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಇತ್ತೀಚಿನ ದಿನಗಳಲ್ಲಿ ಡ್ರೋನ್ ಸರ್ವೆ ತಂತ್ರಜ್ಞಾನ ಹೆಚ್ಚಾಗುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಡ್ರೋನ್ ಸರ್ವೆ ಅನಿವಾರ್ಯವೂ ಆಗಿದೆ ಡ್ರೋನ್ ಸರ್ವೆ ಟೆಕ್ನಾಲಜಿ ನಿರ್ಮಾಣ ಸಂಸ್ಥೆಗಳಿಗೆ ಸೂಕ್ತವಾಗಿದೆ. ನೂತನ ತಂತ್ರಜ್ಞಾನ ಬಳಕೆ ಪ್ರಭಾವದಿಂದ ಗುತ್ತಿಗೆ ನೀಡುವ ಪದ್ಧತಿಯಲ್ಲೂ ಮಾರ್ಪಾಡಾಗಿದೆ. ಈ ಹಿಂದೆ ಇದ್ದ ಪದ್ಧತಿ ರದ್ದಾಗುತ್ತಿದೆ. ಈಗ ಗುತ್ತಿಗೆದಾರ ಸಂಸ್ಥೆ ಕುರಿತಂತೆ ಹಾಗೂ ಅವರು ಬಳಸುವ ತಂತ್ರಜ್ಞಾನದ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತದೆ. ಎಲ್ಲದರ ಬಗ್ಗೆ ಇನ್‌ಪುಟ್ ತೆಗೆದುಕೊಂಡು ಗುತ್ತಿಗೆ ನೀಡಲಾಗುತ್ತದೆ ಎಂದರು.


ಸರ್ವೆ ಕ್ಷೇತ್ರ ಹಾಗೂ ಯೋಜನಾ ವಿಧಾನ ಸೇರಿದಂತೆ ಎಲ್ಲೆಡೆ ಸಾಂಪ್ರದಾಯಿಕ ಮಾದರಿಗೆ ತಿಲಾಂಜಲಿ ನೀಡಲಾಗುತ್ತಿದೆ. ಸಿಮೆಂಟ್ ಉತ್ಪಾದನೆ, ಬಳಕೆಯಲ್ಲೂ ತಂತ್ರಜ್ಞಾನ ಬದಲಾಗಿದೆ. ಮಿಕ್ಸರ್‌ಗಳಲ್ಲಿ ಕೋಲ್ಡ್ ಮತ್ತು ವಾರ್ಮ್ ವಿಧಾನ ಪರಿಚಯಿಸಲಾಗಿದೆ. ನಿರ್ಮಾಣ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲು ಹಲವು ಸವಾಲುಗಳು ಎದುರಾಗಿವೆ. ಆ ಸವಾಲುಗಳೊಂದಿಗೆ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಂತಹ ಅನಿವಾರ್ಯತೆ ಎದುರಾಗಿದೆ. ಬೆಂಗಳೂರು-ಮೈಸೂರು ನಡುವೆ 140 ಕಿ.ಮೀ. ಅಂತರವಿದೆ ಈ ಎರಡು ನಗರಗಳ ನಡುವೆ ದಶಪಥ ಹೆದ್ದಾರಿ ನಿರ್ಮಾಣವಾಗುತ್ತಿದ್ದು, ಬೆಂಗಳೂರು-ಮೈಸೂರು ನಡುವಿನ ಪ್ರಯಾಣ ಅವಧಿ ಕಡಿಮೆ ಆಗಲಿದೆ ಎಂದು ತಿಳಿಸಿದರು

ಇದೇ ವೇಳೆ ಬಿಲ್ಡ್‌ಟೆಕ್-22 ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸ ಲಾಯಿತು. ಬಿಎಐ ರಾಜ್ಯಾಧ್ಯಕ್ಷ ಆರ್.ಬಿ. ದಯಾನಂದ, ಮೈಸೂರು ಘಟಕದ ಅಧ್ಯಕ್ಷ ಆರ್. ರಘುನಾಥ್, ಬಿಲ್ಡ್‌ಟೆಕ್ ಅಧ್ಯಕ್ಷ ವಿ. ಗುರುದತ್ತ, ಕಾರ್ಯದರ್ಶಿ ಚಂದ್ರಶೇಖರ ಭಾರದ್ವಾಜ್ ಇದ್ದರು.

ಈ ಅಂಡರ್‌ಬ್ರಿಡ್ಜ್ ಬಳಿ ಅಪಾಯವಿದೆ... ಎಚ್ಚರ...!?



● ಅಭಿವೃದ್ಧಿ ಹೆಸರಲ್ಲಿ ಅಧಿಕಾರಿಗಳೇ ತಂದಿತ್ತಿರುವ ಅಪಾಯವಿದು ● ಜನಪ್ರತಿನಿಧಿಗಳಿಗಿಲ್ಲ ಕಿಮ್ಮತ್ತು; ಅಧಿಕಾರಿಗಳದ್ದೇ ಪಾಳಿಕೆ ಅಧಿಕಾರ




ಮೈಸೂರು, ನ5(ಎಸ್‌ಬಿಡಿ)– ಮೈಸೂರಿನ ಮಹಾತ್ಮಗಾಂಧಿ ರಸ್ತೆ ಅಂಡರ್‌ಬ್ರಿಡ್ಜ್ ಬಳಿ ನಿತ್ಯ ಜನರು ಹಾಗೂ ವಾಹನ ಸವಾರರು ಆತಂಕದಲ್ಲೇ ಸಂಚರಿಸುವಂತಾಗಿದೆ. ಇದಕ್ಕೆ ನಗರ ಪಾಲಿಕೆಯವರೇ ಸೃಷ್ಟಿಸಿರುವ ಕಂದಕ ಕಾರಣವಾಗಿದೆ.

ಇಲ್ಲಿ ಒಳಚರಂಡಿ ಹೊಸ ಪೈಪ್‌ಲೈನ್ ಅಳವಡಿಸಿ ಹಲವು ತಿಂಗಳಾಗಿದ್ದರೂ ರಸ್ತೆ ದುರಸ್ತಿ ಮಾಡಿಲ್ಲ. ಪೈಪ್‌ಲೈನ್ ಕಾಮಗಾರಿ ಬಳಿಕ ಮಣ್ಣುಮುಚ್ಚಿ ಕೈ ತೊಳೆದುಕೊಂಡಿದ್ದಾರೆ. ನಿರಂತರ ವಾಹನ ಸಂಚಾರ ಹಾಗೂ ಮಳೆ ಪರಿಣಾಮವಾಗಿ ದೊಡ್ಡ ಕಂದಕಗಳೇ ನಿರ್ಮಾಣವಾಗಿವೆ. ಅಂಡರ್ ಬ್ರಿಡ್ಜ್‌ನಲ್ಲಿ ರಸ್ತೆ ಕಿರಿದಾಗಿರುವುದರಿಂದ ಸದಾ ಇಲ್ಲಿ ವಾಹನ ದಟ್ಟಣೆ ಇದ್ದೇ ಇರುತ್ತದೆ. ಹಗಲು ಹೊತ್ತು ಹೇಗಾದರೂ ಸಾವರಿಸಿಕೊಂಡು ಸಂಚರಿಸಬಹುದು. ಆದರೆ ರಾತ್ರಿ ವೇಳೆ ವೇಗವಾಗಿ ಬರುವ ವಾಹನಗಳಿಗೆ ತಕ್ಷಣಕ್ಕೆ ಅಪಾಯಕಾರಿ ಕಂದಕಗಳನ್ನು ಗುರುತಿಸಲು ಸಾಧ್ಯವಾಗದೆ ಅನಾಹುತ ಸಂಭವಿಸುವ ಸಾಧ್ಯತೆ ಹೆಚ್ಚಿದೆ. ಈಗಲೂ ಈ ಕಂದಕಗಳಿಂದ ನಿತ್ಯ ಸಣ್ಣಪುಟ್ಟ ಅಪಘಾತ ಸಂಭವಿಸುವುದು ಸಾಮಾನ್ಯ ಎಂಬಂತಾಗಿದೆ. ಜೆಎಸ್‌ಎಸ್ ಆಸ್ಪತ್ರೆಗೆ ಈ ಭಾಗದಿಂದ ಬರುವ ಆಂಬುಲೆನ್ಸ್ ಸಂಚಾರಕ್ಕೂ ತೀವ್ರ ಅಡ್ಡಿಯಾಗಿದೆ. ರಾತ್ರಿಯಲ್ಲಂತೂ ಇಲ್ಲಿ ವಾಹನ ಚಾಲಿಸುವುದು ಅತ್ಯಂತ ಅಪಾಯಕಾರಿ ಎನ್ನುವಂತಾಗಿದೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ನಗರ ಪಾಲಿಕೆ ಅಧಿಕಾರಿಗಳು ಮಾತ್ರ ರಸ್ತೆ ದುರಸ್ತಿಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡಿಲ್ಲ.

ಜನಪ್ರತಿನಿಧಿಗಳಿಗೆ ಕೇರ್ ಮಾಡದ ಅಧಿಕಾರಿಗಳು: ಈ ಬಗ್ಗೆ ಪ್ರತಿಕ್ರಿಯಿಸಿದ ಸ್ಥಳೀಯ ಕಾರ್ಪೋರೇಟರ್ ಬಿ.ವಿ.ಮಂಜುನಾಥ್, ಯುಜಿಡಿ ಪೈಪ್‌ಲೈನ್ ಕಾಮಗಾರಿ ಬಳಿಕ ಅದೇ ಗುತ್ತಿಗೆದಾರ ತಕ್ಷಣವೇ ಸಿಮೆಂಟ್, ಜಲ್ಲಿ, ಮರಳು ಮಿಶ್ರಿತ ವೆಟ್‌ಮಿಕ್ಸ್ ಹಾಕಿ ಸಮತಟ್ಟು ಮಾಡಬೇಕು. ಈ ಕೆಲಸವನ್ನು ಯುಜಿಡಿ ವಿಭಾಗದಿಂದಲೇ ನಡೆಸಬೇಕೆಂದು ಕೌನ್ಸಿಲ್‌ನಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಇದನ್ನು ಬದಲಿಸಿ ಗುಂಡಿ ಮುಚ್ಚುವ ಜವಾಬ್ದಾರಿಯನ್ನು ಸಿವಿಲ್ ವಿಭಾಗವೇ ನಿರ್ವಹಿಸಬೇಕೆಂದು ಆಯುಕ್ತರು ಸೂಚಿಸಿದ್ದರಿಂದ ಯುಜಿಡಿ ಪೈಪ್‌ಲೈನ್ ಬಳಿಕ ಕೇವಲ ಮಣ್ಣುಮುಚ್ಚಿದ್ದಾರೆ. ಇದೀಗ ಆ ಜಾಗದಲ್ಲಿ ಗುಂಡಿ ಬಿದ್ದು ಸಾರ್ವಜನಿಕರಿಗೆ ತೀವ್ರ ತೊಂದರೆಯಾಗಿದೆ. ರಾಮಾನುಜ ರಸ್ತೆ 4ನೇ ಕ್ರಾಸ್, ದೇವಾಂಬ ಅಗ್ರಹಾರ, ವೀಣೆಶೇಷಣ್ಣ ರಸ್ತೆ 4ನೇ ಕ್ರಾಸ್ ಸೇರಿದಂತೆ ಹಲವು ಕಡೆ ಇದೇ ದುಸ್ಥಿತಿ ಇದೆ. ಸಾರ್ವಜನಿಕರ ಅನುಕೂಲಕ್ಕಾಗಿ ತಕ್ಷಣ ವೆಟ್‌ಮಿಕ್ಸ್ ಹಾಕಿಸಲು ಕ್ರಮ ವಹಿಸುವಂತೆ ಎಷ್ಟು ಬಾರಿ ಹೇಳಿದರೂ ವಲಯ ಕಚೇರಿ 1ರ ಅಭಿವೃದ್ಧಿ ಅಧಿಕಾರಿ ನಿರ್ಲಕ್ಷ್ಯಿಸಿದ್ದಾರೆ. ಅವರ ವಿರುದ್ಧ ಆಯುಕ್ತರಿಗೆ ದೂರು ನೀಡಿ 15 ದಿನಗಳಾಗಿದೆ. ಆದರೂ ಈವರೆಗೆ ಯಾವುದೇ ಕ್ರಮವಾಗಿಲ್ಲ ಎಂದು ತಿಳಿಸಿದರು.

ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೂ ತಲೆ ಕೆಡಿಸಿಕೊಳ್ಳದ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳ ಮಾತನ್ನೂ ನಿರ್ಲಕ್ಷ್ಯಿಸಿದ್ದಾರೆ. ಅಗ್ರಹಾರ ವಾರ್ಡ್‌ನಲ್ಲೇ ಹತ್ತಾರು ಕಡೆ ಹೀಗೆ ರಸ್ತೆ ಹಾಳಾಗಿದೆ. ಯುಜಿಡಿ ಕಾಮಗಾರಿ ಬಳಿಕ ಹಳ್ಳಬಿದ್ದು ವಾಹನ ಸಂಚಾರ ಹಾಗೂ ಜನ ಸಂಚಾರಕ್ಕೆ ತೀವ್ರ ಅಡ್ಡಿಯಾಗಿದೆ. ಇದಕ್ಕೆ ಅಭಿವೃದ್ಧಿ ಅಧಿಕಾರಿಯ ನಿರ್ಲಕ್ಷ್ಯವೇ ಕಾರಣ ಎಂದು ಕಿಡಿಕಾರಿದರು.

ರಸ್ತೆ ಅವ್ಯವಸ್ಥೆ ಬಗ್ಗೆ ಪ್ರತಿಕ್ರಿಯೆಗಾಗಿ ವಲಯ ಕಚೇರಿ 1ರ ಅಭಿವೃದ್ಧಿ ಅಧಿಕಾರಿ ಸುಶ್ರುತ್ ಅವರಿಗೆ ಕರೆ ಮಾಡಲಾಯಿತಾದರೂ ಅವರು ಕರೆ ಸ್ವೀಕರಿಸಲಿಲ್ಲ.



ಮೈಸೂರಿನ ಸಾತಗಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷೆ ಲತಾ ಬಸವರಾಜು, ಉಪಾಧ್ಯಕ್ಷೆ ಗೌರಮ್ಮ ಮಹದೇವ್ ಅವರನ್ನು ಸಂಘದ ನಿರ್ದೇಶಕರು, ಕಾರ್ಯದರ್ಶಿ ಕಾವ್ಯ, ಮಾಜಿ ಗ್ರಾಪಂ ಸದಸ್ಯ ಎನ್.ಜಯಣ್ಣ, ರೈತ ಸಂಘದ ಬಸವರಾಜು, ಗ್ರಾಮಸ್ಥರಾದ ನಂಜಪ್ಪ, ಬಸವರಾಜು, ಶಾಂತಪ್ಪ, ಗಿರೀಶ್, ಹೆಚ್.ಕೆ.ಮಹದೇವ್, ಯೋಗೇಶ್ ಸ್ವಾಮಿ, ಶಿವಮಲ್ಲು, ಮಹೇಶ್, ಸುರೇಶ, ರೇವಣ್ಣ ಮಾಧು, ಮಲ್ಲಿಕಾರ್ಜುನ, ಮಹದೇವಸ್ವಾಮಿ, ಸಂಜು ಇನ್ನಿತರರು ಅಭಿನಂದಿಸಿದರು.


ಚಿಕ್ಕಲಿಂಗಮ್ಮ ನಿಧನ



ಹೆಚ್.ಡಿ.ಕೋಟೆ, ನ.5– ಪಟ್ಟಣದ ಸಿದ್ದಪ್ಪಾಜಿ ರಸ್ತೆ ನಿವಾಸಿ ಚಿಕ್ಕಲಿಂಗಮ್ಮ(96) ಶನಿವಾರ ನಿಧನರಾದರು. ಮೃತರು ಹಿರಿಯ ಪತ್ರಕರ್ತ ಎಚ್.ಬಿ.ಬಸವರಾಜು ಸೇರಿದಂತೆ ಮೂವರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ತಾಲೂಕಿನ ಬೆಳಗನಹಳ್ಳಿಯಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮುಂಡೇಶ್ವರಿಯ ಪ್ರತಿ ಗ್ರಾಮಕ್ಕೂ ಪಾದಯಾತ್ರೆ

ಕಾಂಗ್ರೆಸ್ ಕಾರ್ಯಕರ್ತರಿಗೆ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಕರೆ



ಮೈಸೂರು, ನ.5– ಜನರ ಆಶೀರ್ವಾದಕ್ಕಾಗಿ ಚಾಮುಂಡೇಶ್ವರಿ ಕ್ಷೇತ್ರದ ಪ್ರತೀ ಗ್ರಾಮಕ್ಕೂ ಪಾದಯಾತ್ರೆ ಹಮ್ಮಿಕೊಳ್ಳಬೇಕು ಎಂದು ಕಾಂಗ್ರೆಸ್ ಹಿರಿಯ ಮುಖಂಡ ಹಾಗೂ ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡರು ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಪುನೀತ್ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಎರಡು ಬ್ಲಾಕ್‌ಗಳ ಮುಂಚೂಣಿ ಘಟಕಗಳ ಅಧ್ಯಕ್ಷರ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲೂ ಜನಾಶೀರ್ವಾದ ಸಭೆ ನಡೆಸಿ, ಪಾದಯಾತ್ರೆ ಹಮ್ಮಿಕೊಳ್ಳಬೇಕಾಗಿದೆ. ಈ ವೇಳೆ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ, ಕಾಂಗ್ರೆಸ್ ಸರ್ಕಾರವಿದ್ದ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ಜನಪ್ರಿಯ ಕಾರ್ಯಕ್ರಮಗಳನ್ನು ತಿಳಿಸಿಕೊಡುವ ಮೂಲಕ ಪಕ್ಷ ಸಂಘಟನೆಗೆ ಶ್ರಮಿಸುವಂತೆ ಮರೀಗೌಡರು ತಿಳಿಸಿದರು.

ರಾಷ್ಟ್ರೀಯ ಕಾಂಗ್ರೆಸ್ ನೂತನ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ನ.6 ರಂದು ಬೆಂಗಳೂರಿಗೆ ಆಗಮಿಸಲಿದ್ದಾರೆ. ಅಂದು ಅವರಿಗೆ ಅಭಿನಂದನಾ ಸಮಾರಂಭ ನಡೆಯಲಿದ್ದು, ಮೈಸೂರಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಬೇಕು ಎಂದು ಕೋರಿದರು. ಸಭೆಯಲ್ಲಿ ಇಲವಾಲ ಬ್ಲಾಕ್ ಅಧ್ಯಕ್ಷ ಗುರುಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಸತೀಶ್‌ಕುಮಾರ್, ಮುಖಂಡರಾದ ಸಿದ್ದರಾಜು, ರವಿ ಹಾಗೂ ಕಾಂಗ್ರೆಸ್ ಮುಂಚೂಣಿ ಘಟಕದ ಅಧ್ಯಕ್ಷರು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಾಸಕ ನಾಗೇಂದ್ರರ ಹೆಸರೇಳಿಕೊಂಡು ಸಾರಿಗೆ ಅಧಿಕಾರಿಗೆ ವರ್ಗಾವಣೆ ಒತ್ತಡ: ವ್ಯಕ್ತಿ ಬಂಧನ

ಮೈಸೂರು, ನ.5– ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರ ಹೆಸರೇಳಿಕೊಂಡು ಸಾರಿಗೆ ಸಂಸ್ಥೆ ನೌಕರರಿಬ್ಬರ ವರ್ಗಾವಣೆಗೆ ಒತ್ತಾಯಿಸಿದ್ದ ವ್ಯಕ್ತಿಯನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದಾರೆ ಎಂದು ತಿಳಿದು ಬಂದಿದೆ.

ಕೆಎಸ್‌ಆರ್‌ಟಿಸಿ ಮಂಡ್ಯ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ನೌಕರರನ್ನು ಮಳವಳ್ಳಿ ಘಟಕಕ್ಕೆ ವರ್ಗಾವಣೆ ಮಾಡಿಕೊಡುವಂತೆ ಶಾಸಕ ಎಲ್.ನಾಗೇಂದ್ರ ಕಡೆಯವರೆಂದು ಹೇಳಿಕೊಂಡು ವ್ಯಕ್ತಿಯೊಬ್ಬ ಸಂಸ್ಥೆಯ ಮೇಲಧಿಕಾರಿಗೆ ಕರೆ ಮಾಡಿ ಒತ್ತಡ ಹಾಕಿದ್ದ. ಈ ಬಗ್ಗೆ ಅನುಮಾನಗೊಂಡ ಅಧಿಕಾರಿ ಶಾಸಕ ಎಲ್.ನಾಗೇಂದ್ರ ಅವರನ್ನು ಸಂಪರ್ಕಿಸಿ ವಿಷಯ ತಿಳಿಸಿದಾಗ ಅದು ಸುಳ್ಳೆಂದು ಗೊತ್ತಾಗಿದೆ. ಬಳಿಕ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರ ಹಿನ್ನೆಲೆಯಲ್ಲಿ ಮಳವಳ್ಳಿ ಮೂಲದ ವ್ಯಕ್ತಿಯನ್ನು ಬಂಧಿಸಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಶಾಸಕ ಎಲ್.ನಾಗೇಂದ್ರ, ಕೆಎಸ್‌ಆರ್‌ಟಿಸಿ ಅಧಿಕಾರಿಯೊಬ್ಬರು ನನಗೆ ವಿಷಯ ತಿಳಿಸಿದರು. ಆದರೆ ನಾನು ಯಾರಿಂದಲೂ ಕರೆ ಮಾಡಿಸಿಲ್ಲ ಎಂದು ಸ್ಪಷ್ಟಪಡಿಸಿದೆ. ಹಾಗಾದರೆ ಆತನ ವಿರುದ್ಧ ಕ್ರಮ ಕೈಗೊಳ್ಳಬಹುದೇ ಎಂದು ಕೇಳಿದರು. ಅದಕ್ಕೆ ನಾನು ಧಾರಾಳವಾಗಿ ಕ್ರಮ ಜರುಗಿಸಿ ಎಂದು ಹೇಳಿದ್ದಾಗಿ ತಿಳಿಸಿದರು.

'ಭಾರತೀಯ ಹಬ್ಬಗಳ' ಸಾಂಸ್ಕೃತಿಕ ಉತ್ಸವ

ಶ್ರೀ ಕೃಷ್ಣನ ಲೀಲಾಮೃತ ಉಣಬಡಿಸಿದ ನೃತ್ಯರೂಪಕ





ಮೈಸೂರು, ನ.5(ಎಂಕೆ)– ಭಾರತೀಯ ಹಬ್ಬಗಳ ಸಾಂಸ್ಕೃತಿಕ ವೈಭವ ಸಾರುವುದರೊಂದಿಗೆ ಸರ್ವಂ ಕೃಷ್ಣಮಯಂ ಭಕ್ತಿಸಾರ ಎಲ್ಲೆಡೆ ಪಸರಿಸಿತು...

ಮೈಸೂರಿನ ಕಲಾಮಂದಿರ ವೇದಿಕೆಯಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ ಆಯೋಜಿಸಿರುವ 'ಏಳು ದಿನಗಳ ಸಾಂಸ್ಕೃತಿಕ ಉತ್ಸವ'ದ ಎರಡನೇ ದಿನ ಭರತನಾಟ್ಯ ನೃತ್ಯ ರೂಪಕದ ಮೂಲಕ ಭಾರತೀಯ ಹಬ್ಬಗಳ ಮಹತ್ವ ತಿಳಿಸಿಕೊಡಲಾಯಿತು.



ವಿದುಷಿ ಶ್ರೀಮತಿ ಅನುರಾಧ ವಿಕ್ರಾಂತ್ ನಿರ್ದೇಶನದಲ್ಲಿ ಬೆಂಗಳೂರಿನ ದೃಷ್ಟಿ ಆರ್ಟ್ಸ್ ಎನ್‌ಸೆಂಬಲ್ ನೃತ್ಯ ಕಲಾ ತಂಡ ಪ್ರಸ್ತುತಪಡಿಸಿದ 'ಭಾರತೀಯ ಹಬ್ಬಗಳು' ಹಾಗೂ 'ಶ್ರೀ ಕೃಷ್ಣ ಪರೀಕ್ಷಣಂ' ಶಾಸ್ತ್ರೀಯ ನೃತ್ಯ ಪ್ರಸ್ತುತಿ ಕಲಾಭಿಮಾನಿಗಳ ಮನಸೂರೆಗೊಂಡಿತು.

ಸುಂದರ ವೇದಿಕೆಯಲ್ಲಿ ಸಿಂಗಾರಗೊಂಡು ಕಂಗೊಳಿಸುತ್ತಿದ್ದ ಭರತನಾಟ್ಯ ನೃತ್ಯ ಕಲಾವಿದರು ತಮ್ಮ ಅಮೋಘ ನೃತ್ಯಾಭಿನಯದ ಮೂಲಕ ಎಲ್ಲರನ್ನು ರಂಜಿಸಿದರು. 'ಜಯ ಜಯ ಗಣಪತಿ ದಿವ್ಯ ನಮಸ್ತೆ' ಹಾಡಿನೊಂದಿಗೆ ವಿಘ್ನ ನಿವಾರಕನಿಗೆ ನೃತ್ಯ ವಂದನೆ ಸಲ್ಲಿಸಿದ ಕಲಾವಿದರು, ನಾಡಹಬ್ಬ ಮೈಸೂರು ದಸರಾ ಹಾಗೂ ತಾಯಿ ಚಾಮುಂಡೇಶ್ವರಿ ಮಹಿಮೆ ತಿಳಿಸಿಕೊಟ್ಟರು.

ಸುಗ್ಗಿ ಕುಣಿತದ ಮೂಲಕ ಕಲಾರಸಿಕರಿಗೆ ಎಳ್ಳು–ಬೆಲ್ಲದ ಸಿಹಿ ನೀಡಿ ಸಂಕ್ರಾಂತಿ ಸಂಭ್ರಮ ಪಸರಿಸಿದರಲ್ಲದೆ ಕೈಯಲ್ಲಿ ದೀಪಗಳನ್ನು ಹಿಡಿದು ಮನಮೋಹಕ ನೃತ್ಯ ಪ್ರದರ್ಶನ ನೀಡಿ ಬೆಳಕಿನ ಹಬ್ಬ ದೀಪಾವಳಿಯನ್ನು ಆಚರಿಸುವ ಮೂಲಕ ಭಾರತೀಯ ಹಬ್ಬಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು.

ಸರ್ವಂ ಕೃಷ್ಣಮಯಂ: 'ಶ್ರೀ ಕೃಷ್ಣ ಪರೀಕ್ಷಣಂ' ನೃತ್ಯಾಭಿನಯದ ಮೂಲಕ ಶ್ರೀ ಕೃಷ್ಣನ ಮಹಿಮೆಗಳ ಅನಾವರಣಗೊಳಿಸಿದ ಕಲಾವಿದರು, ಸರ್ವಂ ಕೃಷ್ಣಮಯಂ ಎಂದು ಸಾರಿದರು. ಶ್ರೀ ಕೃಷ್ಣನ ಬಾಲ್ಯ ಸೇರಿದಂತೆ ಪ್ರಮುಖ ಪ್ರಸಂಗಗಳನ್ನು ಮನಮೋಹಕವಾಗಿ ಪ್ರಸ್ತುತಪಡಿಸುವ ಮೂಲಕ ಭಕ್ತಿ ಸುಧೆ ಹರಿಸಿದರು. ಬಾಲ್ಯದಲ್ಲಿ ತುಂಟನಾಗಿ, ಗೋಪಿಕೆಯರ ನೆಚ್ಚಿನವನಾಗಿ, ಪಾಂಡವರ ಪ್ರಿಯನಾಗಿ ಲೋಕ ಕಲ್ಯಾಣಕ್ಕೆ ವಿವಿಧ ಅವತಾರಗಳನ್ನು ಎತ್ತಿದ ಶ್ರೀ ಕೃಷ್ಣನ ಮಹಿಮೆಯನ್ನು ಹಾಡು–ನೃತ್ಯದೊಂದಿಗೆ ಅಚ್ಚುಕಟ್ಟಾಗಿ ತಿಳಿಸಿಕೊಡುವ ಮೂಲಕ ಅಪಾರ ಮೆಚ್ಚುಗೆ ಪಡೆದರು.

ಶಿಳ್ಳೆ–ಚಪ್ಪಾಳೆಯ ಪ್ರೋತ್ಸಾಹ: ಭಾರತೀಯ ಹಬ್ಬಗಳ ಸಡಗರ–ಸಂಭ್ರಮವನ್ನು ಭರತನಾಟ್ಯದೊಂದಿಗೆ ಇಮ್ಮಡಿಗೊಳಿಸಿದ ಬೆಂಗಳೂರಿನ ದೃಷ್ಟಿ ಆರ್ಟ್ಸ್ ಎನ್‌ಸೆಂಬಲ್ ಕಲಾವಿದರು ನೋಡುಗರಿಂದ ಶಿಳ್ಳೆ–ಚಪ್ಪಾಳೆಯ ಪ್ರೋತ್ಸಾಹ ಗಿಟ್ಟಿಸಿದರು.

ಹಾಡಿಗೆ ಅನುಗುಣ ನೃತ್ಯ ಹಾಗೂ ಅಭಿನಯ ಪ್ರಸ್ತುಪಡಿಸಿದ ಕಲಾವಿದರು ಎಲ್ಲರ ಅಭಿನಂದನೆಗೆ ಪಾತ್ರರಾದರು. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ ಸಾಹಿತಿ ಪ್ರೊ.ಸಿ.ನಾಗಣ್ಣ ಮತ್ತಿತರರು ಉಪಸ್ಥಿತರಿದ್ದರು.

ಫ್ಲಾಟ್ ಕೊಡದೇ ವಂಚಿಸಿದ್ದ ಶ್ರೀಹರಿ ಪಾಠಕ್ ಸೆರೆ

ಮೈಸೂರು, ನ. 5(ಆರ್‌ಕೆ)– ಮೈಸೂರಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ ಫ್ಲಾಟ್ ಕೊಡುವುದಾಗಿ ಸಾರ್ವಜನಿಕರಿಂದ ಹಣ ಪಡೆದು ವಂಚಿಸಿ ತಲೆಮರೆಸಿಕೊಂಡಿದ್ದ ಪಾಠಕ್ ಡೆವಲಪರ್ಸ್ ಮಾಲೀಕ ಶ್ರೀಹರಿ ಪಾಠಕ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಈ ಸಂಬಂಧ ಮೈಸೂರಿನ ವಿವಿಧ ಠಾಣೆಗಳು ಹಾಗೂ ಗ್ರಾಹಕರ ನ್ಯಾಯಾಲಯದಲ್ಲಿ ಆತನ ವಿರುದ್ಧ ಪ್ರಕರಣ ದಾಖಲಾಗಿತ್ತು. ಒಮ್ಮೆ ಬಂಧನಕ್ಕೊಳಗಾಗಿ ಜಾಮೀನಿನ ಮೇಲೆ ಹೊರಬಂದು ವಿಚಾರಣೆಗೆ ಹಾಜರಾಗದ ಕಾರಣ ಆತನಿಗೆ 17ಕ್ಕೂ ಹೆಚ್ಚು ಬಂಧನ ವಾರೆಂಟ್ ಹೊರಡಿಸಲಾಗಿತ್ತು. ವಿವಿ ಪುರಂ ಠಾಣೆಯಲ್ಲಿ ದಾಖಲಾಗಿದ್ದ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಪಾಠಕ್‌ನನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಹೊರಡಿಸಿದ್ದ ವಾರೆಂಟ್ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಸಿಸಿಬಿ ಮತ್ತು ಎನ್‌ಆರ್ ಉಪವಿಭಾಗದ ಎಸಿಪಿಯವರ ವಿಶೇಷ ತಂಡದ ಪೊಲೀಸರು, ಆತನನ್ನು ಮುಂಬೈನ ಅಂಧೇರಿಯಲ್ಲಿ ನವೆಂಬರ್ 3ರಂದು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದಾರೆ.

ಕಳೆದ 2 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಶ್ರೀಹರಿ ಪಾಠಕ್ ಮೈಸೂರಲ್ಲಿ ಹಲವರಿಂದ ಕೋಟ್ಯಾಂತರ ರೂ. ಹಣ ಪಡೆದು ವಂಚಿಸಿದ್ದ. ಮುಂಗಡವಾಗಿ ಹಣ ಕಟ್ಟಿಸಿಕೊಂಡು ಅಪಾರ್ಟ್‌ಮೆಂಟ್‌ನಲ್ಲಿ ಮನೆಗಳ ಸ್ವಾಧೀನಕ್ಕೆ ಕೊಡದೆ ಸತಾಯಿಸುತ್ತಿದ್ದ. ಆತನ ವಿರುದ್ಧ 40ಕ್ಕೂ ಹೆಚ್ಚು ವಂಚನೆ ಪ್ರಕರಣಗಳು ದಾಖಲಾಗಿವೆ.

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ

ಮೈಸೂರಲ್ಲಿ ಎನ್‌ಐಎ ದಾಳಿ, ಓರ್ವ ವಶಕ್ಕೆ

ಮೈಸೂರು, ನ. 5(ಆರ್‌ಕೆ)–ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ಶನಿವಾರ ಬೆಳಗ್ಗೆ ದಾಳಿ ನಡೆಸಿದ ಎನ್‌ಐಎ ಅಧಿಕಾರಿಗಳು, ಓರ್ವನನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆಗೊಳಪಡಿಸಿದ್ದಾರೆ. ಪಿಎಫ್‌ಐ ಮಾಜಿ ಕಾರ್ಯದರ್ಶಿ ಸುಲೈಮಾನ್ ಎಂಬುವರನ್ನು ವಶಕ್ಕೆ ಪಡೆಯಲಾಗಿದ್ದು, ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಸಂಬಂಧ ಗುಪ್ತ ಸ್ಥಳದಲ್ಲಿ ಮಾಹಿತಿ ಕಲೆಹಾಕುತ್ತಿದ್ದಾರೆ. ಶನಿವಾರ ಮುಂಜಾನೆ ಏಕಕಾಲದಲ್ಲಿ ಉಪ್ಪಿನಂಗಡಿ, ಸುಳ್ಯದಲ್ಲಿ ಕಾರ್ಯಾಚರಣೆ ನಡೆಸಿರುವ ಎನ್‌ಐಎ ಅಧಿಕಾರಿಗಳು ಗ್ರಾಮ ಪಂಚಾಯ್ತಿಯೊಂದರ ಸದಸ್ಯ ಇಕ್ಬಾಲ್, ಸಂಘಟನೆಯೊಂದರ ರಾಜ್ಯ ಕಾರ್ಯದರ್ಶಿ ಶಾಫಿ, ಇಬ್ರಾಹಿಂ ಶಾರನ್ನೂ ವಶಕ್ಕೆ ಪಡೆದಿದ್ದಾರಲ್ಲದೆ, ಹುಬ್ಬಳ್ಳಿ, ಹಳೇ ಹುಬ್ಬಳ್ಳಿಯಲ್ಲೂ ದಾಳಿ ನಡೆಸಿ ಹಲವರನ್ನು ವಿಚಾರಣೆಗೊಳಪಡಿಸಿದ್ದಾರೆ.



ಮೈಸೂರಿನ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಪುಣ್ಯಕೋಟಿ ಸೇವಾ ಟ್ರಸ್ಟ್‌ನಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ, ಡಾ.ಪುನೀತ್ ರಾಜ್‌ಕುಮಾರ್ ನುಡಿನಮನ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಾಜಿ ಎಂಎಲ್‌ಸಿ ಡಿ.ಮಾದೇಗೌಡ ಹಾಗೂ ಪ್ರೊ.ಕೃಷ್ಣೇಗೌಡ ಅವರನ್ನು ಶಾಸಕರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಮಾಜಿ ಶಾಸಕ ವಾಸು ಅಭಿನಂದಿಸಿದರು.

ಕಲೆ, ಸಂಸ್ಕೃತಿ, ಕ್ರೀಡೆ ವಿನಿಮಯಕ್ಕೆ ಪಾಲಿಕೆ ಪ್ರೋತ್ಸಾಹ: ಮೇಯರ್



ಮೈಸೂರು, ನ.5(ಆರ್‌ಕೆ)–ಅಮೇರಿಕಾದ ದಿ ಇಂಡಿಯಾ ಸಿಸ್ಟರ್ ಸಿಟಿ ಅಸೋಸಿಯೇಷನ್ ಆಫ್ ಗ್ರೇಟರ್ ಸಿನ್ಸಿನ್ನಾಟಿ (ISCA)ಯೊಂದಿಗೆ ಮೈಸೂರಿನ ಕಲೆ, ಸಂಸ್ಕೃತಿ, ಕ್ರೀಡೆ, ಪರಂಪರೆಯನ್ನು ವಿನಿಮಯ ಮಾಡಿಕೊಳ್ಳಲು ಮೈಸೂರು ಮಹಾನಗರ ಪಾಲಿಕೆಯು ಸದಾ ಪ್ರೋತ್ಸಾಹ ನೀಡಲಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಇಂಡಿಯಾ ಸಿಸ್ಟರ್ ಸಿಟಿ ಅಸೋಸಿಯೇಷನ್ ಅಧ್ಯಕ್ಷೆ ರತೀ ಅಪ್ಪಣ್ಣ ಅವರೊಂದಿಗೆ 'ಅಮೇರಿಕಾದ ಸಿನ್ಸಿನ್ನಾಟಿ ನಗರದ ಸಿಸ್ಟರ್ ಕನ್ಸರ್ನ್ ನಗರದ ಯೋಜನೆ ಕುರಿತಂತೆ ಸಭೆ ನಡೆಸಿ ಚರ್ಚಿಸಿದ ಅವರು, ಈ ಹಿಂದೆ ಇಲ್ಲಿನ ಕಲೆ, ಸಂಸ್ಕೃತಿ, ಕ್ರೀಡೆ, ಪರಂಪರೆ ವಿನಿಮಯ ಸಂಬಂಧ ಐಎಸ್‌ಸಿಎಯೊಂದಿಗೆ ಮೈಸೂರು ಮಹಾನಗರ ಪಾಲಿಕೆ ಮಾಡಿಕೊಂಡಿರುವ ಒಡಂಬಡಿಕೆ (MOU)ಯಂತೆ ಈಗಲೂ ಪ್ರೋತ್ಸಾಹ ನೀಡಲಾಗುವುದು ಎಂದರು.

ಎರಡೂ ದೇಶಗಳ ನಡುವಿನ ಬಾಂಧವ್ಯ ಬೆಸೆಯುವ ಮೂಲಕ ಸೌಹಾರ್ದತೆ ಸದೃಢಗೊಳಿಸಲು ಇಂಡಿಯಾ ಸಿಸ್ಟರ್ ಸಿಟಿ ಅಸೋಸಿಯೇಷನ್ ಆಫ್ ಗ್ರೇಟರ್ ಸಿನ್ಸಿನ್ನಾಟಿ ಸಂಸ್ಥೆ ಸೇತುವೆಯಾಗಿದ್ದು, ಈ ಯೋಜನೆಯನ್ನು ಪಾಲಿಕೆಯು ಮುಂದುವರಿಸಲಿದೆ ಎಂದು ಮೇಯರ್ ತಿಳಿಸಿದರು.

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಉಪ ಮೇಯರ್ ಡಾ. ರೂಪಾ, ಕಾರ್ಪೊರೇಟರ್ ಅಶ್ವಿನಿ ಅನಂತು, ಉಪ ಆಯುಕ್ತರಾದ ಎಂ.ಕೆ. ಸವಿತಾ, ಹಿರಿಯ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜು, ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಇಂದು ಬೆಂಗಳೂರಿಗೆ ಮಲ್ಲಿಕಾರ್ಜುನ ಖರ್ಗೆ



ಬೆಂಗಳೂರು, ನ. 5: ಎಐಸಿಸಿ ಅಧ್ಯಕ್ಷರಾದ ನಂತರ ಇದೇ ಮೊದಲ ಬಾರಿಗೆ ನಾಳೆ (ನ. 6) ಮಲ್ಲಿಕಾರ್ಜುನ ಖರ್ಗೆ ಬೆಂಗಳೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕೆಪಿಸಿಸಿ ವತಿಯಿಂದ ಅರಮನೆ ಮೈದಾನದಲ್ಲಿ ಸರ್ವೋದಯ ಸಮಾವೇಶ ಆಯೋಜನೆ ಮಾಡಲಾಗಿದೆ. ನಾಳೆ ಬೆಳಗ್ಗೆ 10.55ಕ್ಕೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಖರ್ಗೆ ಆಗಮಿಸಲಿದ್ದು, ವಿಮಾನ ನಿಲ್ದಾಣದಲ್ಲಿ ಅದ್ಧೂರಿ ಸ್ವಾಗತಕ್ಕೆ ಕಾಂಗ್ರೆಸ್ ನಾಯಕರು ಸಿದ್ಧತೆ ಮಾಡಿಕೊಂಡಿದ್ದಾರೆ. ಕೆಂಪೇಗೌಡ ಏರ್‌ಪೋರ್ಟ್ ರಸ್ತೆಯ ಟೋಲ್‌ಗೇಟ್, ಹೆಬ್ಬಾಳ, ಮೇಖ್ರಿ ಸರ್ಕಲ್ ಬಳಿ ಕಾಂಗ್ರೆಸ್ ನಾಯಕರು ಸ್ವಾಗತ ಕೋರಲಿದ್ದಾರೆ. ನಾಳೆ ಮಧ್ಯಾಹ್ನ 2.30ಕ್ಕೆ ಅರಮನೆ ಮೈದಾನದಲ್ಲಿ ಸಮಾವೇಶ ನಡೆಯಲಿದ್ದು, 50 ಸಾವಿರ ಜನರು ಭಾಗಿಯಾಗುವ ನಿರೀಕ್ಷೆಯಿದೆ.

ಸಾರ್ವಜನಿಕ ಗಮನಕ್ಕಾಗಿ

ನನ್ನ ಕಕ್ಷಿದಾರರಾದ, ರವರ ಇರ್ರಾದೆಯ ಮೇರೆಗೆ, ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ವೀರಭದ್ರಸ್ವಾಮಿ ರವರ ಧರ್ಮಪತ್ನಿಯಾದ ಶ್ರೀಮತಿ ಮಂಜುಳ ರವರೊಂದಿಗೆ ಕ್ರಯದ ಕರಾರಿನ ಮೂಲಕ ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯಪತ್ರ ಬರೆದುಕೊಡಲು ಸಿದ್ಧರಿದ್ದು, ಈಗಾಗಲೇ ಕೆಲವು ದಾಖಲಾತಿಗಳನ್ನು ನನ್ನ ಕಕ್ಷಿದಾರರಿಗೆ ನೀಡಿದ್ದು, ಹಾಗಾಗಿ ನನ್ನ ಕಕ್ಷಿದಾರರು ನೋಂದಾಯಿತ ಕ್ರಯಪತ್ರ ಪಡೆದುಕೊಳ್ಳಲು ಸಿದ್ಧರಿದ್ದು, ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅಹವಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೇ ಯಾವುದೇ ಅಡಚಣೆ, ತಕರಾರು, ಇಲ್ಲವೆಂದು ಪರಿಗಣಿಸಿ, ಮೇಲ್ಕಂಡ ಮಾಲೀಕರಿಂದ ಕ್ರಮ ಬದ್ಧವಾದ ನೋಂದಣಿ ಕ್ರಯಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು, ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದ (ಹಳೆ ಸರ್ವೆ ನಂ.50/2, ಹೊಸ ಸರ್ವೆ ನಂ.50/5,) ಹಾಲಿ ಸರ್ವೆ ನಂ.50/6 ರಲ್ಲಿ 1.00 ಎಕರೆ ಜಮೀನಿಗೆ ಚೆಕ್ಕುಬಂದಿ:–

ಪೂರ್ವಕ್ಕೆ : ಸರ್ವೆ ನಂ.50/5 ರ ಉಳಿಕೆ ಜಮೀನು, (ಬ್ಲಾಕ್ ನಂ.1), ಪಶ್ಚಿಮಕ್ಕೆ : ರಸ್ತೆ ಮತ್ತು ರೈಲ್ವೆ ಟ್ರಾಕ್, (ಲಾ.ಸ. ನಂ.208 ಮತ್ತು ರೈಲ್ವೆ ರಸ್ತೆ), ಉತ್ತರಕ್ಕೆ: ಸರ್ವೆ ನಂ. 50/1 ರ ಜಮೀನು (ಲಾ.ಹಿ.ನಂ.1), ದಕ್ಷಿಣಕ್ಕೆ : ಸರ್ವೆ ನಂ. 50/4 ರ ಜಮೀನು (ಲಾ ಹಿ ನಂ 4),

ಸಹಿ/– **ಶ್ರೀ ಪಾಲಾಕ್ಷ,** ವಕೀಲರು
ನಂ.645, ಮೊದಲನೇ ಮಹಡಿ, ಸೀತಾವಿಳಾಸ ಛತ್ರ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು.
ಮೊ.: 9448075718

In the Court of the VI Additional Senior Civil Judge at Mysore
Ex. No.273/2021

Decree Holder: Sri Eraiah, S/o Late Hanumaiah, Aged about 69 year, R/at D.No. 2705/1, Hosabeedi, 2nd Cross, 2nd Main, K.G.Koppal, Chamaraja Mohalla, Mysuru City.

V/s

Judgement Debtor : Sri. M.Muddu Srinivasalu, S/o Sri Venkata Nanjaiah, Aged about 55 years, R/at D.No. 108, K.H.B. Colony, 2nd Stage, Kuvepunagara, Chamaraja Mohalla, Mysuru City.

DRAFT PAPER PUBLICATION

The Decree Holder have file the above Execution Petition to get the Execute the Registered Sale Deed in favour of the decree holder in respect of schedule property. In case if the judgement debtors fails to execute the Registered Sale Deed in favour of the decree holder, the Hon'ble Court be pleased to order to execute the Registered Sale Deed in favour of Decree Holder. In respect of the petition schedule property through court commissioner for the pendency of the petition, the decree holder have take steps for the appearance of the J.Dr.'s in some time and the Hon'ble Court issue the notice to the J.Dr. But, J.Dr.'s intentionally avoiding the above said court notice. However, the decree holder have filed an application under order V Rule 20 of C.P.C along with Affidavit. On the basis of above said application and such person may appear before the Hon'ble Court on 17-12-2022 at 11'O clock AM. With documents either in person or through counsel, otherwise the above matter will be disposed of in accordance with law.

SCHEDULE

House property bearing D.No.272. situated at University Extension, Lingambudi, Chamaraja Mohalla, Mysuru City, constructed by Mysore University Employees Housing Building Co-operative Society (Regd), Mysuru, bounded on the : East by: Road, West by : Property No.277, North by : Property No. 271, South by : Property No. 273.

In between which measuring East to West 12.00 meters, and North to South 9.00 meters, consisting of 7.00 square ground - Floor and 7.00 Square first floor R.C.C House with water electricity and sanitary facility.

By order of the Court.

Advocate for Petitioner
Sd/- Sri Shekhar. J, B.A. L.L.B.
Advocate,, KAR No. 624/2017,
No.99, G.B.Saraguru Village, Hampapura Hobli, H.D.Kote Taluk, Mysuru District.

ಇಂದು ಮೈಸೂರಲ್ಲಿ ಟಿಇಟಿ ಪರೀಕ್ಷೆ

38 ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ

ಮೈಸೂರು, ನ. 5(ಆರ್‌ಕೆ)– ಮೈಸೂರಿನ 38 ಪರೀಕ್ಷಾ ಕೇಂದ್ರಗಳಲ್ಲಿ ನಾಳೆ (ನ. 6) ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)ಗಳು ನಡೆಯಲಿವೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿಯಲ್ಲಿ ಭಾನುವಾರ ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ಸಿಆರ್‌ಪಿಸಿ ಕಲಂ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಆದೇಶ ಹೊರಡಿಸಿದ್ದಾರೆ. ಆ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು, ಸಿಬ್ಬಂದಿ ಹೊರತುಪಡಿಸಿ ಬೇರೆಯವರು ಓಡಾಡುವಂತಿಲ್ಲ ಹಾಗೂ ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಬಂದ್ ಮಾಡುವಂತೆಯೂ ಆದೇಶದಲ್ಲಿ ತಿಳಿಸಲಾಗಿದೆ.

ಅರ್ಜಿ ಆಹ್ವಾನ

ಮೈಸೂರು,ನ.5–ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ ನಡೆಸುವ Department of School Education and Litracy 2022–23ನೇ ಸಾಲಿನ ನ್ಯಾಷನಲ್ ಮೀನ್ಸ್ ಕಮ್ ಮೆರಿಟ್ ವಿದ್ಯಾರ್ಥಿವೇತನ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ನ.10ರವರೆಗೆ ಅವಧಿ ವಿಸ್ತರಿಸಲಾಗಿದೆ. 8ನೇ ತರಗತಿ ವಿದ್ಯಾರ್ಥಿಗಳಿಗೆ ಡಿ.18ರಂದು ಪರೀಕ್ಷೆ ನಡೆಸಲಾಗುವುದು.

ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ ವೇಳೆ ಪ್ರಧಾನಿ ಮೋದಿ ಅವರಿಗೆ ಅಭಿನಂದಿಸಲು

ಮೈಸೂರಲ್ಲಿ ಸಿದ್ಧಗೊಂಡಿದೆ ವಿಶಿಷ್ಟ ಪೇಟ!





ಆಕರ್ಷಕ ಪೇಟ ಸಿದ್ಧಪಡಿಸಿದ ಕಲಾವಿದ ನಂದನ್ ಸಿಂಗ್(ಎಡದಿಂದ 2ನೆಯವರು) ಅವರೊಂದಿಗೆ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಸತೀಶ್‌ಗೌಡ, ಉಪಾಧ್ಯಕ್ಷ ಕುಮಾರ್‌ಗೌಡ, ವೇದರಾಜ್, ಚೇತನ್, ಅಭಿಷೇಕ್ ಚಿತ್ರದಲ್ಲಿದ್ದಾರೆ.

ಮೈಸೂರು, ನ.5(ಎಸ್‌ಬಿಡಿ)– ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿರ್ಮಾಣವಾಗಿರುವ ನಾಡಪ್ರಭು ಕೆಂಪೇಗೌಡರ ಬೃಹತ್ ಪ್ರತಿಮೆ ಅನಾವರಣಕ್ಕೆ ಆಗಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಲು ಮೈಸೂರಿನಲ್ಲಿ ಅತ್ಯಾಕರ್ಷಕವಾದ ಪೇಟ ಸಿದ್ಧವಾಗಿದೆ.

ಮೈಸೂರಿನ 'ನಮ್ಮೂರು ನಮ್ಮೋರು' ಸಮಾಜ ಸೇವಾ ಟ್ರಸ್ಟ್ ಹಾಗೂ ನಾಡಪ್ರಭು ಕೆಂಪೇಗೌಡರ ಬಳಗ ಮನವಿ ಹಾಗೂ ಪ್ರತಿಮೆ ಲೋಕಾರ್ಪಣೆ ಉಸ್ತುವಾರಿ ಹೊಂದಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ್ ಅವರ ಸಲಹೆಯಂತೆ ವಿದ್ಯಾರಣ್ಯಪುರಂ ನಿವಾಸಿ, ಕಲಾವಿದ ನಂದನ್ ಸಿಂಗ್ ಕೆಂಪೇಗೌಡರ ನೂತನ ಪ್ರತಿಮೆಯಲ್ಲಿರುವ ಮಾದರಿಯಲ್ಲೇ ಸುಂದರವಾದ ಪೇಟ ಸಿದ್ಧಪಡಿಸಿದ್ದಾರೆ.

ಕೆಂಪು ಬಣ್ಣದ ಬನಾರಸ್ ಬಟ್ಟೆಯಿಂದ ಪೇಟ ಸಿದ್ಧಪಡಿಸಲಾಗಿದ್ದು, ಮುಂಭಾಗದಲ್ಲಿರುವ ರಾಷ್ಟ್ರೀಯ ಪಕ್ಷಿ ನವಿಲು ಮಾದರಿ ಚಿನ್ನದ ವರ್ಣದ ಡಾಲರ್ ಪೇಟದ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಈ ಡಾಲರ್ ಮೇಲಿರುವ ಶ್ವೇತವರ್ಣದ ಗರಿ(ಪುಕ್ಕ), ಇಕ್ಕೆಲಗಳಲ್ಲಿರುವ ಮಣಿಹಾರ ಕಣ್ಮನ ಸೆಳೆಯುತ್ತವೆ. ಅಲ್ಲದೆ ಪೇಟದಲ್ಲಿ ವಿವಿಧ ರೀತಿಯ ಆಕರ್ಷಕ ಡಾಲರ್‌ಗಳನ್ನು ಅಳವಡಿಸಲಾಗಿದೆ. ಒಟ್ಟಾರೆ ಪ್ರಧಾನಿ ಅವರಿಗಾಗಿಯೇ ವಿಶೇಷವಾಗಿ 10 ದಿನಗಳಲ್ಲಿ ಸಿದ್ಧಪಡಿಸಿರುವ ಮೈಸೂರು ಪರಂಪರೆಯ ಪೇಟ ಅತ್ಯಂತ ಅದ್ಧೂರಿಯಾಗಿದೆ.

ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕಲಾವಿದ ನಂದನ್ ಸಿಂಗ್, ಕೆಂಪೇಗೌಡರ 108 ಅಡಿ ಬೃಹತ್ ಪ್ರತಿಮೆ ನಿರ್ಮಿಸಿರುವ ಪ್ರಸಿದ್ಧ ಕಲಾವಿದರಾದ ರಾಮ್ ವಿ.ಸುತಾರ್ ಅವರು ವಿನ್ಯಾಸಗೊಳಿಸಿರುವ ಪೇಟದ ಮಾದರಿಯಲ್ಲೇ ಇದನ್ನೂ ಸಿದ್ಧಪಡಿಸಲಾಗಿದೆ. 11 ದಿನಗಳ ಹಿಂದೆ ಮೈಸೂರಿನ ಸತೀಶ್‌ಗೌಡರು ಸ್ನೇಹಿತರೊಂದಿಗೆ ಬಂದು ಕೆಂಪೇಗೌಡರ ಪ್ರತಿಮೆಯಲ್ಲಿರುವ ಪೇಟದ ಮಾದರಿಯಲ್ಲೇ ಮೋದಿ ಅವರಿಗೂ ಪೇಟ ಮಾಡಿಕೊಡುವಂತೆ ಕೇಳಿದರು. ನಂತರ ಸಚಿವರಾದ ಡಾ. ಸಿ.ಎನ್.ಅಶ್ವತ್ಥ ನಾರಾಯಣ ಅವರೂ ಕರೆ ಮಾಡಿ, ಅತ್ಯಾಕರ್ಷಕವಾಗಿ ಪೇಟ ಸಿದ್ಧಪಡಿಸಬೇಕೆಂದು ತಿಳಿಸಿದರು. ಅದರಂತೆಯೇ ಬನಾರಸ್ ಬಟ್ಟೆಯಲ್ಲಿ ಪೇಟ ಸಿದ್ಧಪಡಿಸಿದ್ದು, ಇದಕ್ಕೆ 10 ದಿನಗಳ ಕಾಲ ಬೇಕಾಯಿತು. ಪತ್ನಿ ಹಾಗೂ ಮಕ್ಕಳೂ ನನ್ನ ಕೆಲಸಕ್ಕೆ ಸಹಾಯ ಮಾಡಿದ್ದಾರೆ. ಪ್ರಧಾನಿ ಮೋದಿ ಅವರು ಮೈಸೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಧರಿಸುತ್ತಿದ್ದ ಮಾದರಿಯ ಪೇಟ ಸಿದ್ಧಪಡಿಸಿದ್ದೆ. ಆದರೆ ಅವರಿಗೆ ನೀಡಲು ಸಾಧ್ಯವಾಗಿರಲಿಲ್ಲ ಎಂದು ತಿಳಿಸಿದರು.

ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಸತೀಶ್ ಗೌಡ ಮಾತನಾಡಿ, ನ.11ರಂದು ಕೆಂಪೇಗೌಡರ ಬೃಹತ್ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸಲು ಆಗಮಿಸುತ್ತಿರುವ ಪ್ರಧಾನಿ ಮೋದಿ ಅವರಿಗೆ ವಿಶೇಷ ಉಡುಗೊರೆ ನೀಡಬೇಕೆಂಬ ಉದ್ದೇಶದಿಂದ ಸ್ನೇಹಿತರೊಡಗೂಡಿ ಕಲಾವಿದ ನಂದನ್ ಅವರನ್ನು ಭೇಟಿ ಮಾಡಿ, ಕೆಂಪೇಗೌಡರ ಪ್ರತಿಮೆಯಲ್ಲಿರುವ ಮಾದರಿಯಲ್ಲೇ ಪೇಟ ಸಿದ್ಧಪಡಿಸಿಕೊಡುವಂತೆ ಕೇಳಿದೆವು. ಈ ಬಗ್ಗೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸಚಿವ ಅಶ್ವತ್ಥ ನಾರಾಯಣ ಅವರನ್ನು ಸಂಪರ್ಕಿಸಿ ಅವರ ಅನುಮತಿಯೊಂದಿಗೆ ಪೇಟ ಸಿದ್ಧಪಡಿಸುವಂತೆ ತಿಳಿಸಿದೆವು.

ಸದ್ಯ ಅತ್ಯಾಕರ್ಷಕವಾದ ಪೇಟ ಸಿದ್ಧವಾಗಿದ್ದು, ಇನ್ನೆರಡು ದಿನಗಳಲ್ಲಿ ಬೆಂಗಳೂರಿಗೆ ತಲುಪಿಸಲಿದ್ದೇವೆ. ವೇದಿಕೆಯಲ್ಲಿ ಮೋದಿ ಅವರನ್ನು ಅಭಿನಂದಿಸುವ ಸಂದರ್ಭದಲ್ಲಿ ಇದೇ ಪೇಟವನ್ನು ಧರಿಸಬೇಕೆಂಬ ಆಶಯ ವ್ಯಕ್ತಪಡಿಸಿದರು.



ಕೊಡವರಿಗೆ ಎಸ್‌ಟಿ ಟ್ಯಾಗ್, ರಕ್ಷಣೆ ಬೇಕು

ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗಕ್ಕೆ ಸಿಎನ್‌ಸಿ ಮನವಿ

ಮಡಿಕೇರಿ, ನ.5– ಕೊಡವ ಬುಡಕಟ್ಟು ಜನಾಂಗದ ಬಗ್ಗೆ ನಿಷ್ಪಕ್ಷಪಾತ ಜನಾಂಗೀಯ ಅಧ್ಯಯನ ನಡೆಸಬೇಕು ಮತ್ತು ಎಸ್‌ಟಿ ಟ್ಯಾಗ್ ನೀಡಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗಕ್ಕೆ ಮನವಿ ಸಲ್ಲಿಸಿದೆ.

ದೆಹಲಿಯಲ್ಲಿ ಆಯೋಗದ ಅಧ್ಯಕ್ಷರನ್ನು ಭೇಟಿಯಾದ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ನೇತೃತ್ವದ ನಿಯೋಗ ಕೊಡವರಿಗೆ ಎಸ್.ಟಿ ಟ್ಯಾಗ್ ಮತ್ತು ಕೊಡವಲ್ಯಾಂಡ್ ಜಿಯೋ–ರಾಜಕೀಯ–ಸ್ವಾಯತ್ತತೆಯ ಮೂಲಕ ಸೂಕ್ತ ರಕ್ಷಣೆ ನೀಡಬೇಕು, ಇಲ್ಲದಿದ್ದಲ್ಲಿ ಕೊಡವ ಬುಡಕಟ್ಟು ಅಸ್ತಿತ್ವ ಅಳಿದುಹೋಗಬಹುದು ಎಂದು ಆತಂಕ ವ್ಯಕ್ತಪಡಿಸಿತು.

ಕೇಂದ್ರ ಸರ್ಕಾರವು ಅಸ್ಸಾಂನ 6 ಜನಾಂಗಗಳನ್ನು ಬುಡಕಟ್ಟುಗಳೆಂದು ಗುರುತಿಸಲು ಮತ್ತು ಈಶಾನ್ಯದ 10 ಪ್ರದೇಶಗಳಿಗೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಲು ಸಂವಿಧಾನ ತಿದ್ದುಪಡಿಗೆ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಇದೇ ಮಾದರಿಯಲ್ಲಿ ಕೊಡವ ಬುಡಕಟ್ಟು ಸಮುದಾಯ ಕೂಡ ಸಂವಿಧಾನದ ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಭಾರತದಲ್ಲಿ ಸುರಕ್ಷಿತವಾಗಿರುತ್ತವೆ ಎಂಬ ನಿರ್ಣಾಯಕ ಭಾವನೆಯನ್ನು ಸರ್ಕಾರ ಕೊಡವರಲ್ಲಿ ಮೂಡಿಸಬೇಕು ಎಂದು ನಾಚಪ್ಪ ಮನವಿ ಮಾಡಿದರು.

ಸೂಕ್ಷ್ಮ ಅಲ್ಪಸಂಖ್ಯಾತ ದುರ್ಬಲ ಕೊಡವ ಬುಡಕಟ್ಟು ಜನಾಂಗವನ್ನು ಸಂರಕ್ಷಿಸಲು ಇದು ಸಕಾಲವಾಗಿದೆ. ಕೊಡವ ಬುಡಕಟ್ಟು ಜನರು ಈ ಹಿಂದೆ ಕೂರ್ಗ್‌ನ ಸುಮಾರು ಮೂರನೇ ಒಂದು ಭಾಗವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದು, ಕರ್ನಾಟಕವು ಜನಸಂಖ್ಯಾ ಶಾಸ್ತ್ರವನ್ನು ವಿಸ್ತರಿಸುವ ಹಕ್ಕನ್ನು ಪಡೆದು ಕೊಡಗಿನ ನಂತರ ಬಹುತೇಕ ಎಲ್ಲವನ್ನೂ ಕಳೆದುಕೊಂಡಿದ್ದಾರೆ ಮತ್ತು ಕೊಡವರು ಅಸುರಕ್ಷಿತರಾಗಿದ್ದಾರೆ ಎಂದು ಗಮನ ಸೆಳೆದರು.

ರಾಜ್ಯ ಸರ್ಕಾರ ನಡೆಸುತ್ತಿರುವ ಕೊಡವ ಬುಡಕಟ್ಟು ಜನಾಂಗದ ಜನಾಂಗೀಯ ಅಧ್ಯಯನವು ಪ್ರಮುಖ ಸಮುದಾಯಗಳ ಶಾಖೆಗಳಿಂದ ವ್ಯವಸ್ಥಿತವಾಗಿ ಸ್ಥಗಿತಗೊಂಡಿದೆ ಎಂದು ಆರೋಪಿಸಿದ ಅವರು, ಸಮಗ್ರ ಮತ್ತು ನಿಖರವಾದ ಸಮೀಕ್ಷೆಯೊಂದಿಗೆ ಕೊಡವ ಬುಡಕಟ್ಟು ಜನಾಂಗದ ಅಧ್ಯಯನವಾಗುವಂತೆ ನೋಡಿಕೊಳ್ಳಬೇಕು, ಇದಕ್ಕಾಗಿ ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗ ಮಧ್ಯ ಪ್ರವೇಶ ಮಾಡಬೇಕೆಂದು. ನಿವೃತ್ತ ಲೆಕ್ ಜಿಎಂ ಪಾರ್ವತಿ, ಮುಚ್ಚಂಡ ಸಿಂಧು, ಕಾಳಿಮಾಡ ಅಶ್ವಿ, ಕರ್ತಂಡ ತೇಜ್, ಕಲಿಯಂಡ ಪ್ರಕಾಶ್, ಜಮ್ಮಡ ಮೋಹನ್, ವಕೀಲ ಪಾಲಚಂಡ ಬಿಪಿನ್ ಕಾಳಪ್ಪ, ಮದ್ರೀರ ಕರುಂಬಯ್ಯ, ಕರ್ತಂಡ ದಿಲನ್ ತಮ್ಮಯ್ಯ, ಮಾಚೆಟ್ಟಿರ ನವೀನ್ ಮತ್ತಿತರರು ನಿಯೋಗದಲ್ಲಿದ್ದರು.

ಕೊಡವ ಕೌಟುಂಬಿಕ ರಿಂಕ್ ಹಾಕಿ ನಮ್ಮೆ ಪಂದ್ಯಾವಳಿ

ಇಂದು ಮಧ್ಯಾಹ್ನ ಕಪ್‌ಗಾಗಿ ಹಣಾಹಣಿ



ಗೋಣಿಕೊಪ್ಪ, ನ.5– ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯ ಟರ್ಫ್ ಮೈದಾನದಲ್ಲಿ ಕೊಡವ ಹಾಕಿ ಅಕಾಡೆಮಿ ವತಿಯಿಂದ ನಡೆಯುತ್ತಿರುವ ಪಾಂಡಂಡ ಎಂ.ಕುಟ್ಟಪ್ಪ ಜ್ಞಾಪಕಾರ್ಥದ ಕೊಡವ ಕೌಟುಂಬಿಕ ರಿಂಕ್ ಹಾಕಿ ನಮ್ಮೆ ಪಂದ್ಯದಲ್ಲಿ ಪರದಂಡ–ಚೇಂದಂಡ, ಕುಪ್ಪಂಡ–ನೆಲ್ಲಮಕ್ಕಡ ತಂಡಗಳು ಸೆಮಿ ಫೈನಲ್‌ಗೆ ಲಗ್ಗೆ ಇಟ್ಟಿವೆ.

ಭಾನುವಾರ ಮಧ್ಯಾಹ್ನ 2.30 ಗಂಟೆಗೆ ಅಂತಿಮ ಹಣಾಹಣಿ ನಡೆಯಲಿದ್ದು, ಯಾವ ತಂಡಕ್ಕೆ ಕಪ್ ದೊರೆಯಲಿದೆ ಎಂಬ ಕುತೂಹಲ ಗರಿಗೆದರಿದೆ.

ಸೆಮೀಸ್‌ಗೆ: ಶನಿವಾರದ ಕ್ವಾರ್ಟರ್ ಫೈನಲ್‌ನಲ್ಲಿ ಪರದಂಡ–ಚೇಂದಂಡ, ಕುಪ್ಪಂಡ (ಕುಪ್ಪಂಡ)– ನೆಲ್ಲಮಕ್ಕಡ ತಂಡಗಳು ಗೆದ್ದು ಬೀಗಿದವು. ಪರದಂಡವು ಮಂಡೇಪಂಡ ವಿರುದ್ಧ 9–8 ಗೋಲುಗಳ ಗೆಲುವು ದಕ್ಕಿಸಿಕೊಂಡಿತು. ಪರದಂಡ ಪ್ರಸಾದ್, ಅಯ್ಯಪ್ಪ, ಕೀರ್ತಿ, ಪ್ರಜ್ವಲ್ ತಲಾ 2, ಚಶ್ವಿನ್ 1, ಮಂಡೇಪಂಡ ಗೌತಂ 3, ಮೊಣ್ಣಯ್ಯ, ಸಜನ್ 2, ಕ್ರಿಷನ್ 1 ಗೋಲು ಹೊಡೆದರು. ಚೇಂದಂಡಕ್ಕೆ ಚೆಪ್ಪುಡೀರ ವಿರುದ್ಧ 3–1 ಗೋಲುಗಳ ಜಯ ದೊರೆಯಿತು. ಚೇಂದಂಡ ಉತ್ತಪ್ಪ 3 ಗೋಲು, ಚೆಪ್ಪುಡೀರ ಚಿಣ್ಣಪ್ಪ 1 ಗೋಲು ಬಾರಿಸಿದರು. ಕುಪ್ಪಂಡಕ್ಕೆ (ಕೈಕೇರಿ) ಚೇನಂಡ ವಿರುದ್ಧ 6–4 ಗೋಲುಗಳ ಜಯ ದೊರೆಯಿತು. ಕುಪ್ಪಂಡ ಸೋಮಯ್ಯ 5 ಗೋಲು, ನಾಚಪ್ಪ 1, ಚೇನಂಡ ಮಂದಣ್ಣ, ಸೋಮಯ್ಯ ತಲಾ 2 ಗೋಲು ಬಾರಿಸಿದರು. ನೆಲ್ಲಮಕ್ಕಡವು ಕಲಿಯಂಡ ವಿರುದ್ಧ 8–0 ಗೋಲುಗಳ ಸುಲಭ ಜಯ ಪಡೆದುಕೊಂಡಿತು. ನೆಲ್ಲಮಕ್ಕಡ ಪೂವಣ್ಣ 3, ಸೋಮಯ್ಯ 2, ಸಚಿನ್, ಅಯ್ಯಪ್ಪ, ಚೆಂಗಪ್ಪ ತಲಾ ಒಂದೊಂದು ಗೋಲು ಹೊಡೆದರು.

ಪ್ರೀ ಕ್ವಾರ್ಟರ್ ಫಲಿತಾಂಶ: ಕಲಿಯಂಡಕ್ಕೆ ಸೋಮೆಯಂಡ ವಿರುದ್ಧ 5–4 ಗೋಲುಗಳ ಸಮಾಧಾನಕರ ಗೆಲುವು ದಕ್ಕಿತು. ಕಲಿಯಂಡ ಭರತ್ 3, ಕಿರಣ್, ಕಾರ್ಯಪ್ಪ ತಲಾ 1, ಸೋಮೆಯಂಡ ಅಪ್ಪಚ್ಚು 3, ಅಪ್ಪಯ್ಯ 1 ಗೋಲು ಹೊಡೆದು ಹೋರಾಟ ನಡೆಸಿದರು.

ನೆಲ್ಲಮಕ್ಕಡವು ಕಡೇಮಡವನ್ನು 6–1 ಗೋಲುಗಳಿಂದ ಸೋಲಿಸಿತು. ನೆಲ್ಲಮಕ್ಕಡ ಸಚಿನ್, ಸೋಮಯ್ಯ ತಲಾ 2, ಪೂವಣ್ಣ, ಅಪ್ಪಣ್ಣ, ಕಡೇಮಡ ಚರ್ಮಣ ಒಂದೊಂದು ಗೋಲುಗಳಿಂದ ನೆರವಾದರು.

ಪರದಂಡವು ಮಾತಂಡವನ್ನು 6–4 ಗೋಲುಗಳ ಅಂತರದಲ್ಲಿ ಮಣಿಸಿತು. ಪರದಂಡ ಅಯ್ಯಪ್ಪ 5 ಗೋಲು, ಪ್ರಜ್ವಲ್ 1, ಮಾತಂಡ ಗಣಪತಿ 2, ಸುಬ್ಬಯ್ಯ, ಆರ್ಯನ್ ತಲಾ ಒಂದೊಂದು ಗೋಲು ದಾಖಲಿಸಿದರು.

ಮಂಡೇಪಂಡಕ್ಕೆ ಮಚ್ಚಂಡ ವಿರುದ್ಧ 5–3 ಗೋಲುಗಳ ಜಯ ಲಭಿಸಿತು. ಮಂಡೇಪಂಡ ಕ್ರಿಪನ್ 3, ಸಜನ್, ಗೌತಂ, ಮಚ್ಚಂಡ ಕರುಂಬಯ್ಯ, ಪ್ರಿನ್ಸ್ ತಲಾ ಒಂದೊಂದು ಗೋಲುಗಳ ಕಾಣಿಕೆ ನೀಡಿದರು.

ಚೆಪ್ಪುಡೀರವು ಕುಲ್ಲೇಟಿರವನ್ನು 4–2 ಗೋಲುಗಳಿಂದ ಸೋಲಿಸಿತು. ಚೆಪ್ಪುಡೀರ ಸೋಮಣ್ಣ 2, ಕಾರ್ಯಪ್ಪ, ಚಿಣ್ಣಪ್ಪ, ಕುಲ್ಲೇಟಿರ ನಾಚಪ್ಪ, ಶುಭಮ್ ತಲಾ 1 ಗೋಲು ಹೊಡೆದರು.

ಕುಪ್ಪಂಡ (ಕೈಕೇರಿ) ತಂಡವು ಚೆಕ್ಕೇರವನ್ನು 8–6 ಗೋಲುಗಳ ಅಂತರದಲ್ಲಿ ಮಣಿಸಿತು. ಕುಪ್ಪಂಡ ಸೋಮಯ್ಯ 6, ನಾಚಪ್ಪ, ಪ್ರಧಾನ್ ತಲಾ 1, ಚೆಕ್ಕೇರ ಆದರ್ಶ 3, ಆರ್ಕ್ 2, ಸೋಮಯ್ಯ 1 ಗೋಲು ಹೊಡೆದರು.

ಚೇನಂಡಕ್ಕೆ ಮಾರ್ಚಂಡ ವಿರುದ್ಧ 3–2 ಗೋಲುಗಳ ಗೆಲುವು ಲಭಿಸಿತು. ಚೇನಂಡ ಸೋಮಯ್ಯ 2, ಮಂದಣ್ಣ, ಮಾರ್ಚಂಡ ಸುಬ್ರಮಣಿ, ನಾಚಪ್ಪ ತಲಾ ಒಂದು ಗೋಲು ಬಾರಿಸಿ ಮಿಂಚಿದರು.

ಚೇಂದಂಡಕ್ಕೆ ಪೆಮ್ಮಂಡ ವಿರುದ್ಧ 3–1 ಗೋಲುಗಳ ಜಯ ದೊರೆಯಿತು. ಚೇಂದಂಡ ಬೋಪಣ್ಣ, ಉತ್ತಪ್ಪ ಅಮೋಘ್, ಪೆಮ್ಮಂಡ ಸುಹಾಸ್ ತಲಾ ಒಂದೊಂದು ಗೋಲು ಸಾಧನೆ ಮಾಡಿದರು. ಅಂಪೈರ್ ತೀರ್ಪಿನ ವಿರುದ್ಧ ಅಸಮಾಧಾನ ವ್ಯಕ್ತವಾಯಿತು

ಸಿಸ್ಟೋಬಾಲ್ ಕ್ರೀಡೆಯಲ್ಲಿ ಭಾರತ ತಂಡದಲ್ಲಿ ಸ್ಥಾನ ಪಡೆದ ಕೊಡಗಿನ ನಂದಿನಿ



ಗುಡ್ಡೆಹೊಸೂರು, ನ.5– ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಸಿಸ್ಟೋಬಾಲ್ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ತೋರಿದ ತಂಡದ ಆಟಗಾರ್ತಿ ನಂಜರಾಯಪಟ್ಟಣದ ನಿವಾಸಿ ವಾಸು ಮತ್ತು ಪುಷ್ಪಾವತಿ ದಂಪತಿ ಪುತ್ರಿ ನಂದಿನಿ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಇವರು ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ನಂಜರಾಯಪಟ್ಟಣದ ಸರಕಾರಿ ಶಾಲೆಯಲ್ಲಿ ಮುಗಿಸಿದ್ದು, ಪಿಯು ವಿದ್ಯಾಭ್ಯಾಸವನ್ನು ಕುಶಾಲನಗರ ವಿವೇಕಾನಂದ ಕಾಲೇಜಿನಲ್ಲಿ ಮಾಡಿದ್ದಾರೆ. ನಂತರ ಕುಶಾಲನಗರ ಎಂಜಿಎಂ ಕಾಲೇಜಿನಲ್ಲಿ ಡಿಗ್ರಿ ಪಡೆದು ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬಿಪಿಎಡ್ ಮುಗಿಸಿದ್ದಾರೆ.

ಡಿಸೆಂಬರ್ 1 ರಿಂದ 5 ರವರೆಗೆ ಥೈಲ್ಯಾಂಡ್‌ನಲ್ಲಿ ನಡೆಯುವ ಪಂದ್ಯಾವಳಿಯಲ್ಲಿ ನಂದಿನಿ ಭಾರತ ಸೀನಿಯರ್ ತಂಡದಲ್ಲಿ ಸ್ಥಾನ ಪಡೆದು ಆಟವನ್ನು ಮುನ್ನಡೆಸಲಿದ್ದಾರೆ. ನಂದಿನಿ ಈ ವರೆಗೆ ಒಟ್ಟು 4 ಬಾರಿ ರಾಜ್ಯ ತಂಡವನ್ನೂ ಪ್ರತಿನಿಧಿಸಿದ್ದರು.

ತೊರೆನೂರು ಗ್ರಾಮದಲ್ಲಿ ಬಸ್ ನಿಲುಗಡೆಗೆ ಆಗ್ರಹಿಸಿ ಕೊರವೇ ಪ್ರತಿಭಟನೆ

ಪ್ರತಿಭಟನೆಗೆ ಮಣಿದು ತೊರೆನೂರು ಮಾರ್ಗದಲ್ಲಿ ಬಸ್ ನಿಲುಗಡೆಯ ಭರವಸೆ



ಕುಶಾಲನಗರ/ಮಡಿಕೇರಿ,ನ.5– ಗ್ರಾಮಸ್ಥರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ರಾಜ್ಯ ರಸ್ತೆ ಸಾರಿಗೆ ಬಸ್‌ಗಳನ್ನು ನಿಲುಗಡೆಗೊಳಿಸಬೇಕೆಂದು ಒತ್ತಾಯಿಸಿ ಕಣಿವೆಯಲ್ಲಿ ಕೊಡಗು ರಕ್ಷಣಾ ವೇದಿಕೆ ರಸ್ತೆ ತಡೆ ಪ್ರತಿಭಟನೆ ನಡೆಸಿತು.

ವಿವಿಧ ಘಟಕಗಳ ಸರ್ಕಾರಿ ಬಸ್‌ಗಳು ಖಾಲಿ ಇದ್ದರೂ ತೊರೆನೂರು ಗ್ರಾಮ ವ್ಯಾಪ್ತಿಯಲ್ಲಿ ನಿಲುಗಡೆಗೊಳಿಸದೆ ಸಂಚರಿಸುತ್ತಿವೆ. ಇದರಿಂದ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ಅನಾನುಕೂಲವಾಗುತ್ತಿದೆ ಎಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ವೇದಿಕೆಯ ಅಧ್ಯಕ್ಷ ಸಾಗರ್ ತೊರೆನೂರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಎಲ್ಲಾ ಘಟಕದ ಸಾರಿಗೆ ಬಸ್‌ಗಳನ್ನು ತೊರೆನೂರಿನಲ್ಲಿ ನಿಲ್ಲಿಸಬೇಕು, ಬಸ್ ಪಾಸ್ ವಿತರಿಸುವ ಸಂದರ್ಭ ಶಿರಂಗಾಲ ಅಥವಾ ಹೆಬ್ಬಾಲೆ ಎಂದು ಸೂಚಿಸಬೇಕು, ಸ್ಟೇಜ್ ಪಾಯಿಂಟ್ ಆಗಿ ಶೀಘ್ರದಲ್ಲೇ ಘೋಷಿಸಬೇಕು, ಬಸ್ ನಿಲ್ದಾಣದ ಎರಡು ಕಡೆ ಕೋರಿಕೆ ನಿಲುಗಡೆ ಎಂಬ ಸೂಚನಾ ಫಲಕವನ್ನು ಸಾರಿಗೆ ಇಲಾಖೆ ಅಳವಡಿಸಬೇಕು, ಬೆಳಗ್ಗೆ ಮತ್ತು ಸಂಜೆ ರಾಮನಾಥಪುರ ಘಟಕ ಅಥವಾ ಮಡಿಕೇರಿ ಘಟಕದ ಸಾಮಾನ್ಯ ಸಾರಿಗೆ ಬಸ್ಸುಗಳ ಓಡಾಟಕ್ಕೆ ಅವಕಾಶ ಕಲ್ಪಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಕೊಡಗು ರಕ್ಷಣಾ ವೇದಿಕೆ ಕಣಿವೆ ಘಟಕದ ಅಧ್ಯಕ್ಷ ಗಜೇಂದ್ರ ಮಾತನಾಡಿ, ಕಣಿವೆ ಗ್ರಾಮದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕೂಡ ಇದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕುಶಾಲನಗರದಿಂದ ಕೊಣನೂರಿಗೆ ಸಾಮಾನ್ಯ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿ ಮಾಡಿದರು.

ಗ್ರಾಪಂ ಅಧ್ಯಕ್ಷರಾದ ರೂಪಾ ಮಹೇಶ್, ಸದಸ್ಯರಾದ ಶಿವಕುಮಾರ್ ಕೆ.ಬಿ, ದೇವರಾಜ್, ಸಾವಿತ್ರಿ, ಊರಿನ ಹಿರಿಯರಾದ ನರೇಂದ್ರನಾಥ್, ಪ್ರಕಾಶ್ ಟಿ.ಟಿ, ಕೃಷ್ಣೇಗೌಡ, ಕೊರವೇ ಹೆಬ್ಬಾಲೆ ಘಟಕದ ಅಧ್ಯಕ್ಷ ಚಂದು ಪಟೇಲ್, ಶಿರಂಗಾಲ ಘಟಕದ ಅಧ್ಯಕ್ಷ ಮಂಜುನಾಥ್ ಶೆಟ್ಟಿ, ತೊರೆನೂರು ಗ್ರಾಮಸ್ಥರು, ವಿದ್ಯಾರ್ಥಿಗಳು ಹಾಗೂ ಕೊರವೇ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹೆಬ್ಬಾಲೆ ಸಂಚಾರ ನಿಯಂತ್ರಕ ಪುಟ್ಟನಾಯಕರು ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು. ಮುಂದಿನ 8 ದಿನಗಳೊಳಗೆ ಸಮಸ್ಯೆ ಬಗೆಹರಿಯದಿದ್ದರೆ ಡಿಪೋಗೆ ಮುತ್ತಿಗೆ ಹಾಕಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು. ಕುಶಾಲನಗರ ಗ್ರಾಮಾಂತರ ಠಾಣೆಯ ಉಪನಿರೀಕ್ಷಕ ಚಂದ್ರಶೇಖರ್ ಹಾಗೂ ಸಿಬ್ಬಂದಿಗಳು ಸ್ಥಳದಲ್ಲಿದ್ದರು.

ಪ್ರತಿಭಟನೆಯ ವಿಷಯ ತಿಳಿದು ತಕ್ಷಣ ಸ್ಪಂದಿಸಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಡಿಕೇರಿ ಘಟಕದ ವ್ಯವಸ್ಥಾಪಕರು ಬೆಳಗ್ಗೆ 8 ಗಂಟೆಯಿಂದ 9.30ರವರೆಗೆ ತೊರೆನೂರು, ಹುಲುಸೆ, ಕಣಿವೆ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳ ನಿಲುಗಡೆಗೆ ಸೂಚಿಸಿರುವುದಾಗಿ ಪತ್ರದ ಮೂಲಕ ಭರವಸೆ ನೀಡಿದರು.

ಅರಸೀಕೆರೆ ಮತ್ತು ಚನ್ನರಾಯಪಟ್ಟಣ ಘಟಕದ ವ್ಯವಸ್ಥಾಪಕರು ಹಾಗೂ ಹೆಬ್ಬಾಲೆ ಮತ್ತು ಕುಶಾಲನಗರ ಬಸ್ ನಿಲ್ದಾಣದ ಸಂಚಾರ ನಿಯಂತ್ರಕರಿಗೆ ದೂರವಾಣಿ ಕರೆ ಮಾಡಿ ಬಸ್‌ಗಳ ನಿಲುಗಡೆಗೆ ಅವಕಾಶ ನೀಡುವಂತೆ ತಿಳಿಸಲಾಗಿದೆ ಎಂದರು.

ಆನೆಗಳ ಹಿಂಡು ದಾಳಿ: ಗೆಣಸಿನ ಬೆಳೆ ನಾಶ



ಗುಡ್ಡೆಹೊಸೂರು, ನ.5– ಆನೆಗಳ ಗುಂಪೊಂದು ಗೆಣಸಿನ ತೋಟಕ್ಕೆ ನುಗ್ಗಿ ಗೆಣಸಿನ ಬೆಳೆಯನ್ನು ತಿಂದು ನಾಶ ಮಾಡಿರುವ ಘಟನೆ ಇಲ್ಲಿಗೆ ಸಮೀಪದ ಅತ್ತೂರು ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ಎನ್.ಎಂ.ಲೋಕೇಶ್ ಕುಮಾರ್ ಅವರು ಸುಮಾರು 2.30 ಎಕರೆ ಪ್ರದೇಶದಲ್ಲಿ ಸಿಹಿಗೆಣಸು ಬೆಳೆದಿದ್ದು, ಅದು ಮಾರಾಟ ಮಾಡುವ ಹಂತಕ್ಕೆ ಬಂದಿತ್ತು. ಕಳೆದ ರಾತ್ರಿ ಎರಡು ಮರಿಯೊಂದಿಗೆ 8 ಆನೆಗಳ ಗುಂಪೊಂದು ಗೆಣಸಿನ ತೋಟಕ್ಕೆ ನುಗ್ಗಿ ಸುಮಾರು 50 ಸಾವಿರ ರೂ.ಗಳಷ್ಟು ಬೆಳೆ ತಿಂದು ತುಳಿದು ನಾಶ ಮಾಡಿದೆ.

ವಿಷಯ ತಿಳಿದ ಅರಣ್ಯ ಇಲಾಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಇತ್ತೀಚಿನ ದಿನಗಳಲ್ಲಿ ಗುಡ್ಡೆಹೊಸೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಆನೆಗಳ ಹಾವಳಿ ಅಧಿಕವಾಗಿದ್ದು, ಕಾಫಿ, ಭತ್ತ, ಬಾಳೆ, ಅಡಿಕೆ, ಶುಂಠಿ ಮುಂತಾದ ಬೆಳೆಗಳು ಆನೆ ದಾಳಿಯಿಂದ ನಾಶವಾಗುತ್ತಿದೆ ಎಂದು ಈ ಭಾಗದ ರೈತರು ದೂರಿದ್ದಾರೆ.

ಬಿ.ವೈ.ವಿಜಯೇಂದ್ರ, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಹುಟ್ಟುಹಬ್ಬ ಹಿನ್ನೆಲೆ; ಚಾ.ನಗರದಲ್ಲಿ ಆರೋಗ್ಯ ಶಿಬಿರ



2 ಸಾವಿರಕ್ಕೂ ಹೆಚ್ಚು ಮಂದಿಗೆ ತಪಾಸಣೆ

ಚಾಮರಾಜನಗರ, ನ.5–ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಮಾಜಿ ವಿಧಾನಪರಿಷತ್ ಸದಸ್ಯ ಪ್ರೊ.ಕೆಆರ್.ಮಲ್ಲಿಕಾರ್ಜುನಪ್ಪ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ನಗರದಲ್ಲಿಂದು ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣೆ ಯಶಸ್ವಿಯಾಗಿಯಿತು. 2 ಸಾವಿರಕ್ಕೂ ಹೆಚ್ಚು ಜನರು ಶಿಬಿರದ ಸದುಪಯೋಗ ಪಡೆದರು.

ನಗರದ ಶ್ರೀ ಸಿದ್ದಬಸವರಾಜಸ್ವಾಮಿಗಳ ಸಾನ್ನಿಧ್ಯದಲ್ಲಿ ಬೆಳಗ್ಗೆ 9 ಗಂಟೆಗೆ ಆರಂಭವಾದ ಆರೋಗ್ಯ ಶಿಬಿರಕ್ಕೆ ಹರವೆ ಮಠದ ಸರ್ಪಭೂಷಣ ಸ್ವಾಮೀಜಿ, ನಗರ ಮಠದ ಚನ್ನಬಸವ ಸ್ವಾಮೀಜಿ, ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಚಾಲನೆ ನೀಡಿದರು.

ಶಿಬಿರದಲ್ಲಿ ಜೆಎಸ್‌ಎಸ್ ಆಸ್ಪತ್ರೆ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಆಸ್ಪತ್ರೆ, ಜಿಲ್ಲಾಸ್ಪತ್ರೆ ಸಹಯೋಗದಲ್ಲಿ ಕಣ್ಣಿನ ತಪಾಸಣೆ, ಸಾಮಾನ್ಯ ಚಿಕಿತ್ಸೆ, ಪ್ರಸೂತಿ ಚಿಕಿತ್ಸೆ, ದಂತ ಚಿಕಿತ್ಸೆ, ಹೃದಯ ಸಂಬಂಧಿ ಕಾಯಿಲೆ, ಕಿವಿ ಮತ್ತು ಮೂಗು ಗಂಟಲು ಚಿಕಿತ್ಸೆಗಳ ಸಂಬಂಧ ಪ್ರತ್ಯೇಕ ವಿಭಾಗಗಳಲ್ಲಿ ತಪಾಸಣೆ ನಡೆಸಲಾಯಿತು. ಶಿಬಿರದಲ್ಲಿ 2 ಸಾವಿರಕ್ಕೂ ಹೆಚ್ಚು ಮಂದಿಗೆ ರಕ್ತದೊತ್ತಡ, ಮಧುಮೇಹ ಪರೀಕ್ಷೆ ಮಾಡಲಾಯಿತು. ಇಸಿಜಿ ವ್ಯವಸ್ಥೆ ಸಹ ಮಾಡಲಾಗಿತ್ತು. ಬೆಂಗಳೂರಿನಿಂದ ಆಗಮಿಸಿದ್ದ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ಸಂಚಾರಿ ವಾಹನದಲ್ಲಿ ಮಹಿಳೆಯರಿಗೆ ಕ್ಯಾನ್ಸರ್ ಗುಣಲಕ್ಷಣ ಪರೀಕ್ಷಿಸಲಾಯಿತು.

ಇದಕ್ಕೂ ಮುನ್ನಾ ನಡೆದ ಶಿಬಿರದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಪುಸ್ತಕ ಅಕಾಡೆಮಿ ಅಧ್ಯಕ್ಷ ನಂದೀಶ್ ಹಂಚೆ ಮಾತನಾಡಿ, ರಾಜ್ಯ ಯುವ ನೇತಾರ ಬಿ.ವೈ.ವಿಜಯೇಂದ್ರ ರಾಜ್ಯದ ಕಣ್ಮಣಿ ಹಾಗೂ ಭರವಸೆ ಬೆಳಕಾಗಿದ್ದಾರೆ. ಅದೇ ರೀತಿಯಲ್ಲಿ ಮಾಜಿ ವಿಧಾನಪರಿಷತ್ ಸದಸ್ಯ ಪ್ರೊ.ಮಲ್ಲಿಕಾರ್ಜುನಪ್ಪ ಪ್ರಬುದ್ಧ ರಾಜಕಾರಣಿ. ಇವರಿಬ್ಬರ ಹುಟ್ಟುಹಬ್ಬದ ಪ್ರಯುಕ್ತ ಯುವ ಮುಖಂಡ, ಕೆಆರ್‌ಐಡಿಎಲ್ ಅಧ್ಯಕ್ಷ ರುದ್ರೇಶ್ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದಾರೆ. ಕೋವಿಡ್ ಸಂದರ್ಭದಲ್ಲಿಯೂ ರಾಜ್ಯಾದ್ಯಂತ ಜನ ಸಾಮಾನ್ಯರಿಗೆ ಅನುಕೂಲ ಕಲ್ಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಆರ್‌ಐಡಿಎಲ್ ಅಧ್ಯಕ್ಷ ರುದ್ರೇಶ್ ಹಾಗೂ ಅಭಿಮಾನಿಗಳು ನಗರದ ಶ್ರೀ ಮಾರಮ್ಮ ದೇವಸ್ಥಾನ, ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನಗಳಿಗೆ ತೆರಳಿ, ವಿಜಯೇಂದ್ರ ಹಾಗೂ ಕೆಆರ್‌ಎಂ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಪೌರಕಾರ್ಮಿಕರಿಗೆ ಬಟ್ಟೆ, ಶಾಲೆ ಮಕ್ಕಳಿಗೆ ಬ್ಯಾಗ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ವೀರಶೈವ–ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ, ಕನಕಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗನ್ನಾಥ್, ಕರುನಾಡು ವಿಜಯಸೇನೆ ಅಧ್ಯಕ್ಷ ದೀಪಕ್, ಬಿಜೆಪಿ ಮುಖಂಡರಾದ ಬಂಗಾರಸ್ವಾಮಿ, ಕೂಡ್ಲೂರು ಶ್ರೀಧರಮೂರ್ತಿ, ಆಲೂರು ಮಲ್ಲು, ಯ.ನಾಗರಾಜು, ಡಾ.ಪರಮೇಶ್ವರಪ್ಪ, ಹೊಸೂರು ನಟೇಶ್, ಮುತ್ತಿಗೆ ಮೂರ್ತಿ, ಪಣ್ಯದಹುಂಡಿ ರಾಜು, ಕೆಸ್ತೂರು ಬಸವಣ್ಣ, ನಲ್ಲೂರು ಶಿವರುದ್ರಸ್ವಾಮಿ, ಗುರುಪ್ರಸಾದ್, ವಿಜಯೇಂದ್ರ ಹಾಗೂ ಕೆಆರ್‌ಎಂ ಅಭಿಮಾನಿಗಳ ಬಳಗದವರಿದ್ದರು.

ನಾನೂ ಬಿಜೆಪಿ ಟಿಕೆಟ್ ಆಕಾಂಕ್ಷಿ

ಚಾಮರಾಜನಗರ: ನಾನೂ ಸಹ ಚಾಮರಾಜನಗರ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂದು ಕೆಆರ್‌ಡಿಎಲ್ ಅಧ್ಯಕ್ಷ ಎಂ.ರುದ್ರೇಶ್ ಮೊದಲ ಬಾರಿಗೆ ಬಹಿರಂಗಗೊಳಿಸಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾ.ನಗರ ಕ್ಷೇತ್ರದಿಂದ ತಾವೂ ಬಿಜೆಪಿ ಟಿಕೆಟ್ ಆಕಾಂಕ್ಷಿನಾ ಎಂಬ ಪ್ರಶ್ನೆಗೆ ಉತ್ತರಿಸಿದರು. ಯಾವ ವ್ಯಕ್ತಿಗೆ ಆಕಾಂಕ್ಷಿಗಳು ಇರುವುದಿಲ್ಲ. ಎಲ್ಲಾ ರಂಗದಲ್ಲೂ ಎಲ್ಲರೂ ಆಕಾಂಕ್ಷಿಗಳಾಗಿರುತ್ತಾರೆ ಎಂದು ಹೇಳುವ ಮೂಲಕ ತಾವೂ ಸಹ ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿರುವುದಾಗಿ ಬಹಿರಂಗಗೊಳಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನನಗೆ ನಿಗಮ ಅಧ್ಯಕ್ಷ ಸ್ಥಾನ ನೀಡಿದ್ದಾರೆ. ನಾನು ರಾಜ್ಯಾದ್ಯಂತ ಸುತ್ತಾಡುತ್ತಿದ್ದೇನೆ. ಜಿಲ್ಲೆಯಲ್ಲೂ ಹೆಚ್ಚು ಸುತ್ತುತ್ತಿರುವುದು ನಿಜ. ನಗರದಲ್ಲಿ ಆಕ್ಸಿಜನ್ ದುರಂತ ಸಂಭವಿಸಿದಾಗ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ಆಕ್ಸಿಜನ್ ಪ್ಲಾಂಟ್ ಅನ್ನು ನಿಗಮದಿಂದ ಸ್ಥಾಪಿಸಲಾಯಿತು. ಹಿಂದುಳಿದ ಗಡಿ ಜಿಲ್ಲೆಗೆ ಮಂಡಳಿಯಿಂದ ಅನುಕೂಲಗಳನ್ನು ಕಲ್ಪಿಸುವಂತೆ ಯಡಿಯೂರಪ್ಪ ಸೂಚನೆ ಮೇರೆಗೆ ಜಿಲ್ಲೆ ಬಗ್ಗೆ ವಿಶೇಷ ಕಾಳಜಿ ವಹಿಸಿರುವುದಾಗಿ ತಿಳಿಸಿದರು.

ತೆರಕಣಾಂಬಿ ವಸತಿ ಶಾಲೆಗೆ ಶಾಸಕ ಭೇಟಿ



ಗುಂಡ್ಲುಪೇಟೆ, ನ.5–ತಾಲೂಕಿನ ತೆರಕಣಾಂಬಿ ಗ್ರಾಮದ ಸಮೀಪದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶಾಸಕ ಸಿ.ಎಸ್.ನಿರಂಜನಕುಮಾರ್ ಭೇಟಿ ನೀಡಿ, ಪರಿಶೀಲಿದರು.

ಈ ಶಾಲೆಯಲ್ಲಿ ದುಸ್ಥಿತಿಯಲ್ಲಿದ್ದ ಶೌಚಾಲಯ, ಸ್ನಾನದ ಕೊಠಡಿಗಳು ಹಾಗೂ ಮಳೆ ನೀರು ಸೋರಿಕೆಯಿಂದ ಶಿಥಿಲವಾಗಿರುವ ಕಟ್ಟಡ ಮೇಲ್ಛಾವಣಿ, ಗೋಡೆಗಳನ್ನು ಪರಿಶೀಲಿಸಿದ ಶಾಸಕರು, ತುರ್ತಾಗಿ ದುರಸ್ತಿಪಡಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ರಾಜ್ಯ ವಸತಿ ಶಿಕ್ಷಣ ಸಂಸ್ಥೆ ಅಧಿಕಾರಿಗಳಿಗೆ ಕರೆ ಮಾಡಿ ಕೂಡಲೇ ಶೌಚಾಲಯ ಹಾಗೂ ಸ್ನಾನಗೃಹಗಳ ದುರಸ್ತಿಗೆ ಕ್ರಮಕೈಗೊಳ್ಳಿ, ಅಗತ್ಯ ಅನುದಾನ ಬಿಡುಗಡೆ ಮಾಡಲಾಗುತ್ತದೆ ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಮುಖಂಡ ಸಿ.ಮಹದೇವಪ್ರಸಾದ್, ಗ್ರಾಪಂ ಅಧ್ಯಕ್ಷೆ ರಾಜಮ್ಮ, ಸದಸ್ಯರಾದ ಗೋವಿಂದು, ಪಾಪಣ್ಣಿ, ಶಶಿ ಸೇರಿದಂತೆ ಹಲವರಿದ್ದರು.

ಅಗರ ಗ್ರಾಮದಲ್ಲಿ ಆರೋಗ್ಯ ಶಿಬಿರ ಯಶಸ್ವಿ

ಯಳಂದೂರು, ನ.5–ಮೈಸೂರಿನ ಮಾ ಫೌಂಡೇಷನ್, ರಕ್ಷಾ ಆಸ್ಪತ್ರೆ ಹಾಗೂ ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಮಾಜಿ ಶಾಸಕ ದಿ.ಕೆ.ಪಿ. ಶಾಂತಮೂರ್ತಿ ಅವರ 19ನೇ ವರ್ಷದ ಪುಣ್ಯಸ್ಮರಣೆಯ ನಿಮಿತ್ತ ತಾಲೂಕಿನ ಅಗರ ಗ್ರಾಮದ ನಾಯಕ ವಾಲ್ಮೀಕಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿಯಾಯಿತು. ನ.2ರಿಂದ ಆರಂಭಗೊಂಡ ಈ ಶಿಬಿರವು ಮೂರು ದಿನಗಳ ಕಾಲ ನಡೆಯಿತು. 400ಕ್ಕೂ ಹೆಚ್ಚು ಮಂದಿ ಇದರ ಉಪಯೋಗವನ್ನು ಪಡೆದುಕೊಂಡರು.

ಸ್ತ್ರೀ ರೋಗ ತಜ್ಞರಾದ ಡಾ.ರಕ್ಷಾ ಮಂಜುನಾಥ್, ಡಾ.ಎಂ.ಎಸ್.ದೀಪಕ್, ನರ ಶಾಸ್ತ್ರಜ್ಞರಾದ ಡಾ.ಎಂ.ಎಸ್. ಶಶಾಂಕ್, ನೇತ್ರ ತಜ್ಞೆ ಡಾ.ಸಹನಶ್ರೀ ತಪಾಸಣೆ ನಡೆಸಿದರು. ಈ ವೇಳೆ ಮಾ ಫೌಂಡೇಷನ್‌ನ ಉಪಾಧ್ಯಕ್ಷ ಪಿ.ಅಭಿಷೇಕ್ ಮಾತನಾಡಿದರು. ಫೌಂಡೇಷನ್ ಅಧ್ಯಕ್ಷೆ ಡಿ.ಅನಿತಾ, ಕಾರ್ಯದರ್ಶಿ ಎಸ್.ರೂಪಾ, ಆರ್.ಚಂದ್ರಕಾಂತ್, ಎಸ್.ವಿ.ರವಿಕುಮಾರ್, ಕಾವ್ಯಾ ಅರುಣ್, ಶಶಾಂಕ್ ಮುಖಂಡರಾದ ಕಿನಕಹಳ್ಳಿ ಪ್ರಭುಪ್ರಸಾದ್, ರಾಜಮ್ಮ ಕುಮಾರ್ ಹಲವರಿದ್ದರು.

ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ನೌಕರರ ಸಂಘದ ವಾರ್ಷಿಕೋತ್ಸವ

ಹನೂರು, ನ.5–ಶ್ರೀ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ನೌಕರರ ಸೇವೆ ಅನನ್ಯ ಮತ್ತು ಅನುಪಮವಾದದ್ದು ಎಂದು ಸಾಲೂರು ಬೃಹನ್ಮಠ ಪೀಠಾಧ್ಯಕ್ಷ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮಲೆ ಮಹದೇಶ್ವರಬೆಟ್ಟದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದ 3ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದ ಅವರು, ಶಿಕ್ಷಣ ಮತ್ತು ಸಂಘಟನೆ ಪ್ರಸ್ತುತ ದಿನದಲ್ಲಿ ಅತ್ಯವಶ್ಯಕ. ಮಹದೇಶ್ವರರ ಆಗಮನದಿಂದ ಕತ್ತಲ ರಾಜ್ಯ ಬೆಳಕಿನಡೆಗೆ ಸಾಗಿದೆ. ಮುಂದಿನ ದಿನಗಳಲ್ಲೂ ಕೂಡ ಇದೇ ರೀತಿಯ ಸೇವೆ ನಿಮ್ಮಿಂದ ಭಕ್ತಾದಿಗಳಿಗೆ ದೊರೆಯಲಿ ಎಂದು ಆಶಿಸಿದರು.

ಜಿಲ್ಲಾಧಿಕಾರಿ ರಮೇಶ್, ಪ್ರಾಧಿಕಾರದ ಕಾರ್ಯದರ್ಶಿಯೂ ಆದ ಎಡಿಸಿ ಆದ ಕಾತ್ಯಾಯಿನಿದೇವಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗಳಿಸಿದ ಶಿಕ್ಷಕರಿಗೆ ಸನ್ಮಾನ, ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳು ನಿವೃತ್ತಿ ಹೊಂದಿದವರು ಸೇರಿದಂತೆ ವಿವಿಧ ಕ್ಷೇತ್ರದ ಗಣರನ್ನು ಸನ್ಮಾನಿಸಲಾಯಿತು. ಸಾಲೂರು ಬೃಹನ್ಮಠ ಮಠಾಧ್ಯಕ್ಷ ಶ್ರೀ ಪಟ್ಟದ ಶಾಂತ ಮಲ್ಲಿಕಾರ್ಜುನಸ್ವಾಮಿ ಸಾನ್ನಿಧ್ಯ ವಹಿಸಿದ್ದರು. ಪ್ರಾಧಿಕಾರದ ನೌಕರರ ಸಂಘದ ಅಧ್ಯಕ್ಷ ಬಿ.ಮಹದೇವಪ್ರಸಾದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಆನಂದಯ್ಯ, ಮಲೆಮಹದೇಶ್ವರ ಬೆಟ್ಟ ಗ್ರಾಪಂ ಅಧ್ಯಕ್ಷ ಕುಮಾರ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಕಾರ್ಯದರ್ಶಿ ಕಿರಣ್‌ರಾಜ್, ಬೇಡಗಂಪಣ ಸಂಘದ ಗೌರವಾಧ್ಯಕ್ಷ ಪುಟ್ಟಣ್ಣ, ಪ್ರಾಧಿಕಾರ ನೌಕರರ ಸಂಘದ ಕಾನೂನು ಸಲಹೆಗಾರ ಪ್ರಮೋದ್, ಗೌರವಾಧ್ಯಕ್ಷ ಕೆ.ಮಹದೇವಸ್ವಾಮಿ, ಅಧ್ಯಕ್ಷ ಬಿ.ಮಹದೇವಪ್ರಸಾದ್ ಇತರರಿದ್ದರು.

ಗಾಂಜಾ ಸಂಗ್ರಹಿಸಿದ್ದವನ ಬಂಧನ

ಚಾಮರಾಜನಗರ, ನ.5–ಅಕ್ರಮವಾಗಿ ಗಾಂಜಾ ಸಂಗ್ರಹಿಸಿದ್ದ ವ್ಯಕ್ತಿಯೋರ್ವನನ್ನು ಬಂಧಿಸಿರುವ ಅಬಕಾರಿ ಇಲಾಖೆ ಅಧಿಕಾರಿಗಳು, 6.ಕೆಜಿ 145 ಗ್ರಾಂ ಗಾಂಜಾ ವಶಕ್ಕೆ ಪಡೆದಿದ್ದಾರೆ.

ತಾಲೂಕಿನ ಜ್ಯೋತಿಗೌಡನಪುರ ಗ್ರಾಪಂ ವ್ಯಾಪ್ತಿಯ ಕುಂಟಗುಡಿ ಕಾಲೋನಿಯ ಹನುಮೇಗೌಡ ಬಂಧಿತ ಆರೋಪಿ. ಖಚಿತ ಮಾಹಿತಿ ಮೇರೆಗೆ ಆತನ ಮನೆ, ಜಮೀನಿನಲ್ಲಿ ದಾಳಿ ನಡೆಸಿದ ಅಬಕಾರಿ ಇಲಾಖೆ ಅಧಿಕಾರಿಗಳು 5 ಗಾಂಜಾ ಗಿಡಗಳು ಹಾಗೂ 415 ಗ್ರಾಂ ಒಣ ಗಾಂಜಾ, 20 ಗಾಂಜಾ ಸಸಿಗಳು ಹಾಗೂ ಬಿತ್ತನೆಗಾಗಿ ಸಂಗ್ರಹಿಸಿದ್ದ 39 ಗ್ರಾಂ. ಗಾಂಜಾ ಬೀಜಗಳೂ ಸೇರಿ 6 ಕೆಜಿ 145 ಗ್ರಾಂ ಗಾಂಜಾ ವಶಕ್ಕೆ ಪಡೆದಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಅಧಿಕಾರಿಗಳು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಚಾಮರಾಜನಗರ ಅಬಕಾರಿ ಉಪ ಆಯುಕ್ತ ನಾಗಶಯನ ನಿರ್ದೇಶನದ ಮೇರೆಗೆ ಅಬಕಾರಿ ಉಪ ಅಧೀಕ್ಷಕ ಮೋಹನ್ ಕುಮಾರ್ ನೇತೃತ್ವದಲ್ಲಿ ಅಬಕಾರಿ ಇನ್ಸ್‌ಪೆಕ್ಟರ್ ಮೀನಾ, ಸಿಬ್ಬಂದಿ ರಾಜೇಶ್, ಮಂಜು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಆಮೆಗತಿಯಲ್ಲಿ ಸೇತುವೆ ಕಾಮಗಾರಿ

ವಾಹನ ಸವಾರರ ಪರದಾಟ



ಬೇಗೂರು,ನ.5–ಗುಂಡ್ಲುಪೇಟೆ ತಾಲೂಕಿನ ಬೇಗೂರು–ನಂಜನಗೂಡು ತಾಲೂಕಿನ ಹೆಡಿಯಾಲಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ(86)ಯ ಕೋಟೆಕೆರೆ ಗೇಟ್ ಬಳಿ ನಡೆಯುತ್ತಿರುವ ಸೇತುವೆ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದ್ದು, ಜನ–ವಾಹನ ಸವಾರರು ಪರದಾಡುವಂತಾಗಿದೆ.

ಗುಂಡ್ಲುಪೇಟೆ ತಾಲೂಕಿನ ಬೇಗೂರು ಮೂಲಕ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ–766ರಿಂದ ಹೆಡಿಯಾಲ ರಸ್ತೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ರಾಜ್ಯ ಹೆದ್ದಾರಿ–86ರ ಕೋಟೆಕೆರೆ ಗೇಟ್ ಬಳಿ ಸೇತುವೆ ಕುಸಿದಿತ್ತು. ಹೀಗಾಗಿ ಲೋಕೋಪಯೋಗಿ ಇಲಾಖೆಯಿಂದ ಸೇತುವೆ ನಿರ್ಮಾಣ ಕಾಮಗಾರಿ ಆರಂಭಿಸಿ ತಿಂಗಳಾಗುತ್ತಿದ್ದರೂ ಇನ್ನೂ ಪೂರ್ಣಗೊಂಡಿಲ್ಲ.

ಬದಲಿ ಮಾರ್ಗದಲ್ಲಿ ವಾಹನಗಳು ಸಂಚರಿಸುವಂತೆ ಲೋಕೋಪಯೋಗಿ ಇಲಾಖೆ ತಿಳಿಸಿದ್ದು, ಹೊರೆಯಾಲ, ಯಡವನಹಳ್ಳಿ ಮಾರ್ಗ ಹಾಗೂ ಬೇಗೂರು ಕೋಟೆಕೆರೆ ಮಾರ್ಗವಾಗಿ ವಾಹನಗಳು ಹೆಡಿಯಾಲ ರಸ್ತೆ ಸಂಪರ್ಕಿಸುವಂತೆ ತಿಳಿಸಲಾಗಿದೆ.

ಗ್ರಾಮಸ್ಥರ ವಿರೋಧ: ಬೇಗೂರು ಸುತ್ತಮುತ್ತ ಕಲ್ಲು ಕೋರೆಗಳು ಇರುವುದರಿಂದ 40 ಟನ್‌ಗೂ ಹೆಚ್ಚು ತೂಕದ ಲಾರಿಗಳು ಬದಲಿ ಮಾರ್ಗದಲ್ಲಿ ಸಂಚರಿಸಿದರೆ ಸೇತುವೆ ಕಾಮಗಾರಿ ಪೂರ್ಣಗೊಳ್ಳುವುದರೊಳಗೆ ಗ್ರಾಮಗಳ ರಸ್ತೆ ಹಾಳಾಗುತ್ತವೆ ಎಂಬ ಕಾರಣಕ್ಕೆ ಭಾರೀ ವಾಹನಗಳ ಸಂಚಾರಕ್ಕೆ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ತಾತ್ಕಾಲಿಕ ರಸ್ತೆ ನಿರ್ಮಾಣಕ್ಕೆ ಆಗ್ರಹ: ಸೇತುವೆ ಕಾಮಗಾರಿ ಅವೈಜ್ಞಾನಿಕವಾಗಿದ್ದು, ರಾಜ್ಯ ಹೆದ್ದಾರಿಯಾಗಿರುವ ಈ ಮಾರ್ಗದಲ್ಲಿ ಹೆಡಿಯಾಲ ಕೋಟೆ ಸೇರಿದಂತೆ ನಿತ್ಯ ಕೇರಳಕ್ಕೆ ಸಾಕಷ್ಟು ವಾಹನಗಳು ಸಂಚರಿಸುತ್ತವೆ. ಬದಲಿ ಮಾರ್ಗದಿಂದ ವಾಹನ ಸವಾರರು ಹಳ್ಳಿಗಳ ಚಿಕ್ಕರಸ್ತೆಗಳಲ್ಲಿ ಊರೂರು ಸುತ್ತಿಕೊಂಡು ಮತ್ತೆ ಈ ರಸ್ತೆಯನ್ನೇ ಸೇರಬೇಕಾಗಿದೆ. ಆಗಾಗಿ ಸೇತುವೆ ನಿರ್ಮಾಣ ಜಾಗದ ಸಮೀಪದಲ್ಲೇ ತಾತ್ಕಾಲಿಕವಾಗಿ ರಸ್ತೆ ನಿರ್ಮಿಸಿ ವಾಹನ ಸಂಚಾರಕ್ಕೆ ಅನೂಕೂಲ ಕಲ್ಪಿಸಬೇಕು ಎಂಬುದು ಗ್ರಾಮಸ್ಥರು, ವಾಹನ ಸವಾರರ ಆಗ್ರಹವಾಗಿದೆ.

> ಯಾವುದೇ ರಸ್ತೆ ಕಾಮಗಾರಿಯಾದರೂ ಮೊದಲು ಕಾಮಗಾರಿ ನಡೆಯುವ ಪಕ್ಕದಲ್ಲೇ ಬದಲಿ ರಸ್ತೆ ನಿರ್ಮಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಆದರೆ ಲೋಕೋಪಯೋಗಿ ಇಲಾಖೆಯವರು ಸೂಚಿಸಿರುವ ಹೊರೆಯಾಲ ಯಡವನಹಳ್ಳಿ ಮಾರ್ಗ ಸುಮಾರು 8 ಕಿ.ಮೀ. ದೂರ ಕಿರಿದಾದ ರಸ್ತೆಯಾಗಿದ್ದು, ಸಂಚಾರ ದುಸ್ತರವಾಗಿದೆ. ಎದುರಿನಿಂದ ವಾಹನಗಳು ಬಂದರೆ ಸಂಚರಿಸುವುದು ಕಷ್ಟ. ಸೇತುವೆ ಪಕ್ಕದಲ್ಲೇ ತಾತ್ಕಾಲಿಕ ರಸ್ತೆ ನಿರ್ಮಿಸಬೇಕು.
>
> **–ಕೆಂಪಣ್ಣ, ರೈತ ಮುಖಂಡ.**

> ಮಳೆ ಕಾರಣದಿಂದ ಸೇತುವೆ ನಿರ್ಮಾಣ ಕಾಮಗಾರಿ ವಿಳಂಬವಾಗುತ್ತಿದೆ. ಕೆಲ ದಿನಗಳಲ್ಲೇ ಸೇತುವೆ ಕಾಮಗಾರಿ ಪೂರ್ಣಗೊಳಿಸಲಾಗುವುದು. ಅಲ್ಲಿಯವರೆಗೆ ಗ್ರಾಮಸ್ಥರು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆದ ನಂತರವೇ ವಾಹನಗಳ ಸಂಚಾರಕ್ಕೆ ಬದಲಿ ಮಾರ್ಗ ಸೂಚಿಸಲಾಗಿದೆ.
>
> **–ರಾಮಚಂದ್ರ, ಗುಂಡ್ಲುಪೇಟೆ ಪಿಡಬ್ಲ್ಯೂಡಿ ಎಇಇ.**

ಒಂದನೇ ಪುಟದಿಂದ

ಆರ್.ಎನ್.ಕುಲಕರ್ಣಿ ಹತ್ಯೆ

ಮೊದಲಿಗೆ ಗ್ರಹಿಸಿದ ಸಂಚಾರ ಪೊಲೀಸರು, ಮೃತದೇಹ ಬಿದ್ದಿದ್ದ ಸ್ಥಳ ಮತ್ತು ಕಾರಿನ ಸೈಡ್ ಮಿರರ್ ಬಿದ್ದಿದ್ದ ಸ್ಥಳದ ಬಗ್ಗೆ ಅವಲೋಕಿಸಿ, ವೇಗವಾಗಿ ಬಂದ ಕಾರು ನೇರವಾಗಿ ಕುಲಕರ್ಣಿಯವರಿಗೆ ಡಿಕ್ಕಿ ಹೊಡೆದಿಲ್ಲ. ಕಾರು ಬಲದಿಂದ ಎಡಕ್ಕೆ ತಿರುಗಿ ಡಿಕ್ಕಿ ಹೊಡೆದಿರಬಹುದು ಎಂದು ಗ್ರಹಿಸಿದರಲ್ಲದೇ, ಇದೊಂದು ಹತ್ಯೆ ಇರಬಹುದು ಎಂಬ ಸಂಶಯದೊಂದಿಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸಿದ್ದರು.

ಸ್ಥಳ ಪರಿಶೀಲನೆ ವೇಳೆ ಪತ್ತೆಯಾಯ್ತು ಕೊಲೆ ಸಂಚು: ಕುಲಕರ್ಣಿಯವರು ನಿವೃತ್ತ ಐಬಿ ಅಧಿಕಾರಿಯಾಗಿದ್ದರಿಂದ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿ, ಕೂಲಂಕುಷವಾಗಿ ಸ್ಥಳದ ಪರಿಶೀಲನೆ ನಡೆಸಿದರಲ್ಲದೇ, ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ವೀಕ್ಷಿಸಿದರು. ಆಗ ಕುಲಕರ್ಣಿಯವರು ರಸ್ತೆಯ ಎಡ ಅಂಚಿನಲ್ಲಿ ನಡೆದು ಹೋಗುತ್ತಿದ್ದರೆ ಎದುರು ದಿಕ್ಕಿನಿಂದ ವೇಗವಾಗಿ ಬರುವ ನಂಬರ್ ಪ್ಲೇಟ್ ಇಲ್ಲದ ಗ್ರೇ ಕಲರ್ ಕಾರು, ಕುಲಕರ್ಣಿಯವರ ಬಳಿ ಹಠಾತ್ತನೇ ಬಲಕ್ಕೆ ತಿರುಗಿ ಅವರಿಗೆ ಡಿಕ್ಕಿ ಹೊಡೆದ ನಂತರ ಮತ್ತೇ ಎಡಕ್ಕೆ ತಿರುಗಿ ಚಲಿಸಿರುವುದು ಕಂಡುಬಂದಿದೆ. ಈ ದೃಶ್ಯವನ್ನು ಪರಿಶೀಲಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು, ಕಾರು ಚಾಲಕನ ನಿಯಂತ್ರಣ ತಪ್ಪಿ ಆಕಸ್ಮಿಕವಾಗಿ ಬಲಕ್ಕೆ ಚಲಿಸಿ ಕುಲಕರ್ಣಿಯವರಿಗೆ ಡಿಕ್ಕಿ ಹೊಡೆದಿಲ್ಲ. ಉದ್ದೇಶಪೂರ್ವಕವಾಗಿಯೇ ಕಾರಿನ ಚಾಲಕ ಕಾರನ್ನು ಹಠಾತ್ ಬಲಕ್ಕೆ ತಿರುಗಿಸಿ ಕುಲಕರ್ಣಿಯವರಿಗೆ ಡಿಕ್ಕಿ ಹೊಡೆದ ನಂತರ ಮತ್ತೆ ಎಡಕ್ಕೆ ತಿರುಗಿಸಿದ್ದಾನೆ. ಹೀಗಾಗಿ ಇದು ಕೊಲೆಯೇ ಹೊರತು ಅಪಘಾತವಲ್ಲ ಎಂಬ ನಿರ್ಧಾರಕ್ಕೆ ಬಂದು, ಜಯಲಕ್ಷ್ಮೀಪುರಂ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿಕೊಂಡರು.

ನಂಬರ್ ಪ್ಲೇಟ್ ಇಲ್ಲದ ಕಾರಿದು: ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಡಿಕ್ಕಿ ಹೊಡೆದು ಪರಾರಿಯಾಗಿರುವ ಕಾರಿನ ಹಿಂದೆ ಮುಂದೆ ವಾಹನದ ರಿಜಿಸ್ಟ್ರೇಷನ್ ನಂಬರ್ ಪ್ಲೇಟ್ ಇಲ್ಲ ಎಂಬುದು ಗೊತ್ತಾಗಿದೆ. ನಂಬರ್ ಪ್ಲೇಟ್ ಇಲ್ಲದೇ ಇರಲು ಅದೇನು ಹೊಚ್ಚ ಹೊಸ ಕಾರಲ್ಲ. ಹಂತಕರು ಕಾರು ಪತ್ತೆಯಾಗಬಾರದೆಂಬ ಕಾರಣಕ್ಕಾಗಿ ನಂಬರ್ ಪ್ಲೇಟ್ ಅನ್ನು ತೆಗೆದಿದ್ದಾರೆ ಎಂಬ ನಿರ್ಧಾರಕ್ಕೆ ಪೊಲೀಸರು ಬಂದಿದ್ದಾರೆ. ಆದರೆ, ಸ್ಥಳದಲ್ಲಿ ದೊರೆತ ಕಾರಿನ ಸೈಡ್ ಮಿರರ್ ಹಾಗೂ ಸಿಸಿ ಕ್ಯಾಮರಾದಲ್ಲಿ ದಾಖಲಾಗಿರುವ ಕಾರಿನ ಚಿತ್ರಣವನ್ನು ಗಮನಿಸಿದರೆ, ಅದು ಹೋಂಡಾ ಅಥವಾ ಸ್ಕೋಡಾ ಕಂಪನಿಯ ಕಾರು ಇರಬಹುದು ಎಂದು ಶಂಕಿಸಲಾಗಿದೆ. ಈ ಕಾರು ಎಸ್‌ಜೆಸಿಇ ಎದುರಿನ ದ್ವಾರದಿಂದ ಮಾನಸ ಗಂಗೋತ್ರಿ ಕ್ಯಾಂಪಸ್ ಪ್ರವೇಶಿಸಿ, ಬಯೋಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್ ವಿಭಾಗದ ಕಟ್ಟಡದ ಬಳಿ ಕುಲಕರ್ಣಿಯವರಿಗಾಗಿ ಹೊಂಚು ಹಾಕಿ, ಕಾದು ನಿಂತು ಅವರು ಬರುತ್ತಿದ್ದಂತೆಯೇ ಡಿಕ್ಕಿ ಹೊಡೆದು, ಕ್ಯಾಂಪಸ್ ಮುಖ್ಯ ರಸ್ತೆಯಲ್ಲಿ ಕುವೆಂಪು ಪ್ರತಿಮೆ ದ್ವಾರದ ಮೂಲಕ ಬೋಗಾದಿ ರಸ್ತೆಯಲ್ಲಿ ಪರಾರಿಯಾಗಿರಬಹುದೆಂದು ಅಂದಾಜಿಸಲಾಗಿದೆ.

ಕುಲಕರ್ಣಿಯವರ ಚಲನ–ವಲನ ಮಾಹಿತಿ ಸಂಗ್ರಹ: ಕುಲಕರ್ಣಿಯವರನ್ನು ಹತ್ಯೆ ಮಾಡಲು ಹಂತಕರು ಹಲವು ದಿನಗಳಿಂದ ಅವರ ಚಲನವಲನಗಳ ಬಗ್ಗೆ ಮಾಹಿತಿ ಸಂಗ್ರಹಿಸಿರಬಹುದು. ಅವರ ಕಾರನ್ನು ಹಿಂಬಾಲಿಸಿ, ನಿತ್ಯ ಅವರು ಯಾವ ಸಮಯಕ್ಕೆ ಮಾನಸ ಗಂಗೋತ್ರಿಗೆ ವಾಯು ವಿಹಾರಕ್ಕೆ ಬರುತ್ತಾರೆ, ಅವರ ಕಾರು ನಿಲ್ಲಿಸಿಕೊಂಡು, ಚಾಲಕ ಎಲ್ಲಿರುತ್ತಾನೆ. ಕುಲಕರ್ಣಿ ಅವರು ಯಾವ ಯಾವ ರಸ್ತೆಯಲ್ಲಿ ವಾಕಿಂಗ್ ಮಾಡುತ್ತಾರೆ ಎಂಬುದರ ಬಗ್ಗೆ ಎಲ್ಲಾ ಮಾಹಿತಿ ಕಲೆಹಾಕಿಕೊಂಡು ಪೂರ್ವ ಯೋಜನೆಯಂತೆ ಈ ಕೃತ್ಯ ಎಸಗಿದ್ದಾರೆ ಎಂಬುದು ಪೊಲೀಸರಿಗೆ ತಿಳಿದುಬಂದಿದೆ.

ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ನರಸಿಂಹರಾಜ ಉಪವಿಭಾಗದ ಎಸಿಪಿ ಶಿವಶಂಕರ್ ನೇತೃತ್ವದಲ್ಲಿ ಹಂತಕರ ಪತ್ತೆಗಾಗಿ ಮೂರು ವಿಶೇಷ ತಂಡಗಳನ್ನು ರಚಿಸಿದ್ದು, ಸಿಸಿ ಕ್ಯಾಮರಾ ಫುಟೇಜ್ ಹೊರತುಪಡಿಸಿ ಕೃತ್ಯಕ್ಕೆ ಬೇರೆ ಯಾವುದೇ ಪ್ರತ್ಯಕ್ಷ ಸಾಕ್ಷಿ ದೊರೆಯದ ಕಾರಣ, ಈ ತಂಡಗಳು ಶುಕ್ರವಾರ ತಡರಾತ್ರಿಯಿಂದಲೇ ತಾಂತ್ರಿಕತೆಯ ಸಹಕಾರದೊಂದಿಗೆ ತನಿಖೆ ಆರಂಭಿಸಿವೆ. ಕಾರಿನ ಬಲಬದಿಯ ಕನ್ನಡಿ ಮುರಿದು ಬಿದ್ದಿರುವ ಗ್ರೇ ಬಣ್ಣದ ಕಾರಿನ ಚಲನ–ವಲನಗಳ ಮೇಲೆ ನಿಗಾ ಇರಿಸಿದ್ದ ಪೊಲೀಸರ ತಂಡ ಈ ಕಾರಿನ ಬಗ್ಗೆ ನೆರೆ ಜಿಲ್ಲೆಗಳು, ನಗರ ಮತ್ತು ಜಿಲ್ಲೆಯ ಗಡಿಯಲ್ಲಿರುವ ಟೋಲ್‌ಗೇಟ್‌ಗಳು ಹಾಗೂ ನೆರೆ ರಾಜ್ಯಗಳ ಪೊಲೀಸ್ ಕಂಟ್ರೋಲ್ ರೂಂಗಳಿಗೂ ಮಾಹಿತಿ ರವಾನಿಸಿ ಸುಳಿವು ಪತ್ತೆಯಾದಲ್ಲಿ ವಿಷಯ ಮುಟ್ಟಿಸುವಂತೆ ಕೋರಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಲವು ದಿನಗಳಿಂದ ಹೊಂಚು ಹಾಕುತ್ತಿದ್ದ ಹಂತಕರು?: ಕುಲಕರ್ಣಿಯವರನ್ನು ಹತ್ಯೆ ಮಾಡಲು ಹಲವು ದಿನಗಳಿಂದಲೇ ಹಂತಕರು ಹೊಂಚು ಹಾಕಿ ಅವರ ಚಲನವಲನದ ಬಗ್ಗೆ ನಿಗಾ ವಹಿಸಿದ್ದರು ಎಂದು ಹೇಳಲಾಗಿದೆ. ಇದಕ್ಕೆ ಪೂರಕವಾಗಿ "ತಾವು ಹೋಗುವ ಸ್ಥಳಗಳಲ್ಲೆಲ್ಲಾ ಕೆಲವರು ನಮ್ಮನ್ನು ಹಿಂಬಾಲಿಸುತ್ತಿದ್ದಾರೆ" ಎಂದು ಕುಲಕರ್ಣಿ ಅವರ ಪತ್ನಿ ತಮ್ಮ ಆಪ್ತರೊಂದಿಗೆ ಆತಂಕದಿಂದಲೇ ಹೇಳಿಕೊಂಡಿದ್ದರೆಂದು ತಿಳಿದುಬಂದಿದೆ. ಆದರೆ 82 ವರ್ಷದ ವೃದ್ಧರಾದ ಆರ್.ಎನ್. ಕುಲಕರ್ಣಿ ಅವರನ್ನು ಯಾರು, ಯಾವ ಉದ್ದೇಶಕ್ಕೆ ಕಾರು ಹರಿಸಿ ಹತ್ಯೆಗೈದಿದ್ದಾರೆ ಎಂಬುದು ತನಿಖೆಯಿಂದ ತಿಳಿಯಬೇಕಾಗಿದೆ. ಈಗಾಗಲೇ ವಾಹನದ ಮಾದರಿಯನ್ನು ತಿಳಿದುಕೊಂಡಿರುವ ತನಿಖಾ ತಂಡದ ಪೊಲೀಸರು, ಆರ್‌ಟಿಓ ಕಚೇರಿಯಿಂದ ಮಾಹಿತಿ ಪಡೆದು ಟವರ್ ಲೊಕೇಷನ್ ಆಧಾರದಲ್ಲಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಇಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಪ್ರದೀಪ್ ಗುಂಟಿ, ಎನ್.ಆರ್. ಉಪ ವಿಭಾಗದ ಎಸಿಪಿ ಎಂ. ಶಿವಶಂಕರ್, ಸಿಸಿಬಿ ಎಸಿಪಿ ಅಶ್ವಥನಾರಾಯಣ, ಇನ್ಸ್‌ಪೆಕ್ಟರ್ ಶೇಖರ್, ಬೆರಳಚ್ಚು ಮುದ್ರೆ ಘಟಕದ ಅಧಿಕಾರಿಗಳು ಹಾಗೂ ಜಯಲಕ್ಷ್ಮೀಪುರಂ ಠಾಣೆಯ ಪ್ರಭಾರ ಇನ್ಸ್‌ಪೆಕ್ಟರ್ ಮೋಹನ್‌ಕುಮಾರ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಎಲ್ಲಾ ಆಯಾಮಗಳಲ್ಲೂ ತನಿಖೆ ಆರಂಭಿಸಲಾಗಿದ್ದು, ಕೆಲ ವಿವಾದಗಳ ಸಂಬಂಧವೂ ಮಾಹಿತಿ ಕಲೆ ಹಾಕಲಾಗುತ್ತಿದೆ. ಈ ಕುರಿತು ಕುಲಕರ್ಣಿ ಅವರ ಪತ್ನಿ, ಕಾರು ಚಾಲಕನಿಂದಲೂ ಅಗತ್ಯ ಮಾಹಿತಿ ಸಂಗ್ರಹಿಸುತ್ತಿರುವ ಪೊಲೀಸರು, ಕೃತ್ಯದ ರೂವಾರಿ, ಹಿನ್ನೆಲೆ ಪತ್ತೆಗೆ ತೀವ್ರ ಪ್ರಯತ್ನ ಮಾಡುತ್ತಿದ್ದಾರೆ. ಆರ್.ಎನ್. ಕುಲಕರ್ಣಿ ಅವರ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದ ಶೈತ್ಯಾಗಾರದಲ್ಲಿ ಇರಿಸಲಾಗಿದ್ದು, ವಿದೇಶದಲ್ಲಿರುವ ಪುತ್ರ, ಪುತ್ರಿ ಬಂದ ನಂತರ ಸೋಮವಾರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಕಲಿ ದಾಖಲೆ ಸೃಷ್ಟಿಸಿ ವಾರಸುದಾರರಿಲ್ಲದ ಅಬೆಲೆ ಬಾಳುವ ಭೂಮಿ ಕಬಳಿಕೆ ಯತ್ನ

ಟಿ.ನರಸೀಪುರದ ಮಾಜಿ ಶಾಸಕರ ಸೊಸೆ, ಮೊಮ್ಮಕ್ಕಳ ವಿರುದ್ಧ ಕೇಸ್

ಮೈಸೂರು, ನ. 5– ನಕಲಿ ವಂಶವೃಕ್ಷ ಹಾಗೂ ಇತರ ದಾಖಲೆಗಳನ್ನು ಸೃಷ್ಟಿಸಿ, ವಾರಸುದಾರರಿಲ್ಲದ ಕೋಟ್ಯಾಂತರ ರೂ. ಮೌಲ್ಯದ ಜಮೀನು ಕಬಳಿಸಲು ಯತ್ನಿಸಿದ ಆರೋಪದ ಮೇರೆಗೆ ಮಾಜಿ ಶಾಸಕರೊಬ್ಬರ ಸೊಸೆ ಹಾಗೂ ಇಬ್ಬರು ಮೊಮ್ಮಕ್ಕಳ ವಿರುದ್ಧ ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಕೇಸ್ ದಾಖಲಾಗಿದೆ.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ದಿವಂಗತ ಶ್ರೀನಿವಾಸ ಅಯ್ಯಂಗಾರ್, ಸೊಸೆ ಲಲಿತಾ ಜಯಗೋಪಾಲ್, ಮೊಮ್ಮಕ್ಕಳಾದ ಸುಧೀರ್ ಜಯಗೋಪಾಲ್ ಮತ್ತು ಸುಮನ್ ಜಯಗೋಪಾಲ್ ಆರೋಪಕ್ಕೆ ಗುರಿಯಾಗಿರುವವರು. ಇವರು ಲಲಿತಾದ್ರಿಪುರ ಸರ್ವೇ ನಂಬರ್ 206ರಲ್ಲಿ ಕೋಟ್ಯಾಂತರ ರೂ. ಬೆಲೆ ಬಾಳುವ ವಾರಸುದಾರರಿಲ್ಲದ 3 ಎಕರೆ 04 ಗುಂಟೆ ಜಮೀನನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ, ತಮ್ಮ ಹೆಸರಿಗೆ ಮಾಡಿಕೊಳ್ಳಲು ಪ್ರಯತ್ನಿಸಿದ್ದರೆಂದು ಮೈಸೂರು ತಾಲೂಕು ವರುಣಾ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್ ಡಿ.ಎಸ್. ಶಂಕರ್ ಅವರು ನವೆಂಬರ್ 4ರಂದು ಸಂಜೆ 7.30ರಲ್ಲಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ವಿವರ: ನಿವೃತ್ತ ಶಾಸಕ ದಿವಂಗತ ಶ್ರೀನಿವಾಸ ಅಯ್ಯಂಗಾರ್ ಅವರ ಮೊಮ್ಮಗ ಬೆಂಗಳೂರಿನ ರಾಜಾಜಿನಗರ ನಿವಾಸಿ ಸುಧೀರ್ ಜಯಗೋಪಾಲ್ ಅವರು, ಮೈಸೂರು ತಾಲೂಕು ವರುಣಾ ಹೋಬಳಿ ಲಲಿತಾದ್ರಿಪುರ ಗ್ರಾಮದ ಸರ್ವೇ ನಂಬರ್ 206ರಲ್ಲಿ 3 ಎಕರೆ 04 ಗುಂಟೆ ಜಮೀನಿಗೆ ಪೌತಿ ಖಾತೆ ಬದಲಾವಣೆಗಾಗಿ 2021ರ ಏಪ್ರಿಲ್ 26ರಂದು ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ವಾಸ್ತವವಾಗಿ ಈ ಜಮೀನು ಸರ್ಕಾರಿ ಬೀಳು ಜಮೀನಾಗಿದ್ದು, ನಂತರ ಮೇಲುಕೋಟೆಯ ವಜ್ರಂ ಅಯ್ಯಂಗಾರ್ ಎಂಬುವರಿಗೆ ಮಂಜೂರಾಗಿತ್ತು. ಹಾಲಿ ಆರ್‌ಟಿಸಿ ಕೂಡ ಅವರ ಹೆಸರಲ್ಲೇ ಇತ್ತು. ಈ ಜಮೀನಿಗೆ ತಮ್ಮ ಕುಟುಂಬದವರ ಹೆಸರಿನಲ್ಲಿ ಪೌತಿ ಖಾತೆ ವರ್ಗಾವಣೆಗಾಗಿ ಸುಧೀರ್ ಜಯಗೋಪಾಲ್ ಅವರು, ಮರಣ ದೃಢೀಕರಣ ಪತ್ರ, ವಂಶವೃಕ್ಷ ಸೇರಿದಂತೆ ಕೆಲ ದಾಖಲೆಗಳನ್ನು ಅರ್ಜಿ ಜೊತೆ ಸಲ್ಲಿಸಿದ್ದರು.

ಈ ಅರ್ಜಿ ಹಾಗೂ ದಾಖಲೆಗಳನ್ನು ಆಧರಿಸಿ ಭೂಮಿ ಶಾಖೆಯಲ್ಲಿ ಎಂಆರ್‌ಹೆಚ್ 28/20–21ರ ನಡಾವಳಿಯಂತೆ ಕ್ರಮ ಜರುಗಿಸಲಾಗಿತ್ತು. ಈ ಮಧ್ಯೆ ಆರ್‌ಟಿಐ ಕಾರ್ಯಕರ್ತ ಬಿ.ಎನ್. ನಾಗೇಂದ್ರ ಅವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ವಾರಸುದಾರರಿಲ್ಲದ ಜಮೀನು ಕಬಳಿಸಲಾಗಿದೆ ಎಂದು ತಕರಾರು ಅರ್ಜಿ ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಅಪರ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಮೈಸೂರು ತಾಲೂಕು ಹೆಚ್ಚುವರಿ ತಹಸೀಲ್ದಾರ್ ಎನ್. ವಿಶ್ವನಾಥ್ ಅವರು ವಿಚಾರಣೆ ನಡೆಸಿ, ಭೂಮಿ ಶಾಖೆಯಲ್ಲಿನ ಎಂಆರ್‌ಹೆಚ್ 28/20–21ರಲ್ಲಿನ ನಡಾವಳಿಯನ್ನು ರದ್ದುಪಡಿಸಿದ್ದಲ್ಲದೆ ನಕಲಿ ದಾಖಲೆ ಸೃಷ್ಟಿಸಿ, ಜಮೀನಿಗೆ ಅಕ್ರಮವಾಗಿ ಖಾತೆ ಮಾಡಿಸಿಕೊಳ್ಳಲು ಯತ್ನಿಸಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ವರುಣಾ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಸೆಪ್ಟೆಂಬರ್ 7ರಂದು ಆದೇಶ ನೀಡಿದ್ದರು. ಜೊತೆಗೆ ಹೆಚ್ಚುವರಿ ತಹಸೀಲ್ದಾರ್‌ರ ಆದೇಶದಂತೆ ಕ್ರಮ ವಹಿಸುವಂತೆ ಮೈಸೂರು ತಾಲೂಕು ತಹಸೀಲ್ದಾರ್‌ರು ಅಕ್ಟೋಬರ್ 17ರಂದು ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಜ್ಞಾಪನಾ ಪತ್ರ ರವಾನಿಸಿದ್ದರು. ಈ ಹಿನ್ನೆಲೆಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಡಿ.ಎಸ್. ಶಂಕರ್ ಸಲ್ಲಿಸಿದ ದೂರನ್ನು ಭಾರತೀಯ ದಂಡ ಸಂಹಿತೆ 465, 468, 471, 420, 34ರಡಿ ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನ.13ಕ್ಕೆ 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿ ಬಿಡುಗಡೆ, ನ.20ರಂದು ಪ್ರಥಮ ಪ್ರದರ್ಶನ

ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರಿಂದ ಕೃತಿ ಬಿಡುಗಡೆ: ಅಡ್ಡಂಡ ಕಾರ್ಯಪ್ಪ ಮಾಹಿತಿ

ಮೈಸೂರು,ನ.5(ಪಿಎಂ)–'ಟಿಪ್ಪು ನಿಜ ಕನಸುಗಳು' ನಾಟಕ ಕೃತಿ ನ.13ರಂದು ಬಿಡುಗಡೆಗೊಳ್ಳಲಿದ್ದು, ಇದೇ ನಾಟಕ ನ.20ರಂದು ರಂಗಾಯಣದಲ್ಲಿ ಪ್ರಥಮ ಪ್ರದರ್ಶನ ಕಾಣಲಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿಯ ಕರ್ತೃ ನಾನೇ. ಬೆಂಗಳೂರಿನ ಅಯೋಧ್ಯಾ ಪ್ರಕಾಶನ ಈ ಕೃತಿ ಪ್ರಕಟಿಸಿದೆ. ನ.13ರಂದು ಸಂಜೆ 4ಕ್ಕೆ ರಂಗಾಯಣದ ವನರಂಗದಲ್ಲಿ ಈ ಕೃತಿಯನ್ನು ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಬಿಡುಗಡೆ ಮಾಡಲಿದ್ದಾರೆ. ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಭಾಗವಹಿಸಲಿದ್ದಾರೆ ಎಂದರು.

ಕೃತಿ ಕುರಿತು ಲೇಖಕ ರೋಹಿತ್ ಚಕ್ರತೀರ್ಥ ಮಾತನಾಡಲಿದ್ದಾರೆ. ವಿಕ್ರಮ ಪತ್ರಿಕೆ ಸಂಪಾದಕ ವೃಷಾಂಕ್‌ಭಟ್ ಉಪಸ್ಥಿತರಿರುವರು. ಈ ಕೃತಿಗೆ ಡಾ.ಎಸ್.ಎಲ್.ಭೈರಪ್ಪ ಮುನ್ನುಡಿ ಬರೆದಿದ್ದು, ಚಿಂತಕ ಚಕ್ರವರ್ತಿ ಸೂಲಿಬೆಲೆ ಬೆನ್ನುಡಿ ಬರೆದಿದ್ದಾರೆ ಎಂದು ತಿಳಿಸಿದರು.

ನಾಟಕ ಪ್ರದರ್ಶನ: ರಂಗಾಯಣ ಪ್ರಸ್ತುತಪಡಿಸುವ 'ಟಿಪ್ಪು ನಿಜ ಕನಸುಗಳು' ನಾಟಕಕ್ಕೆ ನಮ್ಮ ರೆಪರ್ಟರಿಯ 15 ಕಲಾವಿದರೊಂದಿಗೆ 10 ಅತಿಥಿ ಕಲಾವಿದರನ್ನು ನಟ ನಟಿಯರನ್ನಾಗಿ ಜೋಡಿಸಲಾಗಿದೆ. ಸಂಗೀತ ಮತ್ತು ರಂಗಹಿನ್ನೆಲೆಯವರು ಸೇರಿದಂತೆ ಒಟ್ಟು 30 ಕಲಾವಿದರ ತಂಡ ಪ್ರದರ್ಶನ ನೀಡಲಿದೆ. ನ.20ರಂದು ರಂಗಾಯಣದ ಭೂಮಿಗೀತದಲ್ಲಿ ಸಂಜೆ 6ಕ್ಕೆ ಈ ನಾಟಕದ ಪ್ರಥಮ ಪ್ರದರ್ಶನ ನಡೆಯಲಿದೆ. ಬಳಿಕ ನ.21, 24, 26, 27, 30 ಹಾಗೂ ಡಿ.4ರಂದು ಈ ನಾಟಕ ರಂಗಾಯಣದಲ್ಲಿ ಪ್ರದರ್ಶನಗೊಳ್ಳಲಿದೆ. ಇದಾದ ನಂತರದಲ್ಲಿ ಇದೇ ತಂಡದಿಂದ ರಾಜ್ಯಾದ್ಯಂತ 100 ಪ್ರದರ್ಶನ ನೀಡಬೇಕೆಂಬುದು ರಂಗಾಯಣದ ಉದ್ದೇಶ. ಈ ಸಂಬಂಧ ಸರ್ಕಾರದ ಅನುದಾನ ಕೋರಲಾಗಿದೆ. ಅನುದಾನದ ಆಧಾರದಲ್ಲಿ ಈ 100 ಪ್ರದರ್ಶನಗಳ ಯೋಜನೆ ರೂಪುಗೊಳ್ಳಲಿದೆ ಎಂದರು.

ನಾನೇ ರಚಿಸಿ, ನಿರ್ದೇಶಿಸಿರುವ ಈ ನಾಟಕಕ್ಕೆ ಹೆಸರಾಂತ ರಂಗವಿನ್ಯಾಸಕ ಶಶಿಧರ ಅಡಪ, ವಸ್ತ್ರಪರಿಕರ ವಿನ್ಯಾಸಕಾರ ಪ್ರಮೋದ್ ಶಿಗ್ಗಾಂವ್ ಕೈ ಜೋಡಿಸಿದ್ದಾರೆ. ಈ ನಾಟಕಕ್ಕೆ ಸುಬ್ರಹ್ಮಣ್ಯ, ಧನಂಜಯ ಸಂಗೀತ ಸಂಯೋಜಿಸಿದ್ದು, ಮಹೇಶ್ ಕಲ್ಲತ್ತಿ ಬೆಳಕಿನ ವಿನ್ಯಾಸ ಮಾಡಿದ್ದಾರೆ. ನಾಟಕಕ್ಕೆ ಕೆಲವು ಹಾಡುಗಳನ್ನು ಎಸ್.ರಾಮನಾಥ ಬರೆದಿದ್ದಾರೆ. 3 ಗಂಟೆ 20 ನಿಮಿಷದ ಈ ನಾಟಕದ ಮಧ್ಯೆ 10 ನಿಮಿಷ ವಿರಾಮವಿದೆ 3 ಗಂಟೆ ಅವಧಿಗೆ ಸೀಮಿತಗೊಳಿಸುವ ಉದ್ದೇಶ ಹೊಂದಲಾಗಿದೆ. ಟಿಕೆಟ್‌ಗೆ ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಅತಿರಂಜಿತ ಸುಳ್ಳು ಚರಿತ್ರೆ: ಮೈಸೂರು ಸಂಸ್ಥಾನವನ್ನು ಆಕ್ರಮಿಸಿಕೊಂಡವನು ಪರ್ಷಿಯನ್ ಮೂಲದ ಹೈದರಾಲಿ. ಈತನ ಮಗ ಟಿಪ್ಪು ಸುಲ್ತಾನನ ಬಗ್ಗೆ ಅತಿರಂಜಿತ ಸುಳ್ಳು ಚರಿತ್ರೆಯೇ ನಿರ್ಮಾಣಗೊಂಡಿದೆ. ಭಾರತೀಯ ಸಂಸ್ಕೃತಿಯ ಮೇಲೆ ನಡೆದಿರುವ ಮುಸ್ಲಿಂ ದೊರೆಗಳ ಆಕ್ರಮಣಕಾರಿ ಕೃತ್ಯಗಳನ್ನು ಅತ್ಯಂತ ಜಾಣತನದಿಂದ ಮುಚ್ಚಿಟ್ಟು ಬರೆದಿರುವ ಚರಿತ್ರೆಯನ್ನೇ ಪಠ್ಯಪುಸ್ತಕವನ್ನಾಗಿಸಿ ಅದನ್ನೇ ಓದಿಸಿಕೊಂಡು ಬರಲಾಗಿದೆ. ಈ ಸುಳ್ಳಿನಲ್ಲಿ ಟಿಪ್ಪು ಕೂಡ ಸೇರುತ್ತಾನೆ ಎಂದರು.

ಡಾ.ಐ.ಮಾ.ಮುತ್ತಣ್ಣ, ಆರ್.ಡಿ.ಶರ್ಮಾ, ಡಾ.ಚಿದಾನಂದಮೂರ್ತಿಯವರ ಕೃತಿಗಳಲ್ಲದೆ, ಟಿಪ್ಪು ಕಾಲದ ಹುಸೇನ್ ಅಲಿ ಕಿರ್ಮಾನಿ ರಚನೆಯ 'ಹೈದರ್ ನಿಶಾನಿ' ಕೃತಿಗಳ ಅಧ್ಯಯನದಿಂದ ಟಿಪ್ಪುವಿನ ನಿಜಸ್ವರೂಪ ಬಯಲಾಗುತ್ತದೆ. ಮೈಸೂರು ವಿವಿ ವಿಶ್ರಾಂತ ಕುಲಪತಿ ಫಣಿಕ್ಕರ್ ಅವರು ಟಿಪ್ಪು ಪರ್ಷಿಯನ್ ಭಾಷೆಯಲ್ಲಿ ಬರೆದಿರುವ 'ಪತ್ರಗಳ' ಸಂಗ್ರಹವನ್ನು ಬ್ರಿಟಿಷ್ ಗ್ರಂಥಾಲಯದಿಂದ ಪಡೆದು ಮಲಯಾಳಂಗೆ ಅನುವಾದಿಸಿದ್ದಾರೆ. ಟಿಪ್ಪು ಸ್ವತಃ ಬರೆದಿರುವ ಪತ್ರಗಳೇ ಆತನ ನಿಜ ಕನಸುಗಳು. ಈ ಪತ್ರಗಳನ್ನು ಖ್ಯಾತ ಸಂಶೋಧಕ ಡಾ.ಚಿದಾನಂದಮೂರ್ತಿ ಕನ್ನಡಕ್ಕೆ ಅನುವಾದಿಸಿದ್ದಾರೆ ಎಂದು ತಿಳಿಸಿದರು.

ಟಿಪ್ಪು ಧೀರ, ಸ್ವಾತಂತ್ರ್ಯ ಹೋರಾಟಗಾರ, ವಿಶ್ವಧರ್ಮ ಪ್ರೇಮಿ, ಮುಸ್ಲಿಂ ಆಗಿದ್ದರೂ ಹಿಂದೂ ದೇವಾಲಯ ಮಠಗಳಿಗೆ ಉದಾರವಾಗಿ ದಾನದತ್ತಿ ನೀಡಿದ ಜಾತ್ಯಾತೀತವಾದಿ ಎಂದೆಲ್ಲಾ ಹೊಗಳಿ ಅಟ್ಟಕ್ಕೇರಿಸಲಾಗಿದೆ. ಆ ಮೂಲಕ ಓಟ್‌ಬ್ಯಾಂಕ್ ನಿರ್ಮಾತೃ, ಡೋಂಗಿ ಬುದ್ಧಿಜೀವಿಗಳು ಕೋಟೆಯನ್ನೇ ನಿರ್ಮಿಸಿಕೊಂಡಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದರು.

ಮೈಸೂರು ಪ್ರಾಂತ್ಯದಲ್ಲಿ ಆಡಳಿತ ಭಾಷೆಯಾಗಿದ್ದ ಕನ್ನಡದ ಬದಲಾಗಿ ಪರ್ಷಿಯನ್ ಭಾಷೆಯನ್ನು ಆಡಳಿತಕ್ಕೆ ತಂದಿದ್ದಲ್ಲದೆ, ಕನ್ನಡದಲ್ಲಿದ್ದ ಕಂದಾಯದ ಹೆಸರು, ಊರ ಹೆಸರುಗಳನ್ನು ಬದಲಿಸಿ, ಇಸ್ಲಾಮಿಕ್ ಹೆಸರುಗಳನ್ನು ನಾಮಕರಣ ಮಾಡಿದ್ದನ್ನು ಮುಚ್ಚಿಡಲಾಗಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ನಾಟಕಕಾರ ಗಿರೀಶ್ ಕಾರ್ನಾಡ್ ಅವರು ಚರಿತ್ರೆಯ ಸತ್ಯದ ತಲೆಗೆ ಹೊಡೆದಂತೆ 'ಟಿಪ್ಪು ಸುಲ್ತಾನ ಕಂಡ ಕನಸುಗಳು' ನಾಟಕ ಬರೆದಿದ್ದು, ಇದನ್ನು ಮೈಸೂರು ರಂಗಾಯಣದಲ್ಲಿ ಸ್ವಾತಂತ್ರ್ಯ ಸುವರ್ಣ ಜಯಂತಿ ನೆನಪಿಗೆಂದು ಸರ್ಕಾರದ ವಿಶೇಷ ಅನುದಾನದಲ್ಲಿ ಪ್ರದರ್ಶಿಸಲಾಗಿತ್ತು ಎಂದರು.

ಟೀಕೆಗೆ ಒಳಪಟ್ಟಾಗ ಕಾರ್ನಾಡರು 'ನನ್ನದು ಐತಿಹಾಸಿಕ ವ್ಯಕ್ತಿಯ ಪಾತ್ರವಲ್ಲ, ನನಗೆ ಮನೋರಂಜಿತ ನಾಟಕ ಬರೆಯಲು ಸಾಧ್ಯವಾದಷ್ಟೂ ಮಟ್ಟಿಗೆ ಸಂಕೀರ್ಣ ಪಾತ್ರವನ್ನು ಸೃಷ್ಟಿಸುವ ಅಗತ್ಯವಿತ್ತು ಅದಕ್ಕಾಗಿ ತುಘಲಕ್, ಟಿಪ್ಪು ಸುಲ್ತಾನ ನಾಟಕವನ್ನು ಬರೆದೆ' ಎಂದು ಜಾರಿಕೊಂಡಿದ್ದರು. ಇದಕ್ಕೆ ಉತ್ತರವಾಗಿ ಡಾ.ಎಸ್.ಎಲ್.ಭೈರಪ್ಪ, 'ಇತಿಹಾಸದ ಸುಳ್ಳು ಚಿತ್ರಣದ ಮೇಲೆ ರಾಷ್ಟ್ರೀಯತೆ ಗಟ್ಟಿಗೊಳಿಸುವುದು ಅಸಾಧ್ಯ' ಎಂದು ಟೀಕಿಸಿದ್ದರು. ಡೋಂಗಿ ವಾದವನ್ನು ತಿರಸ್ಕರಿಸಿ ರಾಷ್ಟ್ರೀಯತೆ ಗಟ್ಟಿಗೊಳಿಸುವ ದೃಷ್ಟಿಯಿಂದ ಬಚ್ಚಿಡಲಾದ ಸತ್ಯ ಅನಾವರಣಕ್ಕಾಗಿ 15 ದೃಶ್ಯಗಳ 'ಟಿಪ್ಪು ನಿಜ ಕನಸುಗಳು' ನಾಟಕ ರಚಿಸಿ, ಪ್ರಯೋಗಕ್ಕೆ ಸಿದ್ಧಪಡಿಸಲಾಗಿದೆ ಎಂದು ತಿಳಿಸಿದರು. ರಂಗಾಯಣದ ಉಪನಿರ್ದೇಶಕಿ ನಿರ್ಮಲ ಮಠಪತಿ, ಬಹುರೂಪಿ–22ರ ಸಂಚಾಲಕ ಜಗದೀಶ್ ಮನವಾರ್ತೆ ಗೋಷ್ಠಿಯಲ್ಲಿದ್ದರು.




ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ 'ಟಿಪ್ಪು ನಿಜ ಕನಸುಗಳು' ನಾಟಕದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

'ಭಾರತೀಯತೆ' ಶೀರ್ಷಿಕೆಯಡಿ ಡಿ.8ರಿಂದ ಬಹುರೂಪಿ ರಾಷ್ಟ್ರೀಯ ರಂಗೋತ್ಸವ

ಮೈಸೂರು,ನ.5(ಪಿಎಂ)– ರಂಗಾಯಣದ ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕೇವಲ ನಾಟಕ ಪ್ರದರ್ಶನದ ಹಬ್ಬವಲ್ಲ. ಸಮಾಜಕ್ಕೆ ಕನ್ನಡಿ ಹಿಡಿಯುವ ವಸ್ತುವಿಷಯದಡಿ ನಡೆಯುವುದು ಇದರ ವೈಶಿಷ್ಟ್ಯ. 2022ನೇ ಸಾಲಿನ ಬಹುರೂಪಿ ರಂಗೋತ್ಸವ ಡಿ.8ರಿಂದ 15ರವರೆಗೆ 'ಭಾರತೀಯತೆ' ಶೀರ್ಷಿಕೆಯಡಿ ನಡೆಯಲಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

ರಂಗಾಯಣ ಆವರಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗಾಂಧಿ ಪಥ', 'ತಾಯಿ' ಶೀರ್ಷಿಕೆಗಳಡಿ ನನ್ನ ಅವಧಿಯಲ್ಲಿ ಎರಡು ಬಹುರೂಪಿ ರಂಗೋತ್ಸವ ಜರುಗಿವೆ. ಕೋವಿಡ್ ಕಾರಣಕ್ಕೆ 2022ನೇ ಸಾಲಿನ ರಂಗೋತ್ಸವ ನಡೆದಿರಲಿಲ್ಲ. ಇದೇ ಸಾಲಿನ ರಂಗೋತ್ಸವ ಇದೀಗ ಆಯೋಜಿಸಲು ಸಿದ್ಧತೆ ನಡೆದಿದೆ ಎಂದು ಹೇಳಿದರು. ಅನೇಕ ಭಾಷೆ, ಧರ್ಮ, ಜಾತಿ ಜನಾಂಗಗಳ ಏಕ ಸಮೂಹವೇ ಭಾರತ. ವಿವಿಧತೆಯಲ್ಲಿ ಏಕತೆಯೇ ನಮ್ಮ ಶಕ್ತಿ. ಭಾರತದ ಪರಂಪರೆ, ಧರ್ಮಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಮ್ಮ ಪರಂಪರೆಯನ್ನು ನಮ್ಮ ಜನ ನಿರಾಕರಿಸುವಂತಹ ಸ್ಥಿತಿ ತಂದ ಮೆಕಾಲೆವಾದಿಗಳ, ಮತಾಂತರಿ ಮಿಷನರಿಗಳ, ಉಗ್ರಗಾಮಿಗಳ ಅಭಿಮಾನಿಗಳನ್ನೇ ಜಾತ್ಯಾತೀತ ಎನ್ನುವ ಡೋಂಗಿಗಳ ಅಪಾಯಕಾರಿ ಬೌದ್ಧಿಕ ರಿವಾಜುಗಳನ್ನು ಬದಲಿಸಿ, ರಾಷ್ಟ್ರೀಯತೆ ಗಟ್ಟಿಗೊಳಿಸುವುದು ಇಂದಿನ ಅಗತ್ಯ. ಈ ಸದಾಶಯವೇ 'ಭಾರತೀಯತೆ' ಶೀರ್ಷಿಕೆ ಎಂದು ವಿವರಿಸಿದರು. ಈ ರಂಗೋತ್ಸವದ ಅತಿಥಿಗಳ ವಿವರ, ನಾಟಕ, ಚಲನಚಿತ್ರೋತ್ಸವ, ಜನಪದೋತ್ಸವ, ವಿಚಾರ ಸಂಕಿರಣ, ಉದ್ಘಾಟನೆ ಮತ್ತು ಸಮಾರೋಪ ಸಮಾರಂಭ ಸಂಬಂಧ ಸಿದ್ಧತೆಗಳನ್ನು ಈಗಷ್ಟೇ ಆರಂಭಿಸಲಾಗಿದೆ. ಹಾಗಾಗಿ ಪೂರ್ಣ ವಿವರಗಳನ್ನು ಮುಂದಿನ ಗೋಷ್ಠಿಯಲ್ಲಿ ನೀಡಲಾಗುವುದು ಎಂದರು.



ಸತ್ಯದ ಅನಾವರಣವೇ 'ಟಿಪ್ಪು ನಿಜ ಕನಸುಗಳು' ಕೃತಿ, ನಾಟಕದ ಉದ್ದೇಶ

ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಸ್ಪಷ್ಟನೆ

ಮೈಸೂರು,ನ.5(ಪಿಎಂ)– 'ಟಿಪ್ಪು ನಿಜ ಕನಸುಗಳು' ಕೃತಿ ಮತ್ತು ನಾಟಕದ ಉದ್ದೇಶವೇನು? ಎಂಬುದಕ್ಕೆ ಪ್ರತಿಕ್ರಿಯಿಸಿದ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಸತ್ಯದ ಅನಾವರಣ ಇದರ ಉದ್ದೇಶ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಧ್ಯಮದವರ ಪ್ರಶ್ನೆಗಳಿಗೆ ಅವರು ಪ್ರತಿಕ್ರಿಯಿಸಿದರು. ಯಾವ ರೀತಿ ಸತ್ಯಗಳು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, 3 ಗಂಟೆ ಅವಧಿಯ ನಾಟಕ ಇದು. ಇಷ್ಟು ಅವಧಿಯ ವಿವರಗಳನ್ನು ಈಗ ನೀಡಲಾರೆ. ಯಾವುದೇ ಸಿನಿಮಾದ ಕಥೆಯನ್ನು ಒಬ್ಬ ನಿರ್ದೇಶಕನಾಗಲೀ, ನಿರ್ಮಾಪಕರಾಗಲೀ, ಹೇಳುವುದಿಲ್ಲ. ಕುತೂಹಲ ಹುಟ್ಟಿಸುವ ಉದ್ದೇಶವಿರುತ್ತದೆ. ಅಂತೆಯೇ ನಾನು ಈಗ ಸದ್ಯಕ್ಕೆ ತಮಗೆ ಸಾರಾಂಶ ನೀಡಿದ್ದೇನೆ ಅಷ್ಟೇ ಎಂದರು.

ಟಿಪ್ಪು ಶೂರನಲ್ಲ, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿಲ್ಲವೆಂದು ಬಿತ್ತುವುದು ಈ ನಾಟಕದ ಉದ್ದೇಶವೇ? ಎಂಬುದಕ್ಕೆ ಅದು ಹಾಗಲ್ಲ, ಪೂರ್ಣ ವಿವರವನ್ನು ನಾಟಕದಲ್ಲೇ ನೋಡಬೇಕು. ಆಗ ನಾನು ಯಾವ ಆಧಾರದಲ್ಲಿ ಕೃತಿ ಬರೆದಿದ್ದೇನೆ ಎಂಬುದು ಮನದಟ್ಟಾಗುತ್ತದೆ. ಕಾಗಕ್ಕ ಗೂಬಕ್ಕನ ಕಥೆ ಬರೆದಿಲ್ಲ. ಬಿಡುಗಡೆ ಆಗುತ್ತಿದ್ದಂತೆ ಕೃತಿ ನಿಮ್ಮ ಕೈ ಸೇರುತ್ತದೆ. ಆಗ ತಮಗೆ ನಾಟಕದ ಪೂರ್ಣ ವಿವರ ದೊರೆಯಲಿದೆ ಎಂದು ಹೇಳಿದರು.

ಅಡ್ಡಂಡ ಕಾರ್ಯಪ್ಪನವರು ಏಕೆ ಟಿಪ್ಪು ಹಿಂದೆಯೇ ಬಿದ್ದಿದ್ದಾರೆ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಟಿಪ್ಪು ಒಬ್ಬ ಚರಿತ್ರೆಯ ವಿವಾದಿತ ವ್ಯಕ್ತಿ ಆಗಿರುವ ಕಾರಣಕ್ಕೆ ನಮ್ಮ ನಾಲ್ಕನೇ ತಲೆಮಾರಿನ ಸಂದರ್ಭದಲ್ಲಿ ಆತ ನಮ್ಮ ಕುಟುಂಬದ ಹಿಂದೆ ಬಿದ್ದಿದ್ದ. ಅದು ಬೇರೆ ವಿಚಾರ ಎಂದರು. ವಿವಾದಿತ ವ್ಯಕ್ತಿಗಳು ಇತಿಹಾಸದಲ್ಲಿ ಸಾಕಷ್ಟು ಮಂದಿ ಇದ್ದಾರೆ. ಹಾಗಾಗಿ ಟಿಪ್ಪು ವಿಚಾರದಲ್ಲೇ ಏಕೆ ಇಷ್ಟು ಆಸಕ್ತಿ? ಎಂಬುದಕ್ಕೆ ಉತ್ತರಿಸಿ, ಏಕೆಂದು ಕೇಳುವುದು ಸೂಕ್ತವಲ್ಲ. ಸತ್ಯದ ಅನಾವರಣ ನಮ್ಮ ಉದ್ದೇಶ ಎಂದರು. ಟಿಪ್ಪು ವಿಚಾರದಲ್ಲಿ ರಂಗಾಯಣ ಏಕಿಷ್ಟು ಸದ್ದು ಮಾಡುತ್ತಿದೆ ಎಂಬುದಕ್ಕೆ ಉತ್ತರಿಸಿ, ರಾಜ್ಯದಲ್ಲೆ ಸದ್ದು ಮಾಡುತ್ತಿದೆ. ಟಿಪ್ಪು ಎಕ್ಸ್‌ಪ್ರೆಸ್ ಈಗಾಗಲೇ ಬದಲಾಯಿತು. ನೀವೂ ಏನೇ ಹೇಳಿದರೂ ಇದಕ್ಕಿಂತ ಹೆಚ್ಚು ಹೇಳಲಾರೆ, ನೀವು ಹೇಳಿದಂತೆ ಉತ್ತರ ಕೊಡಬೇಕೆಂದಿಲ್ಲ ಎಂದು ಹೇಳಿದರು. ರಂಗಾಯಣ ಸರ್ಕಾರದ ಆಸ್ತಿ. ಸರ್ಕಾರಿ ಸಂಸ್ಥೆಯಲ್ಲಿ ನಿಮ್ಮ ಅಜೆಂಡಾ ಏಕೆ ಎಂದು ಪ್ರಶ್ನಿಸಿದಾಗ, ಇಲ್ಲಿ ಯಾವುದೇ ಕಾರಣಕ್ಕೂ ನನ್ನ ವೈಯಕ್ತಿಕ ಅಜೆಂಡಾ ಇಲ್ಲ ಎಂದು ಪ್ರತಿಕ್ರಿಯಿಸಿದರು.

ಕಬ್ಬಿಗೆ ವೈಜ್ಞಾನಿಕ ಬೆಲೆಗೆ ಆಗ್ರಹಿಸಿ ರೈತರ ಪ್ರತಿಭಟನೆ ಮುಂದುವರಿಕೆ

ಸರ್ಕಾರದ ವಿರುದ್ಧ ಮುಖಂಡರ ವಾಗ್ದಾಳಿ



ಮೈಸೂರು,ನ.5(ಎಂಟಿವೈ)– ಕಬ್ಬಿನ ವೈಜ್ಞಾನಿಕ ಬೆಲೆ ನಿಗದಿ ಮಾಡುವಂತೆ ಒತ್ತಾಯಿಸಿ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಪ್ರತಿಭಟನೆ 6ನೇ ದಿನವೂ ಮುಂದುವರೆಯಿತು.

ಜಿಲ್ಲಾಧಿಕಾರಿ ಕಚೇರಿ ಬಳಿ ಶನಿವಾರವೂ ಪ್ರತಿಭಟನೆ ಮುಂದುವರೆಸಿದ ಕಬ್ಬು ಬೆಳೆಗಾರರು, ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಕಬ್ಬಿನ ಎಫ್‌ಆರ್‌ಪಿ ಪುನರ್ ಪರಿಶೀಲನೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ 6 ದಿನಗಳಿಂದಲೂ ಪ್ರತಿಭಟನೆ ನಡೆಸುತ್ತಿದ್ದರೂ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ. ಬನ್ನಾರಿ ಸಕ್ಕರೆ ಕಾರ್ಖಾನೆ ಕಳೆದ ವರ್ಷಕ್ಕಿಂತ ಟನ್ ಕಬ್ಬಿಗೆ ಕೇವಲ ಐದು ರೂಪಾಯಿ ಏರಿಕೆ ಮಾಡಿದೆ. ಆದರೆ ಕಟಾವು ಕೂಲಿ ಸಾಗಾಣಿಕೆ ವೆಚ್ಚವನ್ನು 150 ರೂ ಗೆ ಏರಿಕೆ ಮಾಡಿರುವುದು ರೈತರಿಗೆ ತೊಂದರೆ ನೀಡುವಂತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ರೈತರನ್ನು ಮರೆತಿದ್ದಾರೆ. ಆರು ದಿನಗಳಿಂದ ಅಹೋ ರಾತ್ರಿ ಧರಣಿ ನಡೆಸುತ್ತಿದ್ದರು, ಸೌಜನ್ಯಕ್ಕೂ ಮಾತನಾಡಿಸದೆ ಇರುವುದು, ಸರ್ವಾಧಿಕಾರಿ ಧೋರಣೆಯಾಗಿದೆ. ಸರ್ಕಾರ, ಸಚಿವರು ಉದ್ಯಮಿಗಳ, ರಿಯಲ್ ಎಸ್ಟೇಟ್ ಮಾಫಿಯಾದವರ ಹಿತರಕ್ಷಣೆಗಾಗಿ ಆಡಳಿತ ನಡೆಸುವಂತೆ ಕಾಣುತ್ತಿದೆ ಎಂದು ಕಿಡಿಕಾರಿದರು.

ಸಚಿವರು ಮಾಫಿಯಾ ಹಿತರಕ್ಷಣಾ ಸಚಿವರಾಗಿದ್ದಾರೆ. ರಾಜ್ಯ ಸರ್ಕಾರ ಕಬ್ಬು ದರ ನಿಗದಿಗೆ ನ.10ರಂದು ಸಕ್ಕರೆ ಕಾರ್ಖಾನೆ ಮಾಲೀಕರು, ಕಬ್ಬು ನಿಯಂತ್ರಣ ಮಂಡಳಿಯ ಸದಸ್ಯರ ಸಭೆ ಕರೆದಿದೆ. ಕಬ್ಬು ಎಫ್‌ಆರ್‌ಪಿ ದರ ಏರಿಕೆ ಮಾಡುವ ಬಗ್ಗೆ ರಾಜ್ಯ ಸರ್ಕಾರದ ನಿರ್ಧಾರ ಗಮನಿಸಿ, ಕಬ್ಬು ಬೆಳೆಗಾರರ ಹೋರಾಟದ ತೀರ್ಮಾನ ಕೈಗೊಳ್ಳುತ್ತೇವೆ. ಈಗಾಗಲೇ ಗುಲ್ಬರ್ಗ, ಬಿಜಾಪುರ, ಬೆಳಗಾವಿ, ಬಾಗಲಕೋಟೆ, ಹಳಿಯಾಳ, ಧಾರವಾಡ, ಗದಗದಲ್ಲೂ ನಿರಂತರ ಅಹೋರಾತ್ರಿ ಧರಣಿ ನಡೆಯುತ್ತಿದೆ. ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ರೈತರು ಮತ್ತೆ ಬೀದಿಗಿಳಿಯಬೇಕಾಗುತ್ತದೆ ಎಂದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ಅತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕೆರೆಹುಂಡಿ ರಾಜಣ್ಣ, ಹಾಡ್ಯ ರವಿ, ಕುರುಬೂರು ಸಿದ್ದೇಶ್, ಪ್ರಸಾದ್ ನಾಯಕ್, ಹಿರಿಯೂರ್ ನವೀನ, ಗೌರಿಶಂಕರ್, ಗುರುಸ್ವಾಮಿ, ರಂಗರಾಜು, ಕಾಟೂರ್ ಮಹದೇವ ಸ್ವಾಮಿ, ಮಹದೇವ, ಮಂಜುನಾಥ್, ಉಡಿಗಾಲ ಮಂಜು ಮತ್ತಿತರು ಪಾಲ್ಗೊಂಡಿದ್ದರು.

ಸೆಮಿಫೈನಲ್‌ಗೆ ಇಂಗ್ಲೆಂಡ್, ಟೂರ್ನಿಯಿಂದ ಆಸೀಸ್ ಔಟ್

ಸಿಡ್ನಿ, ನ.5– ಶ್ರೀಲಂಕಾ ವಿರುದ್ಧದ ಮಹತ್ವದ ಪಂದ್ಯದಲ್ಲಿ ಗೆಲುವು ಸಾಧಿಸಿದ ಇಂಗ್ಲೆಂಡ್ ಸೆಮಿಫೈನಲ್‌ಗೆ ಲಗ್ಗೆ ಹಾಕಿದೆ. ಆ ಮೂಲಕ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ಟೂರ್ನಿಯಿಂದ ಹೊರಬಿದ್ದಿದೆ. ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 141 ರನ್ ಕಲೆ ಹಾಕಿತ್ತು. ಲಂಕಾ ಪರ ಪಾಥುಮ್ ನಿಶಾಂಕ 67 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಆಟ ಮೂಡಿ ಬರಲಿಲ್ಲ. ಇಂಗ್ಲೆಂಡ್ ಪರ ಮಾರ್ಕ್ ವುಡ್ 3, ಸ್ಟೋಕ್ಸ್, ಕ್ರಿಸ್ ವೋಕ್ಸ್, ಆದಿಲ್ ರಶೀದ್ ಹಾಗೂ ಸ್ಯಾಮ್ ಕರ್ರನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಸಾಧಾರಣ ಗುರಿ ಬೆನ್ನತ್ತಿದ ಇಂಗ್ಲೆಂಡ್ 19.4 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 144 ರನ್ ಗಳಿಸುವ ಮೂಲಕ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ತಂಡದ ಪರ ಜಾಸ್ ಬಟ್ಲರ್ 28, ಅಲೆಕ್ಸ್ ಹೇಲ್ಸ್ 47, ಬೆನ್ ಸ್ಟೋಕ್ಸ್ 42 ರನ್ ಗಳಿಸಿದರು. ಲಂಕಾ ಪರ ಲಹೀರು ಕುಮಾರ, ಹಸರಂಗ ಹಾಗೂ ಧನಂಜಯ ಡಿಸಿಲ್ವಾ ತಲಾ 2 ವಿಕೆಟ್ ಪಡೆದರು. ಆದೀಲ್ ರಶೀದ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಆಸ್ಟ್ರೇಲಿಯಾ ಔಟ್: 'ಎ' ಗುಂಪಿನಲ್ಲಿರುವ ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳು 'ಸೂಪರ್ 12' ಹಂತದಲ್ಲಿ ಆಡಿರುವ ತಲಾ 5 ಪಂದ್ಯಗಳಲ್ಲಿ 3ರಲ್ಲಿ ಜಯ ಸಾಧಿಸಿವೆ. ತಲಾ ಒಂದೊಂದು ಪಂದ್ಯದಲ್ಲಿ ಸೋಲು ಅನುಭವಿಸಿದ್ದರೆ, ಉಳಿದೊಂದು ಪಂದ್ಯ ಮಳೆಯಿಂದಾಗಿ ರದ್ದಾಗಿದೆ. ಹೀಗಾಗಿ ಮೂರೂ ತಂಡಗಳು 7 ಅಂಕ ಗಳಿಸಿದ್ದವು. ಆದರೆ, ರನ್‌ರೇಟ್ ಆಧಾರದಲ್ಲಿ ನ್ಯೂಜಿಲೆಂಡ್ ಅಗ್ರಸ್ಥಾನ ಕಾಯ್ದುಕೊಂಡಿದ್ದು, ಇಂಗ್ಲೆಂಡ್ ನಂತರದ ಸ್ಥಾನದಲ್ಲಿದೆ. ಮೂರನೇ ಸ್ಥಾನಕ್ಕೆ ಕುಸಿದಿರುವ ಆಸ್ಟ್ರೇಲಿಯಾ ಸೆಮಿಫೈನಲ್ ರೇಸ್‌ನಿಂದ ಹೊರಬಿದ್ದಿದೆ.

ಜಾನುವಾರುಗಳಿಗೆ ಗಂಟುರೋಗ: ಮೈಸೂರಲ್ಲಿ ಅಗತ್ಯ ಮುನ್ನೆಚ್ಚರಿಕೆ



ಮೈಸೂರು,ನ.5(ಎಂಟಿವೈ)– ಜಾನುವಾರುಗಳ ಕಾಡುತ್ತಿರುವ ಗಂಟು ರೋಗ ಮೈಸೂರು ತಾಲೂಕಿನಲ್ಲಿ ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಮೈಸೂರು ತಾ.ಪಂ. ಆಡಳಿತಾಧಿಕಾರಿಯೂ ಆದ ಜಿ.ಪಂ. ಉಪ ಕಾರ್ಯದರ್ಶಿ ಪ್ರೇಮ್ ಕುಮಾರ್ ಸೂಚಿಸಿದ್ದಾರೆ.

ಮೈಸೂರಿನ ನಜ್ಜರ್‌ಬಾದ್‌ನ ಮಿನಿ ವಿಧಾನಸೌಧದಲ್ಲಿರುವ ತಾಲೂಕು ಕಚೇರಿಯಲ್ಲಿ ಶನಿವಾರ ನಡೆದ ತಾಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಂದ ವಿವಿಧ ಇಲಾಖೆಗಳ ಪ್ರಗತಿ ಕುರಿತಂತೆ ಮಾಹಿತಿ ಪಡೆದ ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹಲವೆಡೆ ಜಾನುವಾರುಗಳಲ್ಲಿ ಗಂಟುರೋಗದ ಲಕ್ಷಣಗಳು ಕಂಡು ಬಂದಿದೆ. ರೈತರು ಹೈನುಗಾರಿಕೆಯನ್ನೇ ಅವಲಂಬಿಸಿದ್ದು, ಈ ಜಾಡ್ಯದಿಂದಾಗಿ ಆತಂಕಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನಲ್ಲಿ ಜಾನುವಾರುಗಳಿಗೆ ಗಂಟುರೋಗ ಹರಡದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು. ಜಾನುವಾರುಗಳ ಸಂರಕ್ಷಣೆಗೆ ಗಮನ ನೀಡಬೇಕು ಎಂದು ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪಶುಸಂಗೋಪನಾ ಇಲಾಖೆಯ ತಾಲೂಕು ಅಧಿಕಾರಿ, ಗಂಟುರೋಗ ತಾಲೂಕಿನಲ್ಲಿ ನಿಯಂತ್ರಣದಲ್ಲಿದೆ. ಜಿಲ್ಲೆಯಲ್ಲಿ ಮೊದಲು ಕೆ.ಆರ್. ನಗರ ತಾಲೂಕಿನಲ್ಲಿ ಕಂಡುಬಂದಿದೆ. ಇದೀಗ ಮೈಸೂರು ತಾಲೂಕಿನಲ್ಲೂ ಕಾಣಿಸಿಕೊಂಡಿದೆ. ರಾಸುಗಳಿಗೆ ಅಗತ್ಯ ಲಸಿಕೆ ಹಾಕಲಾಗುತ್ತಿದೆ. ಪಶು ಆರೋಗ್ಯ ತಪಾಸಣೆಗಾಗಿ ಶಿಬಿರಗಳನ್ನೂ ಆಯೋಜಿಸಲಾಗುತ್ತಿದೆ. ಮುನ್ನೆಚ್ಚರಿಕೆಯಾಗಿ ಜಾನುವಾರುಗಳ ಜಾತ್ರೆಯನ್ನೂ ನಿರ್ಬಂಧಿಸಲಾಗಿದೆ ಎಂದು ತಿಳಿಸಿದರು.

ಶಿಷ್ಯ ವೇತನ ಪಡೆಯುತ್ತಿರುವ ಕಾನೂನು ಪದವಿ ಪಡೆದಿರುವ ಅಭ್ಯರ್ಥಿಗಳು, ಸರ್ಕಾರಿ ವಕೀಲರ ಬಳಿ ತರಬೇತಿ ಪಡೆಯಲು ಹೋಗದಿರುವ ಬಗ್ಗೆ ದೂರುಗಳು ಬಂದಿವೆ. ಶಿಷ್ಯ ವೇತನ ಪಡೆದರೂ ಏಕೆ ತರಬೇತಿ ಪಡೆಯಲು ಹೋಗುತ್ತಿಲ್ಲ? ಎಂದು ಪ್ರಶ್ನಿಸಿದರಲ್ಲದೇ, ಇವರೆಲ್ಲ ಹಿರಿಯ ವಕೀಲರಲ್ಲಿ ಖಾಸಗಿಯಾಗಿ ತರಬೇತಿಗೆ ಸೇರಿಕೊಳ್ಳುತ್ತಿದ್ದಾರೆ. ಸರ್ಕಾರಿ ವಕೀಲರ ಕಾರ್ಯವೈಖರಿ ತಿಳಿದುಕೊಳ್ಳಲು ಇವರಲ್ಲೂ ತರಬೇತಿ ಪಡೆದುಕೊಳ್ಳಬೇಕು. ಆದ್ದರಿಂದ ಸರ್ಕಾರಿ ವಕೀಲರಲ್ಲಿ ತರಬೇತಿ ಪಡೆಯಲು ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತಹ ಕಾರ್ಯಕ್ರಮ ರೂಪಿಸಬೇಕು. ಹಿಂದುಳಿದ ವರ್ಗಗಳ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯ ಹಾಸ್ಟೆಲ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ಈ ಹಿಂದೆ ಕರಾಟೆ ತರಬೇತಿ ನೀಡಲಾಗುತ್ತಿತ್ತು ಈಗ ಅದರ ಸ್ಥಿತಿಗತಿ ಏನಾಗಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ವಿದ್ಯಾರ್ಥಿಗಳ ಪ್ರತಿಭೆಗೆ ಪ್ರೋತ್ಸಾಹ ನೀಡುವುದರೊಂದಿಗೆ ಅನ್ಯ ಉದ್ದೇಶಗಳಿಗೆ ಮಕ್ಕಳು ಸಮಯವನ್ನು ವ್ಯರ್ಥ ಮಾಡಿಕೊಳ್ಳದಂತೆ ಪಠ್ಯೇತರ ಚಟುವಟಿಕೆಗಳನ್ನು ಆಯೋಜಿಸಬೇಕು ಎಂದು ಸಲಹೆ ನೀಡಿದರು.

ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ತಾಲೂಕು ವ್ಯಾಪ್ತಿಯಲ್ಲಿ ದುರಸ್ತಿಗೊಳ್ಳುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ಕುರಿತು ಮಾಹಿತಿ ಕೇಳಿದರು. ಅದಕ್ಕೆ ತಾಲೂಕು ಆರೋಗ್ಯಾಧಿಕಾರಿ ಈ ಬಗ್ಗೆ ಮೈಸೂರು ನಿರ್ಮಿತಿ ಕೇಂದ್ರದಿಂದ ಯಾವುದೇ ಮಾಹಿತಿ ಸಿಕ್ಕಿಲ್ಲ. ಜತೆಗೆ, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸಹ ನಮ್ಮೊಂದಿಗೆ ಪತ್ರ ವ್ಯವಹಾರ ನಡೆಸಿಲ್ಲ ಎಂದು ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಆಡಳಿತಾಧಿಕಾರಿ ಪ್ರೇಮ್‌ಕುಮಾರ್, ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಭೆ ನಡೆಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ತಾಪಂ ಕಾರ್ಯನಿರ್ವಾಹಣಾಧಿಕಾರಿ ಎಚ್.ಡಿ. ಗಿರೀಶ್, ಸಹಾಯಕ ಲೆಕ್ಕಾಧಿಕಾರಿ ಪ್ರೇಮಾ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
6-11-2022



ಶತಾವಧಾನಿ ಡಾ.ರಾ. ಗಣೇಶ್

ಅಷ್ಟಾವಧಾನ

ಕನ್ನಡ ಕಾವ್ಯಕಲಾ ವಿನೋದ–ವಿದ್ವತ್ಕಲಾ ಪ್ರದರ್ಶನ

ಬೇದ್ರೆ ಮಂಜುನಾಥ ಮೊ. 9448589089

ಮೈಸೂರಿನ ಕಲಾಮಂದಿರದಲ್ಲಿ ನಡೆಯುತ್ತಿರುವ ಭಾರತೀಯ ಹಬ್ಬಗಳು ಕಾರ್ಯಕ್ರಮದಲ್ಲಿ ಭಾನುವಾರ(ನ.6) ಸಂಜೆ 4 ಗಂಟೆಗೆ ವಿದ್ವಾನ್ ಶತಾವಧಾನಿ ಡಾ.ರಾ.ಗಣೇಶ್ ಅವರಿಂದ ಅಷ್ಟಾವಧಾನ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಸಾಹಿತ್ಯ, ಕಲೆ, ಕವಿ–ಪಂಡಿತರ ಬಗೆ ಬಗೆಯ ಪ್ರಶ್ನೆಗಳನ್ನು ಆಶು ಕವಿತೆ, ವಿವರಣೆ ಹಾಗೂ ವಿನೋದದಿಂದ ಎದುರಿಸಲಿದ್ದಾರೆ.

'**ಅವಸರದ ಜಗವಿದು, ಪುರುಸೊತ್ತು ಎಲ್ಲಿಹುದು?**' ಎಂದು ಕೇಳುವ ಈ ದಿನಗಳಲ್ಲಿಯೂ ಸತತ ನಾಲ್ಕೈದು ಗಂಟೆಗಳ ಕಾಲ ಆಸಕ್ತಿಯಿಂದ ಕುಳಿತು ಕಾವ್ಯಕಲಾವಿದ್ವತ್ ಕ್ರೀಡೆಯಾದ '**ಅವಧಾನ**'ವನ್ನು ವೀಕ್ಷಿಸುವವರ, ಪ್ರೋತ್ಸಾಹಿಸುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಪ್ರಾಚೀನ ಕಲಾಪರಂಪರೆಯನ್ನು ಪೋಷಿಸುತ್ತಿರುವ ಭಾರತೀಯ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ. ಕೊರೊನಾ ಮಹಾಮಾರಿಯ ಕೃಪೆಯಿಂದಾಗಿ ಆನ್‌ಲೈನ್ ಮೂಲಕ ವಿಶ್ವಪ್ರಸಿದ್ಧಿಯನ್ನು ಗಳಿಸಿದ ಈ ವಿದ್ವತ್ಕಲಾ ಪ್ರದರ್ಶನ ಬೌದ್ಧಿಕ ಕಸರತ್ತಿಗೊಂದು ಮಾದರಿಯಾಗಿದೆ.

ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ಕಲಾಮಂದಿರದಲ್ಲಿ ನಡೆಯುತ್ತಿರುವ ಏಳು ದಿನಗಳ '**ಭಾರತೀಯ ಹಬ್ಬಗಳು**' ಸಾಂಸ್ಕೃತಿಕ ಉತ್ಸವದ ಅಂಗವಾಗಿ ಇದೇ ಭಾನುವಾರ ಶತಾವಧಾನಿ, ಅವಿಳಂಬ ಸರಸ್ವತಿ, ಅವಧಾನ ತಪೋನಿಧಿ, ಪದ್ಯವಿದ್ಯಾವಿಭಾಕರ, ಅವಧಾನ ಶಿರೋಮಣಿ, ಅವಧಾನಿರತ್ನ, ಚಿತ್ರಕವಿತಾ ಚಕ್ರವರ್ತಿ, ಭಾರತೀಯಕಲಾಚಾರಪಂಡಿತ, ವಿದ್ವತ್ಕವಿಕಲಾಧರ ಇತ್ಯಾದಿ ಬಿರುದಾಂಕಿತ ಬಹುಭಾಷಾ ಅವಧಾನಿ ವಿದ್ವಾನ್ **ಡಾ.ರಾ.ಗಣೇಶ್ ಅವರ** '**ಅಷ್ಟಾವಧಾನ**' ಕಾರ್ಯಕ್ರಮ ಏರ್ಪಾಡಾಗಿದೆ. ಡಾ. ರಾ. ಗಣೇಶ್ ಅವರು ರಾಜ್ಯದಾದ್ಯಂತ ಸಂಚರಿಸಿ, ಸಾವಿರಕ್ಕೂ ಅಧಿಕ ಅವಧಾನ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾ ಬಂದಿದ್ದು, ಅವಧಾನ ಕಲೆಯತ್ತ ಯುವ ಮನಸ್ಸುಗಳನ್ನು ಸೆಳೆಯುವ, ಆಡಂಬರದ ಜೀವನ ವಿಧಾನದ ಕಾರಣದಿಂದ ನಶಿಸಿಹೋಗುತ್ತಿರುವ ಈ ಅವಧಾನ ಕಲೆಯನ್ನು ಉಳಿಸುವ, ಬೆಳೆಸುವ ತನ್ಮೂಲಕ ಸಮಾಜದಲ್ಲಿ ವಿದ್ಯೆಯ ಬಗ್ಗೆ ಗೌರವವನ್ನು ಹೆಚ್ಚಿಸುವ ಕೆಲಸ ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶವಾಗಿದೆ.

ನಿಷೇಧಾಕ್ಷರ, ಸಮಸ್ಯಾಪೂರ್ಣ, ದತ್ತಪದಿ, ಚಿತ್ರಬಂಧ, ಆಶುಕವಿತೆ, ಕಾವ್ಯವಾಚನ, ಅಪ್ರಸ್ತುತ ಪ್ರಸಂಗ ಮತ್ತು ಘಂಟಾವಾದನ ಎಂಬ ಎಂಟು ವಿಭಾಗಗಳಿಂದ ಕೂಡಿರುವ '**ಅಷ್ಟಾವಧಾನ**' ಕಾರ್ಯಕ್ರಮದಲ್ಲಿ ಕಿಂಚಿತ್ ಬದಲಾವಣೆ ಮಾಡಿ, ಘಂಟಾವಾದನವನ್ನು ಕೈ ಬಿಟ್ಟು, **ಧಾತುವಿಗೆ ಮಾತು, ಉದ್ದಿಷ್ಟಾಕ್ಷರ** ಎಂಬ ಭಾಗಗಳನ್ನು ಸೇರಿಸಿ ಮೈಸೂರಿನಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಕೆ.ಬಿ.ಎಸ್. ರಾಮಚಂದ್ರ, ಎಚ್.ಎ. ವಾಸುಕಿ, ಅಷ್ಟಾವಧಾನಿ ಗಣೇಶಭಟ್ಟ ಕೊಪ್ಪಲತೋಟ, ಡಾ. ರಂಜನಿ ವಾಸುಕಿ, ಅರ್ಜುನ್ ಭಾರದ್ವಾಜ್, ಶ್ರೀಶಕಾರಂತ್, ಕಶ್ಯಪ್ ನಾಯಕ್ ಮತ್ತು ಸೋಮಶೇಖರ ಶರ್ಮ ಅವರು ಪೃಚ್ಛಕರಾಗಿ ಭಾಗವಹಿಸಲಿದ್ದಾರೆ.

ಈ ಹಿಂದೆ, 2014ರಲ್ಲಿ, ಹಾಸನದಲ್ಲಿ ಸಂಸ್ಕೃತಮ್ – ಅವಧಾನಾಸಕ್ತರ ಬಳಗವು ಏರ್ಪಡಿಸಿದ್ದ ಡಾ. ರಾ. ಗಣೇಶ್ ಅವರ 999ನೇ '**ಅವಧಾನ**' (**ದಶಾವಧಾನ**) ಕಾರ್ಯಕ್ರಮದಲ್ಲಿ ಅವಧಾನಿಗಳಿಂದ ವೀಳ್ಯ ಸ್ವೀಕರಿಸಿದ ಪೃಚ್ಛಕರು ನಿರೀಕ್ಷೆಗಿಂತಲೂ ಹೆಚ್ಚಾಗಿ ಅವಧಾನಿಗಳನ್ನು ಪ್ರಶ್ನೆಗಳಿಂದ ತಾಡಿಸಿದರು, ಅಪ್ರಸ್ತುತವಾಗಿ ಕಾಡಿದರು, ಸಲ್ಲಾಪಕ್ಕೆಳೆದರು, ಕಾವ್ಯಕನ್ನಿಕೆಯ ಈಕ್ಷಣೆಗೆ ವಿಪುಲಾವಕಾಶವಿತ್ತರು. ಆ ರಸಾಸ್ವಾದದ ಅಮೂಲ್ಯ ಕ್ಷಣಗಳು ಇಲ್ಲಿವೆ:



ನಿಷೇಧಾಕ್ಷರಿ

ಮನೋತಜ್ಞರು ಹಾಗೂ ಅಷ್ಟಾವಧಾನಿಗಳೂ ಆದ **ಡಾ. ಶಂಕರ್ ರಾಜಾರಾಮನ್** ಅವರು '**ಕಾಡಿಗೆ ಹಚ್ಚಿದ ಹೆಣ್ಣಿನ ಕಣ್ಣಿನ ವರ್ಣನೆ**' ಮಾಡಿ ಎಂಬ ವಸ್ತುವನ್ನು ಕೊಟ್ಟು ಅದಕ್ಕಾಗಿ '**ವಿಯೋಗಿನೀ**' ಛಂದಸ್ಸು ಬಳಸಬೇಕೆಂದರು. ಅವಧಾನಿಗಳು ಪದಗಳನ್ನು ಜೋಡಿಸಲು ಆರಂಭಿಸುತ್ತಿದ್ದಂತೆಯೇ ನಿರ್ದಿಷ್ಟ ಅಕ್ಷರಗಳನ್ನು ಬಳಸಬಾರದೆಂಬ ನಿಷೇಧ ಒಡ್ಡುತ್ತಿದ್ದರು. ಹಲವು ಅಕ್ಷರಗಳ ನಿಷೇಧದ ನಡುವೆಯೂ ಸುಂದರವಾಗಿ, ಕಬ್ಬಿಣದ ಖಡ್ಗದಂತೆ ಹರಿತವಾದ ಭಾಷಾಭಾರತಿಯ ಕಣ್ಣಿನ ವರ್ಣನೆ ಸೊಗಸಾಗಿ ಮೂಡಿಬಂದದ್ದು ಹೀಗೆ:

ಅಸಿಕಾನ್ತಿಮದೀಪ್ಸು ಭಾಣಿಕಾ
ವಸುಮಾನ್ಯಂ ದೃಷಿಭಾಗ್ಯಮೇವ ನಃ
ಲವನಾಯಹೃದಾಂ ಕಿಲಾಂಗನಾ
ಪುರತೋ ಭಾತಿ ಸರಸ್ವತೀ ಸದಾ ॥

ಸಮಸ್ಯಾಪೂರ್ಣ

'**ಕೇಳು ಜಾನಕಿ ರಾಮಚಂದ್ರನ ನಾಲ್ಕನೆಯ ಮಡದಿ**' ಎಂಬ ಸಮಸ್ಯೆಯನ್ನು ಕೊಟ್ಟ **ಭ.ರಾ. ವಿಜಯಕುಮಾರ್** ಭಾಮಿನಿ ಷಟ್ಪದಿಯಲ್ಲಿ ಪರಿಹಾರವನ್ನು ಸೂಚಿಸಬೇಕೆಂದರು. ಏಕಪತ್ನೀವ್ರತಸ್ಥ ಶ್ರೀರಾಮನಿಗೆ **ಶ್ರುತಿ, ಸ್ಮೃತಿ, ಧೃತಿ** ಎಂಬ ಮೂವರು ನಡೆ–ನುಡಿ–ಚಾರಿತ್ರ್ಯದ ಪತ್ನಿಯರಿದ್ದು, ಜಾನಕಿಯು ನಾಲ್ಕನೆಯವಳಾಗುತ್ತಾಳೆ ಎನ್ನುವ ಭಾವದಲ್ಲಿ ಪರಿಹಾರವನ್ನಿತ್ತರು ಅವಧಾನಿಗಳು. ಆ ಪದ್ಯ ಹೀಗಿದೆ:

ಕೇಳಿಯೇ ಕವಿಗಳ್ಗೆ ಕವಿತಾ
ಪಾಳಿಯೇ ಭಾವಿಸಲು ಸಂಸ್ತವ
ದೂಳಿಗಂಗಡ ಪೂರಯಿಸುವುದು ಪದ್ಯಮಿದ ನಿಮ್ಮ
ಕಾಳಿರದ ನುಡಿ ಕೀಳಿರದ ನಡೆ
ಕೋಳುವೋಗದ ಕಸುವೆ ಸತಿಯರ್
ಕೇಳು ಜಾನಕಿ ರಾಮಚಂದ್ರನ ನಾಲ್ಕನೆಯ ಮಡದಿ॥

ಎತ್ತ ಕೂಡಿದರೂ 1000 ವೊತ್ತ ಬರುವಂತೆ ಐದು ಕಂಬಸಾಲು ಮತ್ತು ಐದು ಅಡ್ಡಸಾಲುಗಳ ಸಂಖ್ಯಾ ಬಂಧವನ್ನು ರಚಿಸಲು ಆಹ್ವಾನಿಸಿದರು. ಚಕ್ರಬಂಧ ಅಥವಾ ಸಂಖ್ಯಾಬಂಧ ಗಣಿತದ ಚಮತ್ಕಾರಗಳ ಲ್ಲೊಂದು. 5 ಗುಣಿಸು 5ರ ಮನೆಗಳಲ್ಲಿ 25 ಸಂಖ್ಯೆ ಗಳನ್ನು ತುಂಬಿಸಿ ಸಾವಿರವನ್ನಾಗಿಸಲು ಇರುವ ಸುಲಭ ವಿಧಾನ 200 ರನ್ನು 5 ಬಾರಿ ಬರೆಯು ವುದು. ಆದರೆ ಒಮ್ಮೆ ಬಳಸಿದ ಸಂಖ್ಯೆಯನ್ನು ಮತ್ತೊಮ್ಮೆ ಬಳಸದಂತೆ ನಿಷೇಧಿಸಿದ್ದರಿಂದ 200 ಅನ್ನು ಮಧ್ಯದ ಸಂಖ್ಯೆಯನ್ನಾಗಿಟ್ಟುಕೊಂಡು ಅದರ ಹಿಂದಿನ 12 ಮತ್ತು ಮುಂದಿನ 12 ಅಂದರೆ 188 ರಿಂದ 212 ರವರೆಗಿನ ಸಂಖ್ಯೆಗಳನ್ನು ಸೂತ್ರಪ್ರಕಾರ ಜೋಡಿಸಿ 1000 ಬರುವಂತೆ ಮಾಡಬಹುದು. ಇದಿಷ್ಟನ್ನು ಇಡೀ ಕಾರ್ಯಕ್ರಮದ 5 ಗಂಟೆಗಳ ಅವಧಿಯಲ್ಲಿ ಮಧ್ಯೆ ಮಧ್ಯೆ ಅವಧಾನಿಗಳನ್ನು ಪ್ರಶ್ನಿಸಿ ಪಡೆದುಕೊಳ್ಳಲಾಯಿತು. ರಾ. ಗಣೇಶ್ ಅವರ ಪರಿಹಾರ ಹೀಗಿತ್ತು:

211	201	193	190	205	= 1000
202	203	191	208	196	= 1000
188	194	200	206	212	= 1000
204	192	209	197	198	= 1000
195	210	207	199	189	= 1000
=	=	=	=	=	
1000	1000	1000	1000	1000	

ನೃತ್ಯದ ಭಾವ

ಏಳು ನಿಮಿಷಗಳ ಕಾಲ ಆಕರ್ಷಕ ನೃತ್ಯಮಾಡಿದ **ಉನ್ನತ್, ರಜನಿರಾಮಸ್ವಾಮಿ, ಹಂಸ ನಟರಾಜ್, ಸೌಮ್ಯಶ್ರೀ ಆತ್ಮಾರಾಮ್** ಅವರು ನರ್ತನದ ಮುದ್ರಿಕೆಗಳ ಭಾಷೆಯಲ್ಲಿ ಸಮಸ್ಯೆಯೊಂದನ್ನು ನೀಡಿ **ಕಂದಪದ್ಯದ** ರೂಪದ ಪರಿಹಾರವನ್ನು ಬಯಸಿದರು. ನಾಲ್ಕುವೇದಗಳಿಂದ ಆಯ್ದ ಆಂಶಗಳಿಂದ ಪಂಚಮವೇದವಾದ ನಾಟ್ಯವೇದವನ್ನು ರಚಿಸಲಾಗಿದೆ ಎನ್ನುವುದು ಈ ನಾಟ್ಯದ ಭಾವವಾಗಿತ್ತು. ಅದಕ್ಕೆ ಅವಧಾನಿಗಳು ರಚಿಸಿದ ಕಂದ ಹೀಗಿತ್ತು:

ಪಂಚಮವೇದೋದಂಚಿತ
ಕಿಂಚಿತ್ ಕೈವಲ್ಯರೂಪಿ ಸುಕಲಾಶಾಸ್ತ್ರ
ಪಂಚಿದುದಲ್ತೆ ರಸಾಮೃತ
ದಿಂಚರದಿಂ ಮಾಣ್ದೆಪಂಚಿಯಾಕರ್ಣಗಳಿಂ ॥

ಆಶುಕವಿತೆ

ಪ್ರಸ್ತುತ ರಾಜಕೀಯ ಸನ್ನಿವೇಶದ 'ಪೊರಕೆ', ಹುಡುಗಿಯಾಗಿ ಹುಡುಗನ ವರ್ಣನೆ, ಯುವಕನಾಗಿ ಯುವತಿಯ ವರ್ಣನೆ ಹೀಗೆ ವಿವಿಧ ವಿಷಯಗಳನ್ನು ನೀಡಿ ಆಶುಕವಿತೆ ರಚಿಸಲು **ಚಿನ್ನೇನಹಳ್ಳಿ ಸ್ವಾಮಿಯವರು** ಅವಧಾನಿಗಳನ್ನು ಆಹ್ವಾನಿಸಿದರು. ದತ್ತ ವಿಷಯಕ್ಕೆ ಹಾಸ್ಯಲೇಪಿಸಿ ಆಶುಕವಿತೆ ರಚಿಸಿ ಅವಧಾನಿಗಳು ಪ್ರೇಕ್ಷಕರ ಮನರಂಜಿಸಿದರು.



ದತ್ತಪದಿ

ಕಡಲು, ಹಿಮ, ತಲ, ಪುಲಿನ ಎಂಬ ನಾಲ್ಕು ಪದಗಳನ್ನು ಕೊಟ್ಟು **ಐದು ಮಾತ್ರಾಗಣದ ಚೌಪದಿಯಲ್ಲಿ ಪಶ್ಚಿಮ ಘಟ್ಟದ ವರ್ಣನೆ** ಮಾಡಲು ಮಾಹಿತಿ ತಂತ್ರಜ್ಞ **ಹೆಚ್. ಆರ್. ಶ್ರೀಶ ಕಾರಂತ್** ಅವಧಾನಿಗಳನ್ನು ಕೇಳಿಕೊಂಡರು. ಶಿರಭಾಗದಲ್ಲಿರುವ ಹಿಮಾದ್ರಿಯನ್ನೂ ಪಾದದ ಬಳಿಯ ಕಡಲನ್ನು, ನಡುವಿನ ಮಲೆನಾಡನ್ನು ಏಕೀಭವಿಸುವಂತೆ ರಚಿಸಲಾದ ಪದ್ಯ ಹೀಗಿತ್ತು:

ಕಡಲಿನಲೆಗಳ ಕೈಗಳಿಂದೆ ಕೈವಾರಮಂ
ಪಡೆದು ಹಿಮಗಿರಿಯ ಮಹೋನ್ನತಿಯನು
ಮುಡಿದು ಜೀವಶ್ರೀಯ ಭಾವಮಂ ಭೂತಲದ
ಗುಡಿಯಿದು ಮಲೆನಾಡಿನ ರಸದಿಪುಲಿನ ॥

ಕಾವ್ಯಗಾಯನ

ಕರ್ನಾಟಕ ಕಲಾಶ್ರೀ, ಗಮಕ ವಿದುಷಿ ಗಂಗಮ್ಮ ಕೇಶವಮೂರ್ತಿ ಅವರು **ಚನ್ನಬಸವ ಪುರಾಣ, ಪಂಪನ ವಿಕ್ರಮಾರ್ಜುನ ವಿಜಯ, ಒಮರನ ಒಸಗೆ, ರಾಘವಾಂಕನ ಹರಿಶ್ಚಂದ್ರ ಕಾವ್ಯ**ಗಳಿಂದ ಆಯ್ದ ಭಾಗಗಳನ್ನು ಸುಶ್ರಾವ್ಯವಾಗಿ ವಾಚಿಸಿ ಅವುಗಳ ಸ್ವಾರಸ್ಯವನ್ನು ವ್ಯಾಖ್ಯಾನಿಸಬೇಕೆಂದು ಅವಧಾನಿಗಳನ್ನು ಕೇಳಿದರು. ವಾಚನವನ್ನು ಅಮೋಘವೆಂದು ಹೊಗಳಿದ ಅವಧಾನಿಗಳು ಆಯ್ದುಕೊಂಡ ಪದ್ಯಭಾಗಗಳಲ್ಲಿ ಹೆಚ್ಚಿನ ಆಳ, ರಸಾಸ್ವಾದದ ಕೊರತೆ ಹಾಗೂ ಬರೆದುಕೊಂಡಿದ್ದ ಭಾಗದಲ್ಲಿದ್ದ ಸ್ಖಾಲಿತ್ಯಗಳನ್ನು ತಿಳಿಸಿ, ಒಮರನ ಒಸಗೆ ಮತ್ತು ಹರಿಶ್ಚಂದ್ರ ಕಾವ್ಯಗಳ ಆಯ್ದ ರಸವತ್ತಾದ ಭಾಗಗಳನ್ನು ವರ್ಣಿಸಿದರು.

ಸಂಖ್ಯಾಬಂಧ

ಶೀಘ್ರದಲ್ಲೇ 1000ನೇ ಅವಧಾನ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದ ರಾ.ಗಣೇಶ್ ಅವರಿಗೆ ಕಟ್ಟಾಯದ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ವಿಶ್ವನಾಥ್ ಚೌಹಾಣ್ ಅವರು

ರಾಗರಂಜಿನಿ

ಕನಕದಾಸ, ಪುರಂದರದಾಸ, ಕುವೆಂಪು ಅವರ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿದ **ಹೆಚ್.ಎನ್.ಪ್ರಕಾಶ್** ಆಯಾ ಪದ್ಯಗಳ ಸ್ವಾರಸ್ಯವನ್ನು ತಿಳಿಸುವಂತೆ ಅವಧಾನಿಗಳನ್ನು ಕೇಳಿಕೊಂಡರು. ಪ್ರತಿಯೊಂದು ಪದ್ಯವನ್ನು ವಿಶ್ಲೇಷಿಸಿ ಸೂಕ್ತ ವಿವರಣೆಯೊಂದಿಗೆ ಸಂದರ್ಭವನ್ನು ವಿವರಿಸಿದ್ದು, ಅವಧಾನಿಗಳ ಬಹುಶ್ರುತ ವಿದ್ವತ್ತಿಗೆ ದ್ಯೋತಕವಾಗಿತ್ತು.

ಸಾಹಿತ್ಯ ಸಲ್ಲಾಪ

'ಸಾಹಿತ್ಯ ಎಂದರೇನು?', 'ಸಾಹಿತ್ಯಕ್ಕೂ ಜೀವನಕ್ಕೂ ಇರುವ ಸಂಬಂಧವೇನು?', 'ಸಾಹಿತ್ಯದ ಪ್ರಸ್ತುತತೆ' ಹೀಗೆ ಲಲಿತ ಸಾಹಿತ್ಯ ಸಲ್ಲಾಪಕ್ಕೆ **ಎಸ್. ಸೂರ್ಯಪ್ರಕಾಶ್ ಪಂಡಿತ್** ಅವರು ಅವಧಾನಿಗಳನ್ನು ಆಹ್ವಾನಿಸಿದರು. ಬಹುಜನರ ಮೆಚ್ಚುಗೆಗೆ ಪಾತ್ರವಾಗುವಂತೆ ಗಹನವಾದ ವಿಷಯವನ್ನು ಸರಳಗೊಳಿಸಿ ಸಾಹಿತ್ಯ ಮತ್ತು ಬದುಕಿನ ಸಂಬಂಧವನ್ನು ಅವಧಾನಿಗಳು ವಿವರಿಸಿದರು.

ಅಪ್ರಸ್ತುತ ಪ್ರಸಂಗ

ಅವಧಾನ ಕಾರ್ಯಕ್ರಮಕ್ಕೆ ರಂಗು ತಂದುಕೊಡುವುದೇ ಅಪ್ರಸ್ತುತ ಪ್ರಸಂಗ. ಅವಧಾನಿಗಳ ಏಕಾಗ್ರತೆಗೆ ಭಂಗ ತರುವಂತೆ ರಂಗಕರ್ಮಿ **ಕೊರ್ಗಿ ಶಂಕರ ನಾರಾಯಣ ಉಪಾಧ್ಯಾಯ** ಅವರು ಕೇಳಿದ ಪ್ರಶ್ನೆಗಳು ಮೇಲುನೋಟಕ್ಕೆ ಅಪ್ರಸ್ತುತ ಎನಿಸಿದರೂ ಪ್ರಸಂಗಾವಧಾನತೆಯಿಂದ ಪ್ರೇಕ್ಷಕರನ್ನು ರಂಜಿಸುವಲ್ಲಿ ಈ ಸಲ್ಲಾಪ ಯಶಸ್ವಿಯಾಯಿತು. ಅವಧಾನಿ ಆರ್.ಗಣೇಶ್ ಅವರು ವೀಳ್ಯವನ್ನು ಕೊಟ್ಟು ಪೃಚ್ಛಕರನ್ನು ಆಹ್ವಾನಿಸಿದ್ದನ್ನು '**ಇದು ರಣವೀಳ್ಯ**'**ವೇ?** ಎಂದು ಪ್ರಶ್ನಿಸಿದರು ಪ್ರಸಂಗಿಗಳು. '**ಇದು ರಣವೀಳ್ಯವಲ್ತು ಸಾಹಿತ್ಯ ಸಲ್ಲಾಪ ಮಂಟಪದ ತೋರಣವೀಳ್ಯವಿದು**' ಎಂದು ಸಲ್ಲಾಪಕ್ಕೆಳೆದರು ಅವಧಾನಿಗಳು. ಐದುಗಂಟೆಗಳ ಕಾಲ ನಡೆದ ಅವಧಾನದ ಏಕತಾನತೆಯನ್ನು ಹೋಗಲಾಡಿಸಿದ ಈ ಅಪ್ರಸ್ತುತ ಪ್ರಸಂಗ ಜನಮಾನಸದಲ್ಲಿ ಚಿರಸ್ಥಾಯಿಯಾಯಿತು.

ಕನ್ನಡದ ವಿಶಿಷ್ಟ ಕಲೆಯಾಗಿ ಉಳಿಯಬಹುದಾಗಿರುವ ಈ 'ಅವಧಾನ'ವನ್ನು ಪೋಷಿಸಿ, ಜನಪ್ರಿಯಗೊಳಿಸಿ, ಮುಂದಿನ ಪೀಳಿಗೆಯವರಿಗೆ ದಾಟಿಸುವ ಕೆಲಸಕ್ಕೆ ಕೈಜೋಡಿಸಿರುವ ಈ 'ಭಾರತೀಯ ಹಬ್ಬಗಳು' ಸಾಂಸ್ಕೃತಿಕ ಉತ್ಸವ ಯಶಸ್ವಿಯಾಗಲಿ ಎಂದು ಹಾರೈಸೋಣ.



ವಾರಭವಿಷ್ಯ

6.11.2022 ರಿಂದ 12.11.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :–
ರವಿ–ತುಲಾ, ಚಂದ್ರ–ಮಕರ, ಕುಂಭ, ಮೀನ, ಮೇಷ, ಕುಜ–ವೃಷಭ, ಬುಧ–ಕನ್ಯಾ, ಗುರು–ಮೀನ, ಶುಕ್ರ–ಕನ್ಯಾ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಆರಂಭಕ್ಕೆ ಶುಭ ಶುಕ್ರನ ಪರಿಣಾಮ ಮನೆಯಲ್ಲಿ ಹರುಷದ ವಾತಾವರಣ. ಸತಿ–ಪತಿಯರಲ್ಲಿ ಅನ್ಯೋನ್ಯತೆಯ ವೃದ್ಧಿ. ಪರೀಕ್ಷೆ, ಸಂದರ್ಶನಗಳಲ್ಲಿ ಯಶಸ್ಸು. ಪ್ರೇಮಿಗಳಲ್ಲಿ ಉಂಟಾಗಿದ್ದ ಅನುಮಾನಗಳು ನಿವಾರಣೆ ಆಗುವುದು. ದುಬಾರಿ ವಸ್ತುಗಳು ಮನೆಗೆ ಬರುವುದು. ನಿಮ್ಮ ರಾಶಿಯಲ್ಲೇ ರಾಹು ಇದ್ದು ಕೋಪವನ್ನು ತ್ಯಜಿಸಿ, ಅನ್ಯಥಾ ಕಾರ್ಯಗೇಡು. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಎಂಬಂತೆ ಆಗುವುದು. ಶ್ರೀ ಸುಬ್ರಹ್ಮಣ್ಯ ಉಪಾಸನೆ. ಶುಭ ಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಕೈಗೊಂಡ ಮಹತ್ವದ ಕೆಲಸ ಕಾರ್ಯಗಳು ದಡ ಸೇರುತ್ತವೆ. ನಿಮ್ಮ ಜಾಣ್ಮೆಯಿಂದಲೂ ವಾಕ್‌ಚಾತುರ್ಯದಿಂದಲೂ ಜೀವನದಲ್ಲಿ ಹೊಸ ಸ್ತರಗಳನ್ನು ಏರುವಿರಿ. ಮನೆ, ನಿವೇಶನ ಹೊಂದುವ ನಿಮ್ಮ ಪ್ರಯತ್ನಕ್ಕೆ ಗುರು ಗ್ರಹದ ಅನುಗ್ರಹವಿದೆ. ಪ್ರಾಮಾಣಿಕವಾಗಿ ಪ್ರಯತ್ನಿಸಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಆಸಕ್ತಿ ಮೂಡುವುದು. ವಾರದ ಕಡೆಗೆ ದೇವತಾ ಉತ್ಸವದಲ್ಲಿ ಭಾಗಿಯಾಗುವಿರಿ.
ಶ್ರೀಲಲಿತಾ ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸಪ್ತಾಹದ ಪ್ರಾರಂಭದಲ್ಲಿ ಆಕಸ್ಮಿಕ ಘಟನೆಗಳು ನಿಮ್ಮನ್ನು ವಿಚಲಿತರನ್ನಾಗಿಸಬಹುದು. ವ್ಯಾಪಾರ, ವ್ಯವಹಾರಗಳಲ್ಲಿ ಸಫಲತೆಯನ್ನು ಹೊಂದಲು ತೀರಾ ಸರ್ಕಸ್ ಮಾಡಬೇಕಾದೀತು. ಶ್ರೀಮತಿಯೊಂದಿಗೆ ವಿರಸ ಮಾತುಗಳಿಂದ ಮನಃಶಾಂತಿಗೆ ಭಂಗ ಬರುವುದು. ಅಷ್ಟಮ ಶನಿಯ ಕಾರಣ ಮಂಡಿ ನೋವು, ಅನಾರೋಗ್ಯ ಕಾಡಿಸಬಹುದು. ವಾರಾಂತ್ಯಕ್ಕೆ ಸಜ್ಜನರ ಸಂಪರ್ಕದಿಂದ ಸಂತಸದ ತಿಳಿಗಾಳಿ ಬೀಸುವುದು.
ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಸುವರ್ಣ, ತಾಮ್ರ ವಸ್ತು ಲಾಭ. ಅಲಂಕಾರಿಕ ವಸ್ತುಗಳಿಗೆ ಹಣ ವ್ಯಯ. ನಿಮ್ಮ ಸ್ವಸಾಮರ್ಥ್ಯದಲ್ಲಿ ನಿಮಗೆ ನಂಬಿಕೆ ಹೆಚ್ಚಾಗುವುದು. ಸವಿಮಾತುಗಳಿಂದ ತೊಂದರೆಗಳ ನಿವಾರಣೆ. ಸ್ತ್ರೀಯರ ಸಿಹಿ ನೋಟಕ್ಕೆ ಪಾತ್ರರಾಗುವಿರಿ, ಅವರನ್ನು ಗೌರವಾದರಗಳಿಂದ ಕಾಣಿ. ವಾಹನ ಖರೀದಿ ಯೋಗವಿದೆ. ಆತ್ಮೀಯರಿಂದ ಬಳುವಳಿಗಳು ದೊರೆಯುವುದು. ಸ್ನಾಯು ಸೆಳೆತ ಕಾಡಬಹುದು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–5.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಪೂರ್ವಾರ್ಧದಲ್ಲಿ ಅಕಾರಣವಾಗಿ ಉದ್ವೇಗಕ್ಕೆ ಈಡಾಗುವಿರಿ. ಸರ್ಕಾರಿ ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗದು. ನಿತ್ಯ ಜೀವನದಲ್ಲಿ ಲವಲವಿಕೆ ಕಾಣದು. ವಾರದ ಉತ್ತರಾರ್ಧಕ್ಕೆ ಸಜ್ಜನರ ಸಂಪರ್ಕದಿಂದ ಮಹತ್ವದ ಬದಲಾವಣೆಗಳಿಂದ ಹರುಷ. ವ್ಯಾಪಾರಿಗಳಿಗೆ ಕ್ರಯ ಹೆಚ್ಚಾದರೂ ಲಾಭ ಕಡಿಮೆ. ರಾಜಕಾರಣಿಗಳಿಗೆ ಶತ್ರುಗಳ ಕಾರಸ್ಥಾನ ಹೆಚ್ಚಾಗಿರುತ್ತದೆ. ನೇತ್ರ ಸಂಬಂಧಿ ತೊಂದರೆ ಉಂಟಾದೀತು.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–9

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಪ್ತಾಹದ ಆದಿಗೆ ಇಷ್ಟ ಸಿದ್ಧಿ, ಕರ್ಮ ಸಿದ್ಧಿ ಹಿರಿಯ ಮಿತ್ರರೊಬ್ಬರ ಸಹಾಯ, ಸಹಕಾರಗಳು ಲಭ್ಯವಾಗಿ ಉನ್ನತಿಯನ್ನು ಸಾಧಿಸುವಿರಿ. ವ್ಯಾಪಾರ, ವ್ಯವಹಾರಗಳಲ್ಲಿ ಅಧಿಕ ಲಾಭ ದೊರೆಯುವುದು. ಮನಸ್ಸು ಮತ್ತು ಆರೋಗ್ಯ ಸ್ವಸ್ಥವಾಗಿರುತ್ತದೆ. ಖರ್ಚುಗಳು ಕೈ ಮೀರಿದರೂ ಸಮಯಕ್ಕೆ ಸರಿಯಾಗಿ ಹಣ ಒದಗಿ ಬರುವುದು. ಶ್ರೀಮತಿ ಹಾಗೂ ಸುತರ ಸಹಯೋಗದಿಂದ ಮನಸ್ಸು ಪ್ರಫುಲ್ಲಿತವಾಗಿರುವುದು.
ಶ್ರೀ ಶ್ರೀನಿವಾಸ ಆರಾಧನೆ. ಶುಭ ಸಂಖ್ಯೆ–4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಕಳೆದ ವಾರ ನಡೆದ ಸೂರ್ಯ ಗ್ರಹಣದ ಪ್ರಭಾವದಿಂದ ಕೆಲವು ಪ್ರತಿಕೂಲ ಪ್ರಸಂಗಗಳು ಘಟಿಸಬಹುದು. ವಾಮ ಮಾರ್ಗಗಳಿಂದ ಹಣ, ಅಧಿಕಾರ ಲಭಿಸಬಹುದು. ಸರ್ಕಾರಿ ನೌಕರರಿಗೆ ಮನಸ್ಸಿಗೆ ಅಸಮಾಧಾನವಾಗುವ ಘಟನೆಗಳು ಎದುರಾಗಲಿದೆ. ನಿಮ್ಮ ತೀಕ್ಷ್ಣ ನಡೆಯಿಂದ ನೆಮ್ಮದಿ ಭಂಗವಾಗುವ ಸಾಧ್ಯತೆ. 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ'. ಗುರುಹಿರಿಯರ ಭೇಟಿ ಆಶೀರ್ವಾದಗಳು ವಾರಾಂತ್ಯಕ್ಕೆ ದೊರಕಲಿದೆ. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–9.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಈ ವಾರ ದೂರ ಪ್ರಯಾಣಗಳಿಂದ ಲಾಭವಿದೆ. ಧನ ಸಂಚಯವೂ, ಹೊಸ ಗೆಳೆತನವೂ ಉಂಟಾಗುತ್ತದೆ. ಕಷ್ಟ ಸಾಧ್ಯ ಕೆಲಸಗಳು ಸುಲಭದಲ್ಲಿ ಆಗುತ್ತವೆ. ವಿದ್ಯಾರ್ಥಿಗಳಿಗೆ ಉತ್ತಮ ಶ್ರೇಣಿ ದೊರಕುತ್ತದೆ. ನೌಕರಿ ಹುಡುಕುತ್ತಿರುವವರಿಗೆ ಸದ್ವಾರ್ತೆ ಬರುವುದು. ವಾರಮಧ್ಯೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಧಾನ–ಧರ್ಮ ಬುದ್ಧಿಯಿಂದ ಪ್ರಸಿದ್ಧಿಯನ್ನು ಗಳಿಸುವಿರಿ. ಸ್ನಾಯು ಸೆಳೆತ ಕಾಡಿಸಬಹುದು.
ಶ್ರೀ ಲಕ್ಷ್ಮೀನೃಸಿಂಹ ದರ್ಶನ. ಶುಭ ಸಂಖ್ಯೆ–8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭ ಚೆನ್ನಾಗಿದೆ. ಬರಬೇಕಾದ ಹಣ ಕೈ ಸೇರುವುದು. ಆದರೆ ದುಂದು ವೆಚ್ಚಕ್ಕೆ ಕಡಿವಾಣ ಹಾಕಿ. ಮರ–ಮುಟ್ಟು ವ್ಯಾಪಾರಗಳಿಗೆ ಲಾಭ ನಷ್ಟದಲ್ಲಿ ಸಮತ್ವ. ಪತಿ–ಪತ್ನಿಯರಲ್ಲಿ ವೈಮನಸ್ಯ, ಪರಸ್ಪರ ದೂರವಿರಬೇಕಾದ ಪ್ರಸಂಗ ಬಂದೀತು. ನ್ಯಾಯಾಲಯ ವಿಷಯಗಳಲ್ಲಿ ನಿಮ್ಮ ವ್ಯತಿರಿಕ್ತ ತೀರ್ಪು ಬಂದೀತು. ಸ್ತ್ರೀಯರೊಂದಿಗೆ ವ್ಯವಹರಿಸುವಾಗ ಗೌರವಾದರಗಳಿಂದ ಕಾಣಿ. ಆಹಾರ ವ್ಯತ್ಯಾಸದಿಂದ ಆರೋಗ್ಯಕ್ಕೆ ಹಾನಿ. ಶ್ರೀ ಗುರುಸಾರ್ವಭೌಮರ ಉಪಾಸನೆ. ಶುಭಸಂಖ್ಯೆ–1.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಪ್ತಾಹದ ಆದಿಗೆ ನಿಮ್ಮ ರಾಶಿಗೆ ಚಂದ್ರಮನ ಆಗಮನ. ಸುಭೋಜನ, ನೂತನ ವಸ್ತ್ರಾಭರಣ ಪ್ರಾಪ್ತಿ. ಮನೆ ಖರ್ಚುಗಳು ನಿಮ್ಮ ಹಿಡಿತದಲ್ಲಿ ಇರದು. ಶ್ರೀಮತಿ ಹಾಗೂ ಪುತ್ರರ ವಿರೋಧ ಎದುರಿಸಬೇಕಾದೀತು. ಸಾಡೇಸಾತಿಯ ಪ್ರಭಾವ ಇರುವುದರಿಂದ ಸಮಾಜಘಾತುಕ ವ್ಯಕ್ತಿಗಳಿಂದ ದೂರವಿರಿ, ಅನ್ಯಥಾ ಕಾನೂನು ಕ್ರಮಕ್ಕೆ ಗುರಿಯಾಗುವ ಸಾಧ್ಯತೆ ಇರುತ್ತದೆ. ವಾಹನದಲ್ಲಿ ಸಂಚರಿಸುವಾಗ ಟ್ರಾಫಿಕ್ ನಿಯಮ ಗೌರವಿಸಿ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)


ಬಯಸಿದ್ದನ್ನು ಗಳಿಸಿಕೊಳ್ಳುವಿರಿ. ಸ್ಥಾನ ಲಾಭವೂ ಆದೀತು. ಅಭಿವೃದ್ಧಿಯ ಮಾತುಕತೆಗಳು ನಡೆಯುವುದು. ಆದರೆ ನಿಮ್ಮ ಆತ್ಮ ವಿಶ್ವಾಸದಲ್ಲಿ ಕೊರತೆ ಕಾಣುವುದು. ನಂಬಿದವರೇ ಮೋಸ ಮಾಡಿಯಾರು. ಪ್ರಾರಬ್ಧ ಕರ್ಮ ಕಳೆಯಲು ಕರ್ತವ್ಯದಲ್ಲಿ ಭಗವಂತನನ್ನು ಕಾಣಿ. ಇದರಿಂದ ಮನಃಶಾಂತಿ ದೊರಕುವುದು. ಖಯಾಲಿ ಪ್ರಯಾಣಗಳಿಂದ ದೂರವಿರಿ. ವಾಹನ ಡ್ರೈವಿಂಗ್‌ನಲ್ಲಿ ಸಂಯಮವಿರಲಿ.
ಓಂ ನಮೋ ಭಗವತೇ ರುದ್ರಾಯ ಮಂತ್ರ ಜಪಿಸಿ. ಶುಭ ಸಂಖ್ಯೆ–4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಲಾಭಸ್ಥಾನದಲ್ಲಿ ಸಂಚರಿಸುವ ಚಂದ್ರನಿಂದ ಪ್ರವಾಸೋದ್ಯಮ, ಕ್ಷೀರ ವ್ಯಾಪಾರಿಗಳಿಗೆ ಕೈ ತುಂಬಾ ಲಾಭವಾಗುವುದು. ಧನ, ಧಾನ್ಯ ಸಂಗ್ರಹ. ಜವಳಿ, ರೇಷ್ಮೆ ವ್ಯಾಪಾರಿಗಳಿಗೆ ಅಧಿಕ ಲಾಭವಾಗುವುದು. ಕಳೆದ ಗ್ರಹಣ ಪ್ರಭಾವ ಶುಭವಲ್ಲದ ಕಾರಣ ಸಜ್ಜನರಲ್ಲಿ ವಿರೋಧ ಉಂಟಾದೀತು. ವೈರಿಗಳು ಮೇಲುಗೈ ಸಾಧಿಸುವರು. ವಿದ್ಯೆ ಕುಂಠಿತವಾಗುವುದು. ವಾರದ ಕಡೆಗೆ ಮನೆ ದೇವರ ದರ್ಶನ ಮಾಡಿ.
ಶ್ರೀಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ–7.

ಸವಿ ರುಚಿ

ಮೋತಿಚೂರ್ ಲಾಡು



ಬೇಕಾಗುವ ಪದಾರ್ಥಗಳು...

- ಕಡಲೆಹಿಟ್ಟು – 2 ಬಟ್ಟಲು
- ಸಕ್ಕರೆ – 2.5 ಬಟ್ಟಲು
- ಕೇಸರಿ – 6 ದಳ
- ಅಡುಗೆ ಸೋಡಾ – ಕಾಲು ಚಮಚ
- ಹಾಲು– 1 ಬಟ್ಟಲು
- ಫುಡ್ ಕಲರ್ – ಸ್ವಲ್ಪ
- ಏಲಕ್ಕಿ – 2 ಚಮಚ

ಮಾಡುವ ವಿಧಾನ...

ಕಡಲೆಹಿಟ್ಟಿಗೆ ಹಾಲು, ನೀರು, ಅಡುಗೆ ಸೋಡಾ, ಫುಡ್ ಕಲರ್ ಹಾಕಿ ಚೆನ್ನಾಗಿ ಕಲಸಿಕೊಂಡು ಅದರಲ್ಲಿ ಬೂಂದಿ ತಯಾರಿಸಿ, ನಂತರ ಸಕ್ಕರೆ ಪಾಕ ತಯಾರಿಸಿಕೊಂಡು ಅದಕ್ಕೆ ಮೊದಲೇ ತಯಾರಿಸಿಕೊಂಡ ಬೂಂದಿ ಕಾಳುಗಳನ್ನು ಸೇರಿಸಿ. ಈ ಮಿಶ್ರಣವನ್ನು ಚೆನ್ನಾಗಿ ಕಲೆಸಿ ಉಂಡೆ ಮಾಡಿಕೊಂಡರೆ, ರುಚಿಕರವಾದ ಮೋತಿಚೂರ್ ಲಾಡು ಸವಿಯಲು ಸಿದ್ಧ.

ಮೈಸೂರು ಮಿತ್ರ

ಭಾನುವಾರ 6 ನವೆಂಬರ್ 2022

ಬದ್ಧತೆಯ ಯುವ ರಾಜಕಾರಣಿ ಬಿ.ವೈ.ವಿಜಯೇಂದ್ರ

ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಬಣ್ಣನೆ





ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಹುಟ್ಟುಹಬ್ಬದ ಪ್ರಯುಕ್ತ ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಮೃಗಾಲಯ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಹಣ್ಣು ಹಂಪಲು ವಿತರಿಸಿದರು. ಮತ್ತೊಂದು ಚಿತ್ರದಲ್ಲಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸುತ್ತಿರುವುದನ್ನು ಕಾಣಬಹುದು.

ತಿ.ನರಸೀಪುರ, ನ.5– ಸರಳ ವ್ಯಕ್ತಿತ್ವದಿಂದಲೇ ಯುವ ಜನತೆಗೆ ಸ್ಫೂರ್ತಿಯಾಗಿ ಬಿಜೆಪಿಯನ್ನು ಸಂಘಟಿಸುತ್ತಿರುವ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಬದ್ಧತೆಯ ಯುವ ರಾಜಕಾರಣಿ ಎಂದು ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಬಣ್ಣಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಶನಿವಾರ ರಾಜ್ಯ ಬಿಜೆಪಿ ಉಪಾಧ್ಯಕ್ಷ ವಿಜಯೇಂದ್ರ ಅವರ 47ನೇ ಹುಟ್ಟುಹಬ್ಬದ ಪ್ರಯುಕ್ತ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ 2ನೇ ಬಾರಿಗೆ ಅಧಿಕಾರಕ್ಕೆ ಬರಲು ಶ್ರಮಿಸಿದ ವಿಜಯೇಂದ್ರ ಅವರು ವಿಧಾನಸಭೆ ಉಪಚುನಾವಣೆಗಳಲ್ಲಿ ಎಲ್ಲಾ ವರ್ಗದ ಜನರನ್ನು ಪಕ್ಷದೆಡೆಗೆ ಸೆಳೆದು ಅಭ್ಯರ್ಥಿಗಳನ್ನು ಗೆಲ್ಲಿಸುವ ಪಕ್ಷದ ಆಡಳಿತಕ್ಕೆ ಭದ್ರ ಬುನಾದಿ ಹಾಕಿದ ಕೀರ್ತಿಗೆ ಭಾಜನರಾಗಿದ್ದಾರೆ ಎಂದರು.

ವರಿಷ್ಠರ ಸೂಚನೆಯಂತೆ ಪಕ್ಷದ ರಾಜ್ಯ ಉಪಾಧ್ಯಕ್ಷರ ಹುದ್ದೆ ವಹಿಸಿಕೊಂಡಿರುವ ವಿಜಯೇಂದ್ರ ಅವರು ಮುಂಬರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಮತ್ತೊಮ್ಮೆ ಪಕ್ಷವನ್ನು ಅಧಿಕಾರಕ್ಕೆ ತರಲು ಸಂಘಟನೆಯನ್ನು ಬಲಗೊಳಿಸುವ ಕಾಯಕವನ್ನು ಯಾವುದೇ ಅಧಿಕಾರ ಅಪೇಕ್ಷೆ ಇಲ್ಲದೆ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಸರಳ ಸಜ್ಜನಿಕೆ ವ್ಯಕ್ತಿತ್ವ ಹೊಂದಿರುವ ಯುವ ರಾಜಕಾರಣಿ ವಿಜಯೇಂದ್ರ ಅವರ ಹುಟ್ಟು ಹಬ್ಬವನ್ನು ಸರಳವಾಗಿ ಸಾಮಾಜಿಕ ಹಾಗೂ ಶೈಕ್ಷಣಿಕ ಸೌಲಭ್ಯ ವಿತರಿಸುವ ಮೂಲಕ ಆಚರಣೆ ಮಾಡುತ್ತಿದ್ದೇವೆ ಎಂದರು.

ಮೈಮುಲ್ ನಿರ್ದೇಶಕ ಎಸ್.ಸಿ.ಅಶೋಕ್ ಮಾತನಾಡಿ, ಯುವಕರಿಗೆ ಕಣ್ಮಣಿಯಾಗಿರುವ ವಿಜಯೇಂದ್ರ ಅವರ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದೇವೆ. ನಂತರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಿದ ಬಳಿಕ ಸಾರ್ವಜನಿಕ ಆಸ್ಪತ್ರೆ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಗಿದೆ. ರಾಜಕಾರಣದಲ್ಲಿ ಇನ್ನೂ ಉನ್ನತ ಸ್ಥಾನಮಾನ ಹಾಗೂ ಅಧಿಕಾರ ವಿಜಯೇಂದ್ರ ಅವರಿಗೆ ಸಿಗಲಿ ಎಂದು ಶುಭ ಹಾರೈಸಿದರು.

ಮುಡಾ ಮಾಜಿ ನಿರ್ದೇಶಕಿ ಲಕ್ಷ್ಮಿದೇವಿ, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ಶಿವರಾಜು, ಮಹದೇವಸ್ವಾಮಿ, ಸದಸ್ಯ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಎಂ.ವಿಜಯಕುಮಾರ್, ಯುವ ಮೋರ್ಚಾ ಅಧ್ಯಕ್ಷ ಎಸ್.ಮೋಹನ ಕುಮಾರ, ಕೆ.ವಿ.ಶಿವಕುಮಾರ್, ಎಸ್ಸಿ ಮೋರ್ಚಾ ಅಧ್ಯಕ್ಷ ಎ.ಶಿವಕುಮಾರ್, ಮಾಜಿ ಅಧ್ಯಕ್ಷ ಚೌಹಳ್ಳಿ ಸಿದ್ದರಾಜು, ಮುಖಂಡರಾದ ಬಿ.ಮಹದೇವಸ್ವಾಮಿ, ಸಿ.ಬಿ.ಹುಂಡಿ ಸಿದ್ದು, ಕೃಷ್ಣಮೂರ್ತಿ ಹಾಗೂ ಇನ್ನಿತರರಿದ್ದರು.

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.52 ಕೋಟಿ ರೂ. ಸಂಗ್ರಹ

ನಂಜನಗೂಡು, ನ.5– ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಹುಂಡಿಯಲ್ಲಿ 1.52 ಕೋಟಿ ರೂ. ಸಂಗ್ರಹವಾಗಿದೆ ಎಂದು ದೇವಾಲಯದ ಇಒ ವೆಂಕಟೇಶ್ ಪ್ರಸಾದ್ ತಿಳಿಸಿದ್ದಾರೆ.



ದೇವಾಲಯದ ಆವರಣದಲ್ಲಿ 30 ಹುಂಡಿಗಳ ಎಣಿಕೆ ಕಾರ್ಯ ನಡೆಯಿತು. ಈ ವೇಳೆ ಹುಂಡಿಯಲ್ಲಿ 1,52,75,136 ರೂ. ಸಂಗ್ರಹವಾಗಿದೆ. ಅಲ್ಲದೇ 167 ಗ್ರಾಂ ಚಿನ್ನ, 9 ಕೆಜಿ 150 ಗ್ರಾಂ ಬೆಳ್ಳಿ, 64 ವಿದೇಶಿ ನೋಟುಗಳು, ನಿಷೇಧಿತ 1000 ರೂ. ಮುಖಬೆಲೆಯ 7 ನೋಟುಗಳು ಹಾಗೂ 500 ರೂ. ಮುಖಬೆಲೆಯ 46 ನೋಟುಗಳು ದೊರೆತಿದ್ದು, ಇದರ ಮೌಲ್ಯ 30000 ರೂ. ಎಂದು ತಿಳಿಸಿದ್ದಾರೆ.

ಹುಂಡಿ ಎಣಿಕೆ ಕಾರ್ಯದಲ್ಲಿ ನಗರದ ಬ್ಯಾಂಕ್ ಆಫ್ ಬರೋಡಾ ಮ್ಯಾನೇಜರ್ ಟಿ.ಕೆ.ನಾಯಕ್ ಹಾಗೂ ಸಿಬ್ಬಂದಿ ಮತ್ತು ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು. ಹುಂಡಿ ಎಣಿಕೆ ಬಳಿಕ ನಂಜನಗೂಡಿನ ಬ್ಯಾಂಕ್ ಆಫ್ ಬರೋಡಾ ಶಾಖೆಗೆ ಹಣ ಜಮಾ ಮಾಡಲಾಯಿತು. ಈ ವೇಳೆ ಮೈಸೂರು ಉಪ ವಿಭಾಗಾಧಿಕಾರಿ ಕಮಲಾಬಾಯಿ, ಲೆಕ್ಕಾಧಿಕಾರಿ ಗುರುಮಲ್ಲಯ್ಯ, ಚಾಮುಂಡೇಶ್ವರಿ ದೇವಾಲಯದ ಇಒ ದಿನೇಶ್, ದೇವಾಲಯದ ಸಿಬ್ಬಂದಿ ಯಮುನಾ ಸೇರಿದಂತೆ ಇನ್ನಿತರರಿದ್ದರು.

ರೈತ ಮಹಿಳೆಯರ ಸಬಲೀಕರಣಕ್ಕೆ ಕೋಳಿ ಮರಿ ವಿತರಣೆ

ಶಾಸಕ ಬಿ.ಹರ್ಷವರ್ಧನ್

ನಂಜನಗೂಡು, ನ.5– ಗ್ರಾಮೀಣ ರೈತ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರ ಪಶು ವೈದ್ಯಕೀಯ ಇಲಾಖೆ ಮತ್ತು ಸಹಕಾರ ಕುಕ್ಕುಟ ಮಹಾಮಂಡಳ ವತಿಯಿಂದ ಕೋಳಿ ಮರಿಗಳನ್ನು ವಿತರಿಸಲಾಗುತ್ತಿದೆ. ಈ ಯೋಜನೆ ಸದುಪಯೋಗ ಪಡಿಸಿಕೊಂಡು ಮಹಿಳೆಯರು ಆರ್ಥಿಕವಾಗಿ ಮುಂದೆ ಬರಬೇಕು ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದ ಆವರಣದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆ ವತಿಯಿಂದ 106 ಫಲಾನುಭವಿಗಳಿಗೆ ನಾಟಿಕೋಳಿ ಮರಿ ವಿತರಿಸಿ ಮಾತನಾಡಿದ ಅವರು, ಕೃಷಿ ಜೊತೆಗೆ ಹೈನುಗಾರಿಕೆ ಅಳವಡಿಸಿಕೊಂಡಲ್ಲಿ ರೈತರು ಆರ್ಥಿಕ ಲಾಭ ಗಳಿಸಬಹುದು. ಹೈನುಗಾರಿಕೆ ಉತ್ತೇಜಿಸಲು ಸರ್ಕಾರ ಅನೇಕ ಕಾರ್ಯಕ್ರಮ ರೂಪಿಸಿದೆ. ಕುರಿ, ಹಸು ಸಾಕಾಣಿಕೆಗೆ ಸಾಲ ಸೌಲಭ್ಯ ಒದಗಿಸುತ್ತಿದೆ. ಅಲ್ಲದೇ ಹಾಲಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ರೈತ ಮಹಿಳೆಯರನ್ನು ಆರ್ಥಿಕವಾಗಿ ಮುಂದೆ ತರಬೇಕೆಂಬ ಉದ್ದೇಶದಿಂದ ನಾಟಿ ಕೋಳಿ ಮರಿಗಳ ವಿತರಣೆ ಮಾಡಲಾಗುತ್ತಿದೆ. ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ಮಹಿಳೆಯರು ಆರ್ಥಿಕವಾಗಿ ಮುಂದೆ ಬರಬೇಕು ಎಂದು ಕರೆ ನೀಡಿದರು.



ಪಶು ವೈದ್ಯಕೀಯ ಇಲಾಖೆ ಸಹಾಯಕ ನಿರ್ದೇಶಕ ಶರಣಬಸಪ್ಪ ಮಾತನಾಡಿ, ತಾಲೂಕಿನ ವರುಣಾ ಮತ್ತು ನಂಜನಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 106 ಫಲಾನುಭವಿಗಳಿಗೆ ತಲಾ 20 ನಾಟಿ ಕೋಳಿ ಮರಿಗಳನ್ನು ವಿತರಣೆ ಮಾಡಲಾಗುತ್ತಿದೆ. ನಂಜನಗೂಡು ಕ್ಷೇತ್ರ ವ್ಯಾಪ್ತಿಯಲ್ಲಿ 65 ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ ಎಂದರು.

ಈ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಮುಖಂಡರಾದ ರಾಜು, ದೇವಪ್ರಕಾಶ್, ತಾಪಂ ಮಾಜಿ ಸದಸ್ಯ ಬಿ.ಎಸ್.ರಾಮು, ಶ್ರೀಕಂಠ ಸೇರಿದಂತೆ ಇತರರಿದ್ದರು.

ಸ್ವಾವಲಂಬಿ ಬದುಕಿಗೆ ಧರ್ಮಸ್ಥಳ ಸಂಸ್ಥೆ ಸಹಕಾರಿ



ಸರಗೂರು, ನ.5– ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸಹಕಾರಿಯಾಗಿದೆ ಎಂದು ಯರಹಳ್ಳಿ ಗ್ರಾಮದ ರೈತ ನವೀನ್‌ಗೌಡ ಅಭಿಪ್ರಾಯಪಟ್ಟರು.

ಧರ್ಮಸ್ಥಳ ಸಂಸ್ಥೆಯ ಜ್ಞಾನವಿಕಾಸ ಯೋಜನೆಯಡಿ ಹೆಚ್.ಡಿ.ಕೋಟೆ ತಾಲೂಕಿನ ಹೆಚ್.ಮಟಕೆರೆ ಗ್ರಾಮದ ಮಹಿಳಾ ಸದಸ್ಯರಿಗೆ ಸರಗೂರು ತಾಲೂಕಿನ ಕಂದೇಗಾಲ ಗ್ರಾಮದ ಪ್ರಜ್ಞಾವಾದಿ ಗ್ರಾಮದ ರಾಜು ಅವರ ತೋಟದಲ್ಲಿ ಆಯೋಜಿಸಿದ್ದ ಒಂದು ದಿನದ ಪ್ರವಾಸ ಅಧ್ಯಯನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾವಯವ ಕೃಷಿ, ಅದರಿಂದಾಗುವ ಉಪಯೋಗ, ಮಿಶ್ರ ಬೆಳೆಯಿಂದ ಅಧಿಕ ಲಾಭಗಳಿಸುವ ಬಗ್ಗೆ, ಕೃಷಿ ಬೆಳೆಗಳನ್ನು ಮಧ್ಯವರ್ತಿಗಳ ಸಹಾಯವಿಲ್ಲದೇ ಮಾರಾಟ ಮಾಡುವುದು, ಹೈನುಗಾರಿಕೆ, ಟೈಲರಿಂಗ್, ಬ್ಯೂಟಿಷಿಯನ್, ಕರಕುಶಲ ತಯಾರಿಕೆ ತರಬೇತಿ ಪಡೆಯುವ ಮೂಲಕ ಮಹಿಳೆಯರು ಆರ್ಥಿಕವಾಗಿ ಸದೃಢರಾಗುವ ಬಗ್ಗೆ ತಿಳಿಸಿಕೊಟ್ಟರು.

ಕಂದೇಗಾಲ ಗ್ರಾಮದ ರೈತ ಮುಖಂಡರಾದ ಮಂಜುನಾಥ್, ಲೋಕೇಶ್, ವೀರಣ್ಣ, ಬೇಬಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಅಶ್ವಿನಿ, ಸೇವಾ ಪ್ರತಿನಿಧಿ ಸುನೀತಾ, ಲತಾ, ಮಂಜುಳ, ಭಾರತಿ, ದೇವಮಣಿ, ನಾಗಮ್ಮ, ಮಹಿಳೆಯರು ಉಪಸ್ಥಿತರಿದ್ದರು.

ಹುಣಸೂರು ಪೌರಾಯುಕ್ತೆ ಮಾನಸ ಅಧಿಕಾರ ಸ್ವೀಕಾರ



ಹುಣಸೂರು, ನ.5– ಹುಣಸೂರು ನಗರಸಭೆ ನೂತನ ಪೌರಾಯುಕ್ತರಾಗಿ ಎಂ.ಮಾನಸ ಅಧಿಕಾರ ವಹಿಸಿಕೊಂಡರು.

ಈ ಹಿಂದಿನ ಪೌರಾಯುಕ್ತ ಖಲೀಲ್ ಸಾಬ್ ಅವರು ಬಡ್ತಿ ಹೊಂದಿ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಶ್ರೀರಂಗಪಟ್ಟಣ ಪುರಸಭೆ ಮುಖ್ಯಾಧಿಕಾರಿಯಾಗಿದ್ದ ಎಂ.ಮಾನಸ ಅವರನ್ನು ನಿಯೋಜಿಸಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ.ಮಂಜುನಾಥ್ ಆದೇಶ ಹೊರಡಿಸಿದ್ದರು.

ಚಂದ್ರ ಗ್ರಹಣ: ಅಂದು ಮಧ್ಯಾಹ್ನ ದೇವಿ ದರ್ಶನ ಇಲ್ಲ

ಸರಗೂರು, ನ.5– ಚಂದ್ರ ಗ್ರಹಣ ಹಿನ್ನೆಲೆಯಲ್ಲಿ ನ.8ರಂದು ಮಧ್ಯಾಹ್ನದ ಬಳಿಕ ತಾಲೂಕಿನ ಶ್ರೀಚಿಕ್ಕದೇವಮ್ಮನವರ ಬೆಟ್ಟದಲ್ಲಿ ದೇವರ ದರ್ಶನ ಇರುವುದಿಲ್ಲ ಎಂದು ಕುಂದೂರು ಚಿಕ್ಕದೇವಮ್ಮನ ಬೆಟ್ಟದ ಪಾರುಪತ್ತೇದಾರ್ ಎನ್.ಮಹದೇವಸ್ವಾಮಿ ತಿಳಿಸಿದ್ದಾರೆ. ಅಂದು ಮಧ್ಯಾಹ್ನ 2 ಗಂಟೆಗೆ ಚಂದ್ರಗ್ರಹಣ ಪ್ರಾರಂಭವಾಗುವುದರಿಂದ ದೇವಾಲಯದ ಸಂಪ್ರದಾಯದಂತೆ ಸ್ಪರ್ಶ ಕಾಲ ಮತ್ತು ಮೋಕ್ಷ ಕಾಲದಲ್ಲಿ ವಿಶೇಷ ಪೂಜೆ ನಡೆಯುವುದರಿಂದ ಭಕ್ತರಿಗೆ ಸದರಿ ದಿನದಂದು ಮಧ್ಯಾಹ್ನ 1 ಗಂಟೆ ನಂತರ ದೇವರ ದರ್ಶನವಿರುವುದಿಲ್ಲ. ಸಾರ್ವಜನಿಕರು ಸಹಕರಿಸುವಂತೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದು ಸಾಲಿಗ್ರಾಮಕ್ಕೆ ಮೃತ್ತಿಕೆ ಸಂಗ್ರಹ ರಥಯಾತ್ರೆ

ಭೇರ್ಯ, ನ.5– ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಉದ್ಘಾಟನೆ ಸಂಬಂಧ ಸಂಗ್ರಹಿಸುತ್ತಿರುವ ಮೃತ್ತಿಕೆ ಸಂಗ್ರಹ ರಥಯಾತ್ರೆ ನ.6ರಂದು ಬೆಳಗ್ಗೆ 10 ಗಂಟೆಗೆ ಪಿರಿಯಾಪಟ್ಟಣ ಮೂಲಕ ಸಾಲಿಗ್ರಾಮ ತಾಲೂಕಿನ ಹಾಡ್ಯ ಗೇಟ್ ಪ್ರವೇಶಿಸಲಿದೆ.

ಕೆ.ಆರ್.ನಗರ, ಸಾಲಿಗ್ರಾಮ ತಾಲೂಕಿನ ಎಲ್ಲಾ ಗ್ರಾಪಂಗಳಿಗೆ ರಥಯಾತ್ರೆ ಆಗಮಿಸಲಿದ್ದು, ಸಮಾಜದ ಮುಖಂಡರು ಹಾಗೂ ನಾಡಪ್ರಭು ಕೆಂಪೇಗೌಡರ ಸಂಘದ ಎಲ್ಲಾ ಪದಾಧಿಕಾರಿಗಳು, ಅಭಿಮಾನಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸ್ತ್ರೀ ಶಕ್ತಿ ಮಹಿಳಾ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ ಮನವಿ ಮಾಡಿದ್ದಾರೆ.

ಸಾಲಿಗ್ರಾಮ ತಾಲೂಕು ಹಾಡ್ಯ, ಹಳೆಯೂರು, ಚುಂಚನಕಟ್ಟೆ ಮೂಲಕ ಸಾಲಿಗ್ರಾಮ ಪಟ್ಟಣ, ಮಿರ್ಲೆ, ಭೇರ್ಯ, ಹೊಸ ಅಗ್ರಹಾರ, ಮಾರ್ಗವಾಗಿ ಅರ್ಜುನಹಳ್ಳಿ, ಹಂಪಾಪುರ, ಹೆಬ್ಬಾಳು ಮಾರ್ಗದಲ್ಲಿ ಕೆ.ಆರ್.ನಗರ ಪಟ್ಟಣದಲ್ಲಿ ವಾಸ್ತವ್ಯ ಹೂಡಿ ನಂತರ ಲಾಳಂದೇವನಹಳ್ಳಿ ಗ್ರಾಪಂ ಮೂಲಕ ಮೈಸೂರು ತಲುಪಲಿದೆ ಎಂದು ಅಧ್ಯಕ್ಷ ಮಿರ್ಲೆ ಅಣ್ಣೇಗೌಡ ತಿಳಿಸಿದ್ದಾರೆ.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ನಂಜನಗೂಡು, ನ.5– ತಾಲೂಕಿನ ನಂಜನಗೂಡು, ತಾಂಡ್ಯ, ದೇವನೂರು ಮತ್ತು ಸುತ್ತೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ನ. 6 ಮತ್ತು 7 ರಂದು ವಿದ್ಯುತ್ ವ್ಯತ್ಯಯವಾಗಲಿದೆ.

ನ.6ರಂದು ನಂಜನಗೂಡು ಪಟ್ಟಣ, ಕಲ್ಲಳ್ಳಿ ಕೈಗಾರಿಕಾ ಪ್ರದೇಶ, ನೆಸ್ಲೆ, ಎಟಿ ಅಂಡ್ ಎಸ್, ಮ್ಯಾಕ್ಸ್ ಫಾರ್ಮಾ, ದೇವಿರಮ್ಮನಹಳ್ಳಿ, ದೇಬೂರು, ದೇವರಸನಹಳ್ಳಿ, ಚಿಕ್ಕಯ್ಯನಛತ್ರ, ತಾಂಡ್ಯ ಕೈಗಾರಿಕಾ ಪ್ರದೇಶ, ಬಾಲಾಜಿ, ಇಂಡಸ್, ಗಣಪತಿ, ಕೆಐಎಡಿಬಿ 1 ಅಂಡ್ 2, ಕೆಂಪಿಸಿದ್ದನಹುಂಡಿ, ಹುಳಿಮಾವು, ಹದಿನಾರು, ಹೊಸಕೋಟೆ, ತುಂನೇರಳೆ ಗ್ರಾಮಗಳಲ್ಲಿ ಹಾಗೂ ನ.7 ರಂದು ತಗಡೂರು, ಬದನವಾಳು, ಚುಂಚನಹಳ್ಳಿ, ಗಟ್ಟವಾಡಿಪುರ, ಕಾರ್ಯ, ಅಳಗಂಚಿ, ಕೋಣನೂರು, ನೇರಳೆ, ಹೆಮ್ಮರಗಾಲ, ಕೌವಲಂದೆ ಗ್ರಾಮ, ನಗರ್ಲೆ, ಬಿಳಿಗೆರೆ, ಮಲ್ಲೂಪುರ, ಸುತ್ತೂರು ಗ್ರಾಮ ಮತ್ತು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಇಇ ದೇವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿ.ನರಸೀಪುರದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



ತಿ.ನರಸೀಪುರ, ನ5– ರಾಮಾಯಣ ಮಹಾಕಾವ್ಯದಲ್ಲಿ ಮಹರ್ಷಿ ವಾಲ್ಮೀಕಿ ಅವರು ತಂದೆ, ತಾಯಿ, ಮಗ, ಸಹೋದರ ಹೀಗೆ ಪ್ರತಿಯೊಂದು ವ್ಯಕ್ತಿತ್ವವನ್ನು ನಿರೂಪಿಸುವ ಮೂಲಕ ಭಾರತೀಯರ ಭವ್ಯ ಬದುಕನ್ನು ತೋರಿಸಿಕೊಟ್ಟಿದ್ದಾರೆ ಎಂದು ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.

ಪಟ್ಟಣದ ತಾಲೂಕು ನಾಯಕರ ಸಂಘದ ವಾಲ್ಮೀಕಿ ಭವನದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಮಹಿಳಾ ಸಂಘದಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀರಾಮಾಯಣದಂತಹ ದೃಶ್ಯ ಕಾವ್ಯವನ್ನು ಸಮಸ್ತ ಭಾರತೀಯರಿಗೆ ಬಳುವಳಿಯಾಗಿ ನೀಡಿದ ವಾಲ್ಮೀಕಿ ಅವರು ಭಾರತೀಯರ ಸಂಸ್ಕೃತಿಗೆ ಮುನ್ನುಡಿ ಹಾಕಿಕೊಟ್ಟಿದ್ದಾರೆ ಎಂದರು.

ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೀಸಲಾತಿ ಪ್ರಮಾಣ ಹೆಚ್ಚಿಸುವ ಬೇಡಿಕೆಗೆ ಪಟ್ಟು ಹಿಡಿದು, ವಾಲ್ಮೀಕಿ ಶ್ರೀಗಳು ಸೇರಿದಂತೆ ಹಲವು ನಾಯಕರ ಹೋರಾಟದ ಫಲವಾಗಿ ರಾಜ್ಯ ಸರ್ಕಾರ ಮೀಸಲಾತಿ ಪ್ರಮಾಣ ಏರಿಕೆ ಮಾಡುವ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿರುವ ಸಂತಸದ ಸಂದರ್ಭ ಹೋರಾಟಕ್ಕೆ ಶ್ರಮಿಸಿದ ಪ್ರತಿಯೊಬ್ಬರೂ ಅಭಿನಂದನಾರ್ಹರು ಎಂದರು.

ಜೆಡಿಎಸ್ ಯುವ ಘಟಕದ ಉಪಾಧ್ಯಕ್ಷ ನೀಲಸೋಗೆ ಮಹೇಶ್ ಮಾತನಾಡಿದರು. ಇದೇ ವೇಳೆ ಸಮುದಾಯದ ಹಿರಿಯರನ್ನು ಸನ್ಮಾನಿಸಲಾಯಿತು. ತಾಲೂಕು ನಾಯಕರ ಸಂಘದ ಅಧ್ಯಕ್ಷ ಚಿಕ್ಕಣ್ಣ, ಕಸಾಪ ಅಧ್ಯಕ್ಷ ಪುಟ್ಟಸ್ವಾಮಿ, ಪುರಸಭೆ ಸದಸ್ಯ ಮೋಹನ್.ಕೆ., ನಂಜುಂಡಸ್ವಾಮಿ, ಜೆಡಿಎಸ್ ಯುವ ಮುಖಂಡ ಸೋಮುದಾದ, ವಿನಾಯಕ ಲಾಡ್ಜ್ ಗೋವಿಂದ್, ಬಂಕ್ ಮಹದೇವ, ಕೃಷ್ಣಮೂರ್ತಿ, ಪ್ರಕಾಶ್, ಮಹಿಳಾ ಸಂಘದ ಅಧ್ಯಕ್ಷೆ ಸುಮಿತ್ರಾ ಸೇರಿದಂತೆ ಇತರರಿದ್ದರು.

ನಾಗಾಪುರ ಗಿರಿಜನ ಪುನರ್ವಸತಿ ಕೇಂದ್ರದಲ್ಲಿ

ಮನೆ ನಿರ್ಮಾಣ ಕಾಮಗಾರಿ: ಶಾಸಕರಿಂದ ಪರಿಶೀಲನೆ

ಹನಗೋಡು, ನ.5– ಇಲ್ಲಿನ ನಾಗಾಪುರ ಗಿರಿಜನ ಪುನರ್ವಸತಿ ಕೇಂದ್ರದ 4ನೇ ಬ್ಲಾಕ್‌ನಲ್ಲಿ ನಡೆಯುತ್ತಿರುವ ಮನೆಗಳ ನಿರ್ಮಾಣ ಕಾಮಗಾರಿಯನ್ನು ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಜಿಪಂ ಸಿಇಓ ಪೂರ್ಣಿಮಾ ಶನಿವಾರ ಪರಿಶೀಲಿಸಿದರು.

ನಂತರ ಗಿರಿಜನ ಆಶ್ರಮ ಶಾಲಾವರಣದಲ್ಲಿ ನಡೆದ ಪಿಡಿಓಗಳು ಹಾಗೂ ವಸತಿ ಫಲಾನುಭವಿಗಳ ಸಭೆಯಲ್ಲಿ ಮಾತನಾಡಿದ ಶಾಸಕ ಹೆಚ್.ಪಿ.ಮಂಜುನಾಥ್, ಹುಣಸೂರು ತಾಲೂಕಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 28 ಹಾಡಿಗಳ 530 ಕುಟುಂಬಗಳಿಗೆ ಮನೆ ನಿರ್ಮಿಸಿ ಕೊಡಲಾಗುತ್ತಿದ್ದು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ರಾಜೀವ್ ಗಾಂಧಿ ವಸತಿ ನಿಗಮದಿಂದ ಪ್ರತಿ ಮನೆಗೆ 3.75 ಲಕ್ಷ ರೂ. ನೀಡಲಾಗುತ್ತಿದೆ. ರವಿಶಂಕರ್ ಗುರೂಜಿಯವರ ಹಾರ್ಟ್ ಆಫ್ ಲೀವಿಂಗ್‌ನ ವರಾಹ ಗ್ರೂಪ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಮನೆ ನಿರ್ಮಾಣ ಮಾಡಲಾಗುತ್ತಿದೆ. ಈಗಾಗಲೇ ನಾಗಾಪುರ 4ನೇ ಘಟಕದಲ್ಲಿ ಪ್ರಾಯೋಗಿಕವಾಗಿ 4 ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಈ ಮನೆಗಳು ಒಪ್ಪಿಗೆ ಆದಲ್ಲಿ ಮಾತ್ರ ಕಂಪನಿಯವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಎಲ್ಲಾ ಮನೆಗಳನ್ನು ನಿರ್ಮಾಣ ಮಾಡಲಾಗುತ್ತದೆ ಎಂದರು.



ಈ ಯೋಜನೆಯಡಿ 4 ಹಂತದಲ್ಲಿ ಅನುದಾನ ಬಿಡುಗಡೆಯಾಗಲಿದ್ದು, ಗಿರಿಜನರು ತಾವೇ ಮುಂದೆ ನಿಂತು ಮನೆ ನಿರ್ಮಾಣಕ್ಕೆ ಮುಂದಾದಲ್ಲಿ ಅಧಿಕಾರಿಗಳು ಸಹಕಾರ ನೀಡಲಿದ್ದಾರೆ. ಜಿಪಂ, ತಾಲೂಕು ಆಡಳಿತ, ಗ್ರಾಪಂ, ಬ್ಯಾಂಕುಗಳು, ಫಲಾನುಭವಿಗಳು ಒಟ್ಟಾಗಿ ಸೇರಿ ಕಾರ್ಯ ಪ್ರವೃತ್ತರಾದಾಗ ಮಾತ್ರ ಈ ವಿಶಿಷ್ಟ ಯೋಜನೆ ಕಾರ್ಯಗತಗೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಎಲ್ಲರೂ ಸಕಾಲದಲ್ಲಿ ತಮ್ಮ ಕರ್ತವ್ಯ ನಿರ್ವಹಿಸಬೇಕೆಂದು ಸಲಹೆ ನೀಡಿದರು.

ಕಾಮಗಾರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿದ ಜಿಪಂ ಸಿಇಓ ಪೂರ್ಣಿಮಾ, ಮನೆಗಳ ಕಾಮಗಾರಿ ಮುಗಿದ ತಕ್ಷಣ ಫಲಾನುಭವಿಗಳಿಗೆ ಜಿಪಿಎಸ್ ಮಾಡಿಕೊಡಬೇಕೆಂದು ಪಿಡಿಓಗಳಿಗೆ ಸೂಚಿಸಿದ ಅವರು, ಮನೆ ನಿರ್ಮಾಣ ಯೋಜನೆ ವಿಶಿಷ್ಟ ರೀತಿ ಕಾರ್ಯರೂಪಗೊಳ್ಳುತ್ತಿರುವುದರಿಂದ ಮನೆ ನಿರ್ಮಾಣ ಲೈಸನ್ಸ್ ಶುಲ್ಕವನ್ನು 100 ರೂ. ಮಾತ್ರ ಪಡೆಯಿರಿ. ಜೊತೆಗೆ ಶೌಚಾಲಯ ನಿರ್ಮಾಣ ಗುಂಡಿ ಸಾಮಗ್ರಿಗಳ ಖರೀದಿಗೆ ಶೇ.25 ರ ಅನುದಾನ ನೀಡಬೇಕೆಂದು ಸೂಚಿಸಿ ಬ್ಯಾಂಕ್ ಅಧಿಕಾರಿಗಳು ವಸತಿ ಯೋಜನೆ ಹಣವನ್ನು ಬೇರೆ ಯಾವುದೇ ಸಾಲಕ್ಕೆ ಜಮಾ ಮಾಡಿಕೊಳ್ಳದೆ ಫಲಾನುಭವಿಗಳ ಮನೆ ನಿರ್ಮಾಣ ಕಾರ್ಯಕ್ಕೆ ಸಹಕರಿಸಬೇಕೆಂದು ಸ್ಥಳದಲ್ಲಿದ್ದ ಲೀಡ್ ಬ್ಯಾಂಕ್ ವ್ಯವಸ್ಥಾಪಕ ದಿನೇಶ್ ಅವರಿಗೆ ಸಲಹೆ ನೀಡಿದರು.

ಈ ವೇಳೆ ತಾಪಂ ಇಓ ಮನು ಬಿ.ಕೆ, ಎಸ್‌ಟಿ ವರ್ಗಗಳ ತಾಲೂಕು ಅಭಿವೃದ್ಧಿ ಅಧಿಕಾರಿ ಬಸವರಾಜು, ಲೀಡ್ ಬ್ಯಾಂಕ್ ವ್ಯವಸ್ಥಾಪಕ ದಿನೇಶ್, ಜಿಪಂ ಎಇಇ ನರಸಿಂಹಯ್ಯ, ವಸತಿ ನಿಗಮದ ಅಧಿಕಾರಿ ಲೋಕೇಶ್, ಗುರುಪುರ ಗ್ರಾಪಂ ಅಧ್ಯಕ್ಷೆ ರಾಧ, ಕಿರಂಗೂರು ಗ್ರಾಪಂ ಅಧ್ಯಕ್ಷೆ ನಿರ್ವಾಣಿ, ಮಾಜಿ ಅಧ್ಯಕ್ಷ ಪ್ರಶಾಂತ್, ಆದಿವಾಸಿ ಮುಖಂಡರಾದ ಜೆ.ಟಿ.ರಾಜಪ್ಪ, ಚಂದ್ರು, ಶಿವಣ್ಣ, ವಸಂತ, ರಾಘು ಸೇರಿದಂತೆ ಅನೇಕರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬನಾರಸ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ಲೈಲ್ ಲೈಲ್ ಕ್ರೊಕಡೈಲ್ (ಇಂ): ಸಂ.4.10ಕ್ಕೆ, ಫೋನ್ ಭೂತ್ (ಹಿಂ): ರಾ.7.20ಕ್ಕೆ, ಡಬ್ಬಲ್ XL (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಮಿಲಿ (ಹಿಂ): ಬೆ.10.45ಕ್ಕೆ, ರಾ.7.20ಕ್ಕೆ, ನಿಥಮ್ ಒರು ವಾನಂ (ತ): ಮ.1.15ಕ್ಕೆ, ಕಾಫಿ ವಿತ್ ಕಾದಲ್ (ತ): ಸಂ.4.25ಕ್ಕೆ, ಊರ್ವಶಿವೋ ರಾಕ್ಷಸಿವೋ (ತೆ): ರಾ.9.50ಕ್ಕೆ.
ಸ್ಕ್ರೀನ್ 4	ಗಂಧದಗುಡಿ (ಕ): ಬೆ.11.10ಕ್ಕೆ, ಮ.1.30ಕ್ಕೆ, ಮ.3.40ಕ್ಕೆ, ಸಂ.5.40ಕ್ಕೆ, ರಾ.7.45ಕ್ಕೆ, ಸಟರ್‌ಡೇ ನೈಟ್ (ಮ): ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಂಧದ ಗುಡಿ (ಕ): ಬೆ.9.45ಕ್ಕೆ, ಮ.2.55ಕ್ಕೆ, ರಾ.8.10ಕ್ಕೆ, ಕಾಂತಾರ (ಕ): ಬೆ.11.50ಕ್ಕೆ, ಸಂ.5.05ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಫೋನ್ ಭೂತ್ (ಹಿಂ): ಬೆ.9.15ಕ್ಕೆ, ರಾ.10.30ಕ್ಕೆ, ಗಂಧದ ಗುಡಿ (ಕ): ಮ.12ಕ್ಕೆ, ಸಂ.5.15ಕ್ಕೆ, ಸೆಪ್ಟೆಂಬರ್ 13 (ಕ): ಮ.2.10ಕ್ಕೆ, ಕಾಂತಾರ (ಕ): ರಾ.7.25ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.9.20ಕ್ಕೆ, ಮ.2.35ಕ್ಕೆ, ಲೈಲ್ ಲೈಲ್ ಕ್ರೊಕಡೈಲ್ (ಇಂ): ಮ.12.20ಕ್ಕೆ, ರಾ.7.50ಕ್ಕೆ, ನೀ ಮಾಯೆಯೊಳಗೊ ಮಾಯೆ ನಿನ್ನೊಳಗೊ (ಕ): ಸಂ.5.40ಕ್ಕೆ, ಕಾಫಿ ವಿತ್ ಕಾದಲ್ (ತ): ರಾ.10.10ಕ್ಕೆ.
ಸ್ಕ್ರೀನ್ 4	ಬನಾರಸ್ (ಕ): ಬೆ.10.10ಕ್ಕೆ, ಸಂ.6.55ಕ್ಕೆ, ಕಂಬ್ಳಿಹುಳ (ಕ): ಮ.1.10ಕ್ಕೆ, ಫೋನ್ ಭೂತ್ (ಹಿಂ): ಸಂ.4.05ಕ್ಕೆ, ಊರ್ವಶಿವೋ ರಾಕ್ಷಸಿವೋ (ತೆ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕಂಬ್ಳಿಹುಳ (ಕ): ಬೆ.10.30ಕ್ಕೆ, ನಹೀ ಜ್ಞಾನೇನ ಸದೃಶಂ (ಕ): ಮ.1.15ಕ್ಕೆ, ನೀ ಮಾಯೆಯೊಳಗೊ ಮಾಹೆ ನಿನ್ನೊಳಗೊ (ಕ): ಸಂ.4.10ಕ್ಕೆ, ಫೋನ್ ಭೂತ್ (ಹಿಂ): ಸಂ.6.30ಕ್ಕೆ, ಸರ್ದಾರ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.30ಕ್ಕೆ, ಮ.1.30ಕ್ಕೆ, ಸಂ.4.30ಕ್ಕೆ, ರಾ.7.54ಕ್ಕೆ.
ಸ್ಕ್ರೀನ್ 3	ಗಂಧದ ಗುಡಿ (ಕ): ಬೆ.10.45ಕ್ಕೆ, ಮ.1ಕ್ಕೆ, ಸಂ.4ಕ್ಕೆ, ಸಂ.6.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಬನಾರಸ್ (ಕ): ಬೆ.10.30ಕ್ಕೆ, ಸಂ.4.15ಕ್ಕೆ, ಫೋನ್ ಭೂತ್ (ಹಿಂ): ಮ.1.30ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಕಾಂತಾರ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದಗುಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬನಾರಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬನಾರಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಾಂತಾರ (ತ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಬನಾರಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸರ್ದಾರ್ (ತ)	4 ಪ್ರದರ್ಶನಗಳು
ಪ್ರಭಾ	
ಊರ್ವಶಿವೋ ರಾಕ್ಷಸಿವೋ (ತೆ)	4 ಪ್ರದರ್ಶನಗಳು

ಪತ್ರಕರ್ತರಿಗೆ ಉಚಿತ ಬ್ಯಾಗ್ ವಿತರಣೆ



ಹೆಚ್.ಡಿ.ಕೋಟೆ, ನ.5– ಸಮಾಜ ಸೇವಕ ಸಿರಾಜ್ ಅಭಿಮಾನಿ ಬಳಗದಿಂದ ಕೋಟೆ, ಸರಗೂರು ತಾಲೂಕು ಪತ್ರಕರ್ತರಿಗೆ ಉಚಿತವಾಗಿ ಬ್ಯಾಗ್ ವಿತರಿಸಲಾಯಿತು.

ಸಿರಾಜ್ ಅಭಿಮಾನಿ ಬಳಗದ ಸದಸ್ಯ ಪ್ರಸನ್ನ ಮಾತನಾಡಿ, ಸಮಯದ ಮಿತಿ ಇಲ್ಲದೇ, ನೊಂದವರ ಧ್ವನಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಪತ್ರಕರ್ತರಿಗಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೊರೊನಾ ಲಾಕ್‌ಡೌನ್ ವೇಳೆ ಸಿರಾಜ್ ಅವರು ತಾಲೂಕಿನ ನಿರ್ಗತಿಕರು, ಕೂಲಿ ಕಾರ್ಮಿಕರು ಸೇರಿದಂತೆ ನಿತ್ಯ ಸಾವಿರಾರು ಮಂದಿಗೆ ಉಪಾಹಾರ. ಹಾಡಿ ಗಿರಿಜನರು ಹಾಗೂ ಸಾವಿರಾರು ಬಡವರಿಗೆ ಆಹಾರ ಕಿಟ್ ವಿತರಿಸಿದ್ದಾರೆ. ಅಲ್ಲದೇ ತಾಲೂಕಿನ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವ ಮೂಲಕ ವಿದ್ಯಾರ್ಥಿಗಳ ಬೆನ್ನೆಲುಬಾಗಿ ನಿಂತು ಸಮಾಜ ಸೇವೆಯಲ್ಲಿ ತೊಡಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ಉಪಾಧ್ಯಕ್ಷ ಮಂಜು ಕೋಟೆ, ಪ್ರಧಾನ ಕಾರ್ಯದರ್ಶಿ ನಾಗರಾಮ, ಸಹ ಕಾರ್ಯದರ್ಶಿ ಬೀಚನಹಳ್ಳಿ ಮಂಜು, ಖಜಾಂಚಿ ದೊಡ್ಡಸಿದ್ದು, ನಿರ್ದೇಶಕರಾದ ಪುರುಷೋತ್ತಮ, ಆನಂದ, ಚಿಕ್ಕಣ್ಣಗೌಡ, ಮಹೇಶ, ಸದಸ್ಯರಾದ ರೇಣುಕಾ, ಪ್ರಮೋದ್, ಜಶೀಲ, ರಘು, ಬಸವರಾಜ್, ನಿಂಗಣ್ಣ, ಶ್ರೀನಿಧಿ, ಜಿ.ರವಿಕುಮಾರ್, ವಾಸುಕಿ ನಾಗೇಶ್, ದಾಸೇಗೌಡ, ರಂಗರಾಜು, ಪುಟ್ಟರಾಜು, ರವಿ ಆರಾಧ್ಯ, ಸಿರಾಜ್ ಸಮಾಜ ಸೇವಕ ಅಭಿಮಾನಿ ಬಳಗದ ಸದಸ್ಯರಾದ ಮಹೇಶ್, ನವೀನ, ದಿನೇಶ್, ಮಹದೇವಸ್ವಾಮಿ ಇನ್ನಿತರರಿದ್ದರು.



ಕಂಪಲಾಪುರದಲ್ಲಿ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಮೃತ್ತಿಕೆ ಸಂಗ್ರಹ ರಥಯಾತ್ರೆಗೆ ಗ್ರಾಪಂನಿಂದ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಮಮತ, ಪಿಡಿಓ ಪರಮೇಶ್, ಕಾರ್ಯದರ್ಶಿ ಸುಷ್ಮಾ, ಸುಮಿತ್ರ, ಸದಸ್ಯರಾದ ಶ್ರೀಪತಿ, ರಾಣಿ, ಶೀಲಾ, ರಮ್ಯ, ಸುಮ, ಪ್ರತಿಭಾ, ರವಿ, ಮುಖಂಡರಾದ ಎಂ.ರಮೇಶ್, ಕುಮಾರ್, ಪ್ರಕಾಶ್‌ಗೌಡ ಹಾಜರಿದ್ದರು.